# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 03, 2020

ಸಂಪುಟ : 47 ಸಂಚಿಕೆ : 114 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com



# ಮೊದಲನೇ ವರ್ಷದ ಪುಣ್ಯಸ್ಮರಣೆ



## ಶ್ರೀ ಫೂಲ್‌ಚಂದ್ ಷಾ

ಜನನ : 1942 - ಮರಣ : 2019

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು

ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಷಾ ಟಿವಿ ಸೆಂಟರ್

ಷಾ ರೇಡಿಯೋ ಎಲೆಕ್ಟ್ರಾನಿಕ್ಸ್

ಷಾ ಟೈಮ್ಸ್

ಶ್ರೀ ಷಾ ಟೈಮ್ಸ್

ಅರಿಹಂತ್ ಟೈಮ್ಸ್

ಅಂಬಾಲಾಲ್, ಆನಂದ್, ಆಶಿಶ್

ಸಮಸ್ತ ಸಿಬ್ಬಂದಿ ವರ್ಗ

# ಹರಪನಹಳ್ಳಿಯ ಎಪಿಎಂಸಿ ಕಚೇರಿ ಬಣ ಬಣ !





ಹರಪನಹಳ್ಳಿ, ಸೆ. 2- ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಚೇರಿಯಲ್ಲಿ ಸರ್ಕಾರ ಖಾಯಂಗೊಳಿಸಿದ ಸಿಬ್ಬಂದಿಗಳು ಒಬ್ಬರೂ ಇಲ್ಲದೆ ಕೆಲಸದ ಅವಧಿಯಲ್ಲಿ ಕಚೇರಿ ಬಣಗುಡುತ್ತಿದ್ದ ಪ್ರಸಂಗ ಬೆಳಕಿಗೆ ಬಂದಿದೆ.

ಪಟ್ಟಣದ ಕೊಟ್ಟೂರು ರಸ್ತೆಗೆ ಹೊಂದಿಕೊಂಡಿ ರುವ ಕೃಷಿ ಉತ್ಪನ್ನ ಮಾರುಕಟ್ಟೆಯು 1997ರಲ್ಲಿ ಉಪ ಮಾರುಕಟ್ಟೆ ದರ್ಜೆಯಿಂದ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ಪರಿವರ್ತನೆಗೊಂಡಿತು, ಈ ಮಾರುಕಟ್ಟೆ ಸಮಿತಿಯು 13 ಚುನಾಯಿತ ಹಾಗೂ 3 ಜನ ನಾಮನಿರ್ದೇಶನಗೊಂಡ ಒಟ್ಟು 16 ಜನ ನಿರ್ದೇಶಕರನ್ನು ಒಳಗೊಂಡ ಬೃಹತ್ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಇಲ್ಲಿ ಕೇವಲ 3 ಜನ ಸರ್ಕಾರದಿಂದ ನೇಮಕಗೊಂಡ ಸಿಬ್ಬಂದಿಯನ್ನು ಹೊಂದಿರುತ್ತದೆ. ಇದರ ಪೈಕಿ ಸರ್ಕಾರದ ನಿಯಮಗಳ ಪ್ರಕಾರ ಶೇ. 50ರಷ್ಟು ಸಿಬ್ಬಂದಿಯು ಕಚೇರಿಯಲ್ಲಿ ಹಾಜರಿರುವುದು ಕಡ್ಡಾಯವಾಗಿರುತ್ತದೆ.

ಅಂದರೆ ಒಂದೇ ದಿನ ಮೂವರು ಸಿಬ್ಬಂದಿಯ ಪೈಕಿ ಒಬ್ಬ ನೌಕರರಿಗೆ ಮಾತ್ರ ರಜೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಇನ್ನು ಉಳಿದ ಇಬ್ಬರು ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿರಬೇಕಾಗುತ್ತದೆ. ಈ ನಿಯ ಮಗಳನ್ನು ಗಾಳಿಗೆ ತೂರಿ ಒಬ್ಬ ಸಿಬ್ಬಂದಿಯೂ ಕರ್ತವ್ಯಕ್ಕೆ ಹಾಜರಾಗದೆ ಗೈರು ಹಾಜರಾಗಿ ಬೇಜವಾಬ್ದಾರಿತನವನ್ನು ಮೆರೆದಿದ್ದಾರೆ. ಉಳಿದ ಸಿಬ್ಬಂದಿಯು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪೈಕಿ ಕಾವಲುಗಾರ ಹುದ್ದೆಗೆ ನೇಮಕಗೊಂಡ ಪಕ್ಕೀರಪ್ಪ ಎಂಬ ವ್ಯಕ್ತಿ ಮಾತ್ರ ಹಾಜರಿದ್ದು, ಸಮಸ್ಯೆಯನ್ನು ಹೊತ್ತ ಬಂದ ರೈತರಿಗೆ ಸರಿಯಾದ ಮಾಹಿತಿ ನೀಡ ಬಲ್ಲನೇ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ವರದಿಗಾರನಾಗಿ ರೈತರ ದೂರಿನನ್ವಯ ಮಾಹಿತಿ ಕೇಳಲು ಹೋದ ಸಂದರ್ಭದಲ್ಲಿ ಕಚೇರಿ ಯ ಕುರ್ಚಿಗಳು ಖಾಲಿ ಇರುವುದನ್ನು ಕಂಡು ಸಿಬ್ಬಂ ದಿಗಳಲ್ಲಿದ ಕಚೇರಿಯನ್ನು ನೋಡಿ ಸಿಬ್ಬಂದಿಗಳ ಬಗ್ಗೆ ವಿಚಾರಿಸಿದಾಗ ಕಾವಲುಗಾರನು ಕಾರ್ಯದರ್ಶಿ ಯವರ ದೂರವಾಣಿ ಸಂಖ್ಯೆಯನ್ನು ನೀಡಿದನು.

ತಕ್ಷಣವೇ ಕಾರ್ಯದರ್ಶಿಯವರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ನಾನು ವೈಯಕ್ತಿಕ ಕೆಲಸ ನಿಮಿತ್ತವಾಗಿ ರಜೆ ಹಾಕಿರುತ್ತೇನೆ. ಉಳಿದ ಸಿಬ್ಬಂದಿಯು ಅವರವರ ಕೆಲಸ ನಿಮಿತ್ತ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ನೀವು ಮೊದಲೇ ಬರುವುದಾಗಿ ತಿಳಿಸಿದ್ದರೆ ನಾನೇ ಬರುತ್ತಿದ್ದೆ ಎಂಬ ಉಡಾಫೆ ಉತ್ತರ ನೀಡಿ ನಯವಾಗಿ ಜಾರಿಕೊಂಡು ಕಾರ್ಯದರ್ಶಿ ಎ.ಜಿ. ವೀರಣ್ಣ.

ಹೀಗಾದರೆ ರೈತರ ಪಾಡೇನು? ಇವರಿಗೆ ಸರ್ಕಾರ ಸಂಭಾವನೆ ನೀಡುತ್ತಿರುವುದು ಜನರ ಅಹ ವಾಲುಗಳನ್ನು ಬಗೆಹರಿಸಲೋ ಅಥವಾ ರಜೆ ಹಾಕಿ ಮಜಾ ಮಾಡಲೋ ಎಂಬುದನ್ನು ಸಂಬಂಧಪಟ್ಟ ಮೇಲಾಧಿಕಾರಿಗಳು ಸ್ಪಷ್ಟಪಡಿಸಬೇಕಾಗಿದೆ.

ಈ ವೇಳೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾಜಿ ಅಧ್ಯಕ್ಷ ಡಿ. ಜಂಬಣ್ಣ ಚಿಗಟೇರಿ ಮಾತನಾಡಿ, ಸರ್ಕಾರದ ನಿಯಮಾವಳಿ ಪ್ರಕಾರ ಮೂವರು ಸಿಬ್ಬಂದಗಿಳ ಪೈಕಿ ಇಬ್ಬರು ಸಿಬ್ಬಂದಿಗಳಾದರೂ ಹಾಜರಿರಬೇಕು. ನಾನು ಒಬ್ಬ ಸದಸ್ಯನಾಗಿ ರೈತರು ಅಹವಾಲುಗಳನ್ನು ಹೇಳಲು ಬಂದರೆ ಕಚೇರಿಯಲ್ಲಿ ಖಾಲಿ ಕುರ್ಚಿಗಳನ್ನು ಕಂಡು ದಿಗ್ಭ್ರಮೆಗೊಂಡೆ. ಪದೇ ಪದೇ ಈ ರೀತಿ ಆಗುತ್ತಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದರೂ ಯಾವ ಪ್ರಯೋಜನವಾಗಿಲ್ಲ. ಇದನ್ನು ಮೇಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕಿದೆ ಎಂದರು.

# ಇ-ಸಂಜೀವಿನಿ ಆ್ಯಪ್ ಬಳಸಿ ವೈದ್ಯರೊಂದಿಗೆ ವೀಡಿಯೊ ಮೂಲಕ ಸಂದರ್ಶಿಸಿ: ಜಿಲ್ಲಾಧಿಕಾರಿ

ದಾವಣಗೆರೆ, ಸೆ.2- ಕೋವಿಡ್-19 ಸಂದರ್ಭದಲ್ಲಿ ಸಾಮಾನ್ಯವಾಗಿ ಕೆಮ್ಮು, ಜ್ವರ, ಮತ್ತು ಇತರೆ ರೋಗಗಳಿಂದ ಬಳಲುತ್ತಿರುವವರು ಇ- ಸಂಜಿವಿನಿ ಆ್ಯಪ್ ಬಳಸಿ ವೈದ್ಯರೊಂದಿಗೆ ಸಂದರ್ಶಿಸಿ ಆರೋಗ್ಯದ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಕೊರೊನಾ ತಡೆಗಟ್ಟುವ ಸಲುವಾಗಿ ಭಾರತ ಸರ್ಕಾರವು ಸಾರ್ವಜನಿಕರಿಗೆ ಮನೆಯಲ್ಲಿಯೇ ಇದ್ದು, ಸುರಕ್ಷಿತವಾಗಿ ಚಿಕಿತ್ಸೆ ಪಡೆಯುವಂತೆ ಕೇಂದ್ರ ಆರೋಗ್ಯ ಮಂತ್ರಾಲಯವು ರಾಷ್ಟ್ರೀಯ ಟೆಲಿ ಸಮಾಲೋಚನ ಸೇವೆ ಎಂಬ ಹೆಸರಿನಲ್ಲಿ ಈ ಆ್ಯಪ್ ಸಿದ್ದ ಪಡಿಸಲಾಗಿದೆ.

ಆಸ್ಪತ್ರೆಗೆ ತೆರಳಲು ಸಾಧ್ಯವಾಗದಿದ್ದವರು ಮೊಬೈಲ್ ಮೂಲಕ ವೈದ್ಯರು ತಮಗೆ ಚಿಕಿತ್ಸೆಯನ್ನು ನೀಡುವ ಅವಕಾಶವನ್ನು ಇ- ಸಂಜೀವಿನಿ ಆಪ್ ಮೂಲಕ ವೀಡಿಯೊ ಕಾಲ್ ಮೂಲಕ ವೈದ್ಯರನ್ನು ಸಂಪರ್ಕಿಸಬಹುದು.

ಇ- ಸಂಜೀವಿನಿ ಆ್ಯಪ್ ಬಳಸುವ ವಿಧಾನ ಟೆಲಿ ಸಮಾಲೋಚನೆ ಸೇವೆ ಪಡೆಯಲು ಮೊಬೈಲ್‌ನಲ್ಲಿ ಪ್ಲೇ ಸ್ಟೋರ್ ಅಥವಾ ಕಂಪ್ಯೂಟರ್ ಗೂಗಲ್‌ನಲ್ಲಿ ಈ ಸಂಜೀವಿನಿ ಓ.ಪಿ.ಡಿ ಎಂದು ನಮೂದಿಸಬೇಕು. ಆಗ ನಿಮಗೊಂದು ಕೇಂದ್ರ ಸಚಿವಾಲಯದ ಮುಖಪುಟ ತೆರೆದುಕೊಳ್ಳುತ್ತದೆ.

ನಂತರ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು, ನಂತರರ ಇದರಲ್ಲಿ ಪೇಷೆಂಟ್ ರಿಜಿಸ್ಟ್ರೇಷನ್ ನಲ್ಲಿ ನಿಮ್ಮ ಮೊಬೈಲ್ ನಂಬರ್ ನಮೂದಿಸಿದರೆ ನಿಮಗೊಂದು ಓಟಿಪಿ ಸಂಖ್ಯೆ ಬರಲಿದೆ. ಆ ಓಟಿಪಿ ಸಂಖ್ಯೆಯನ್ನು ನಮೂದಿಸಿದರೆ ರಿಜಿಸ್ಟ್ರೇಷನ್ ಅಪ್ಲಿಕೇಶನ್ ತರೆದುಕೊಳ್ಳುತ್ತದೆ ಇದರಲ್ಲಿ ರೋಗಿಯ ಹೆಸರು ಲಿಂಗ, ವಯಸ್ಸು, ಮೊಬೈಲ್‌ನಂಬರ್, ವಿಳಾಸವನ್ನು ನಮೂದಿಸಿ ಲಾಗಿನ್ ಆಗಬೇಕು. ನಂತರ ನಿಮಗೊಂದು ಟೋಕನ್ ನಂಬರ್ ಬರಲಿದೆ. ಈ ಟೋಕನ್ ನಂಬರ್ ನೀಡಿ ವೈದ್ಯರನ್ನು ವೀಡಿಯೊ ಕಾಲ್ ಮೂಲಕ ಸಂಪರ್ಕಿಸಬಹುದಾಗಿದೆ.

ಸೇವೆಯು ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಲಭ್ಯವಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

# ಜಗಳೂರು : ನೀರು ತುಂಬಿಸುವ ಯೋಜನೆ ಏರ್ ವಿಷಲ್ ಟ್ಯಾಂಕ್ ನಿರ್ಮಾಣಕ್ಕೆ ಒತ್ತಾಯ

ಜಗಳೂರು, ಸೆ.2 - ತಾಲ್ಲೂಕಿನ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಏರ್ ವಿಷಲ್ ಟ್ಯಾಂಕ್ ನಿರ್ಮಾಣ ಮಾಡಬೇಕು ಎಂದು ಭದ್ರಾ ಮೇಲ್ದಂಡೆ ಯೋಜನೆ ತಜ್ಞರ ಸಮಿತಿ ಸದಸ್ಯ ಕೆ.ಬಿ.ಕಲ್ಲೇರುದ್ರೇಶ್ ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪೈಪ್ ಲೈನ್ ಮಾರ್ಗ ಮಧ್ಯೆ 3-4 ಕಿಲೋ ಮೀಟರ್ ಒಂದರಂತೆ ಏರ್ ವಿಷಲ್ ಟ್ಯಾಂಕ್ ನಿರ್ಮಾಣ ಮಾಡಿದರೆ ವಿದ್ಯುತ್ ನಿಲುಗಡೆ ಆದಾಗ ನೀರು ಟ್ಯಾಂಕ್ ಗೆ ಸಂಗ್ರಹವಾಗಿ ಉಳಿತಾಯವಾಗಲಿದೆ ಎಂದರು. ಇದಕ್ಕಾಗಿ 15 ರಿಂದ 20 ಕೋಟಿ ರೂ. ವೆಚ್ಚವಾಗಲಿದೆ. ಯೋಜನೆಯ ಡಿ.ಪಿ.ಆರ್ ನಲ್ಲಿ ಏರ್ ವಿಷಲ್‌ಗೆ ಮಾತ್ರ ಅವಕಾಶವಿದೆ. ಇದರ ಜೊತೆಗೆ ಟ್ಯಾಂಕನ್ನು ಹರಿಹರ, ಚಟ್ನಹಳ್ಳಿ ಸಮೀಪಗಳಲ್ಲಿ ನಿರ್ಮಿಸುವಂತೆ ನೀರಾವರಿ ಸಚಿವರಿಗೆ ಮನವಿ ಮಾಡಲಾಗಿದೆ ಎಂದರು. ಭದ್ರಾ ಮೇಲ್ದಂಡೆ ಯೋಜನೆ 2.4 ಟಿ.ಎಂ.ಸಿ. ಜಗಳೂರು ಶಾಖಾ ಕಾಲುವೆಗೆ ನೀರು ಹಾಯಿಸಲು ಗೆಜೆಟ್ ನೋಟಿಫಿಕೇಷನ್ ಸದ್ಯದಲ್ಲಿಯೇ ಆದೇಶ ಆಗುವ ನಿರೀಕ್ಷೆಯಿದೆ ಎಂದರು.

ಈ ಸಂಧರ್ಭದಲ್ಲಿ ರೈತ ಮುಖಂಡರಾದ ನಾಗನಗೌಡ್ರು, ಬಿಳಿಚೋಡು ರಂಗಸ್ವಾಮಿ. ಚಿಕ್ಕಣ್ಣ ಹಾಗೂ ಇತರರು ಇದ್ದರು.

## ನ್ಯಾಮತಿ : ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಸ್ಕಾಂ ನ್ಯಾಮತಿ ಉಪವಿಭಾಗದ ವ್ಯಾಪ್ತಿಗೆ ಬರುವ 66/11 ಕೆವಿ ನ್ಯಾಮತಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಎಲ್ಲಾ ಫೀಡರ್‌ಗಳ ದೋಷಪೂರಿತ ಬಸ್ ಬಾರ್‌ಗಳನ್ನು ಬದಲಾವಣೆ ಮಾಡುವ ಕೆಲಸವನ್ನು ಹಮ್ಮಿಕೊಂಡಿದ್ದು, ಸದರಿ ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸಮೀಪದ ಬೇರೆ ವಿವಿ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳಿಗೆ ಸಂಪರ್ಕ ನೀಡಲಾಗುವುದು. ಇಂದಿನಿಂದ ಇದೇ ದಿನಾಂಕ 12 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಬಹುದು ಎಂದು ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

## ನ್ಯಾಮತಿಗಿಂದು ಎಸಿಬಿ ಭೇಟಿ

ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ ದಾವಣಗೆರೆ ಇವರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ನ್ಯಾಮತಿ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ. ವಿವರಗಳಿಗೆ ದೂ. ಸಂ. 08192-236600, 94808 06284 ಗೆ ಸಂಪರ್ಕಿಸಬಹುದೆಂದು ಎಸಿಬಿ ಪೊಲೀಸ್ ಠಾಣೆ ಡಿವೈಎಸ್ಪಿ ಹೆಚ್.ಎಸ್. ಪರಮೇಶ್ವರಪ್ಪ ತಿಳಿಸಿದ್ದಾರೆ.

## ಮಾಜಿ ಸಚಿವ ಹೆಚ್.ಶಿವಪ್ಪ ಸಹೋದರ ಹನುಮಗೌಡ್ರು ನಿಧನ



ಹರಿಹರ, ಸೆ.2- ಸ್ಥಳೀಯ ಪಿಎಲ್ ಡಿ ಬ್ಯಾಂಕ್ ಮಾಜಿ ನಿರ್ದೇಶಕರೂ, ತಾಲ್ಲೂಕಿನ ಬನ್ನಿಕೋಡು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರೂ ಆದ ಹೆಚ್. ಹನುಮಗೌಡ್ರು ಇಂದು ಬೆಳಿಗ್ಗೆ ನಿಧನರಾದರು. ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಹನುಮಗೌಡ್ರು, ಮಾಜಿ ಸಚಿವ ದಿ. ಹೆಚ್. ಶಿವಪ್ಪ ಅವರ ಸಹೋದರ ಹಾಗೂ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರ ಚಿಕ್ಕಪ್ಪ.

ಪತ್ನಿ, ಮೂವರು ಸಹೋದರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ಬನ್ನಿಕೋಡು ಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ನಡೆಯಿತು.

ಹನುಮಗೌಡ್ರು ನಿಧನಕ್ಕೆ ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರ ಬಿ.ಜಿ. ಅಜಯ್ ಕುಮಾರ್, ದೂಡಾ ಮಾಜಿ ಸದಸ್ಯರಾದ ಮೋತಿ ಸೈಕಲ್ ಮಾರ್ಟ್ ನ ಟಿ.ಶಂಕ್ರಪ್ಪ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಕೆ.ಎನ್.ಹಳ್ಳಿ ಗ್ರಾಮದ ಗುಂಡೇರಿ ಹನುಮಂತಪ್ಪ



ಹರಿಹರ ತಾ. ಕಡಾರನಾಯ್ಕನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕರು, ಬಲಿಜ ಸಮಾಜದ ಮುಖಂಡರೂ, ವಿ.ಎಸ್.ಎಸ್.ಎನ್. ಮಾಜಿ ಅಧ್ಯಕ್ಷರೂ ಆದ ಗುಂಡೇರಿ ಹನುಮಂತಪ್ಪ (98) ಅವರು ದಿನಾಂಕ 2.09.2020 ರ ಬುಧವಾರ ಸಂಜೆ 5.10ಕ್ಕೆ ನಿಧನರಾದರು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.09.2020ರ ಗುರುವಾರ ಬೆಳಿಗ್ಗೆ 11.30ಕ್ಕೆ ಕೆ.ಎನ್. ಹಳ್ಳಿಯಲ್ಲಿ ನೆರವೇರಲಿದೆ.

## ತ್ಯಾವಣಗಿ : ಕಲಾವಿದರಿಗೆ ಫುಡ್ ಕಿಟ್ ವಿತರಣೆ




ದಾವಣಗೆರೆ, ಸೆ.2- ತಾಲ್ಲೂಕಿನ ತ್ಯಾವಣಗಿ ಗ್ರಾಮದ ನಲ್ಕುದರೆ ಹೋಬಳಿಯಲ್ಲಿ ನೆಲೆಸಿರುವ ರಂಗಭೂಮಿ ಕಲಾವಿದರಿಗೆ ದಾವಣಗೆರೆ ಸೇವಾ ಭಾರತಿ ಮತ್ತು ಸಂಸ್ಕಾರ ಭಾರತಿ ವತಿಯಿಂದ 12 ಕುಟುಂಬಕ್ಕೆ ಆಹಾರ ಪದಾರ್ಥಗಳನ್ನು ರಮೇಶ್ ಸೇವಾ ಭಾರತಿ ಮತ್ತು ಮಹಾಲಿಂಗಪ್ಪ ಸಂಸ್ಕಾರ ಭಾರತಿ ಪರವಾಗಿ ಕಲಾವಿದರ ಕುಟುಂಬಗಳಿಗೆ ವಿತರಿಸಲಾಯಿತು.

## ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಣೆ



ಹರಿಹರ, ಸೆ.2- ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹೊಳೆಸಿರಿಗೆರೆ ಶ್ರೀಪೀಠದ ಸದ್ಭಕ್ತರ ಅಪೇಕ್ಷೆಯಂತೆ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಣೆಗೈದ ಸ್ಮರಣಾರ್ಥವಾಗಿ ಕಲ್ಪವೃಕ್ಷ ಸಸಿಯನ್ನು ನೆಟ್ಟು ಸಾಮೂಹಿಕವಾಗಿ ಸರ್ವರೂ ಬುತ್ತಿ ಪ್ರಸಾದ ಸ್ವೀಕರಿಸಿದರು.

## ಅತಿಕ್ರಮ ಕಟ್ಟಡ ತೆರವಿಗೆ ಮನವಿ

ರಾಣೇಬೆನ್ನೂರು, ಸೆ. 2 - ಇಲ್ಲಿನ ನಾಡಿಗೇರ ಓಣಿಯ ಕರಿಯಮ್ಮದೇವಸ್ಥಾನದ ಬಳಿ ಅತಿಕ್ರಮವಾಗಿ ನಿರ್ಮಿಸಿರುವ ಕಟ್ಟಡವನ್ನು ನೆಲಸಮಗೊಳಿಸಿ ರಸ್ತೆಯಲ್ಲಿ ಸಂಚರಿಸಲು ಹಾಗೂ ದೇವಸ್ಥಾನಕ್ಕೆ ತೆರಳುವ ಭಕ್ತರಿಗೆ ಅನುಕೂಲ ಮಾಡಿಕೊಡುವಂತೆ ಅಲ್ಲಿನ ನಿವಾಸಿಗಳಾದ ಶಿವಾನಂದ ಮಂಥಗೊಂಡರ, ಬಸಪ್ಪ ಐರಣಿ, ಸಂಜಯಕುಮಾರ ಐರಣಿ ಮೌನ ಮೆರವಣಿಗೆ ಮೂಲಕ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

# ಕೈಲಾಸ ಶಿವಗಣಾರಾಧನೆ



ಜನನ: 02-06-1963

ಮರಣ: 27-08-2020

ನನ್ನ ಅಣ್ಣನ ಮಗನಾದ

**ಶ್ರೀ ಜಗನ್ನಾಥ ಜಿ. ಪಾಟೀಲ**

ದೇವರಗುಡ್ಡ ರಸ್ತೆ, ರಾಣೇಬೆನ್ನೂರ

ಇವರು ದಿನಾಂಕ 27-08-2020ನೇ ಗುರುವಾರ ಮಧ್ಯಾಹ್ನ 1-00 ಗಂಟೆಗೆ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ತನ್ನಿಮಿತ್ಯ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 04-09-2020ನೇ ಶುಕ್ರವಾರ ಮಧ್ಯಾಹ್ನ 12-30ಕ್ಕೆ 'ರಾಣೇಬೆನ್ನೂರಿನ ದೇವರಗುಡ್ಡ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಸ್ಥಾನದ ಆವರಣ'ದಲ್ಲಿ** ನೆರವೇರಿಸಲಾಗುವುದು. ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

"ಕಣ್ಣು ತೆರೆಯುವುದೇ ಜನನ, ಕಣ್ಣು ಮುಚ್ಚುವುದೇ ಮರಣ,
ಕಣ್ಣು ಮಿಟುಕಿಸುವುದೇ ಜೀವನ,
ಅಂತಹ ಜೀವನದಲ್ಲಿ ಬಿಟ್ಟು ಹೋದ ಆದರ್ಶ ಗುಣಗಳೇ ನಮಗೆ ದಾರಿದೀಪವಾಗಲಿ"


ದುಃಖತಪ್ತರು

**ಚಿಕ್ಕಪ್ಪ: ಡಾ|| ಬಿ.ಜಿ. ಪಾಟೀಲ**

**ಧರ್ಮಪತ್ನಿ: ನಾಗರತ್ನ ಜಿ. ಪಾಟೀಲ**

**ತಮ್ಮ : ಶ್ರೀ ಶಿವನಗೌಡ ಜಿ. ಪಾಟೀಲ ಹಾಗೂ ಬಂಧು–ಮಿತ್ರರು.**

## ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ಬಿ.ಡಿ. ತಿಪ್ಪೇಸ್ವಾಮಿ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 11ನೇ ಕ್ರಾಸ್ #1898/6ರ ವಾಸಿ ದಿ|| ಬಿ.ಎಂ. ದೊಡ್ಡಣ್ಣ ಅವರ ಪುತ್ರ, ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ **ಶ್ರೀ ಬಿ.ಡಿ. ತಿಪ್ಪೇಸ್ವಾಮಿ** ಅವರು ದಿನಾಂಕ 02.09.2020ರ ಬುಧವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2020ರ ಶುಕ್ರವಾರ ಮಧ್ಯಾಹ್ನ ದಾವಣಗೆರೆಯಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ, ಮೊ. : 94485 88987

## ಎಂ.ಎಸ್. ಅಂಜನಿ ಪ್ರಸಾದ್ ನಿಧನ




ದಾವಣಗೆರೆ ಕೆ.ಬಿ. ಬಡಾವಣೆ, ಕೆನರಾ ಬ್ಯಾಂಕ್ ಎದುರಿನ ನಿವಾಸಿ, ಇಂಡಿಯನ್ ಬ್ಯಾಂಕ್ ನಿವೃತ್ತ ನೌಕರರಾದ **ಎಂ.ಎಸ್. ಅಂಜನಿ ಪ್ರಸಾದ್** (62) ಇವರು ದಿ.: 01.09.2020ರ ಮಂಗಳವಾರ ಬೆಳಗಿನ ಜಾವ 4.30ಕ್ಕೆ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ತಾಯಿ, ಪತ್ನಿ, ಇಬ್ಬರು ಗಂಡು ಮಕ್ಕಳು, ಸೊಸೆ, ತಮ್ಮಂದಿರು, ತಂಗಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ.: 01.09.2020ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ

**M/s ಗುಪ್ತ ಏಜೆನ್ಸಿ**

ಹೊಲಿಗೆ ಯಂತ್ರ ವ್ಯಾಪಾರಿಗಳು, ಮಂಡಿಪೇಟೆ, ದಾವಣಗೆರೆ.

## ಭದ್ರಾವತಿಯ ಮಾಜಿ ಶಾಸಕ ಅಪ್ಪಾಜಿ ಗೌಡ ನಿಧನ



ಭದ್ರಾವತಿ, ಸೆ.2- ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಮಾಜಿ ಶಾಸಕ ಎಂ.ಜೆ. ಅಪ್ಪಾಜಿ ಗೌಡ ಅವರು ಇಂದು ರಾತ್ರಿ 11.15ಕ್ಕೆ ನಿಧನರಾದರು.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಪ್ಪಾಜಿ ಗೌಡ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿತ್ತು ಎಂದು ಹೇಳಲಾಗಿದೆ. 1994ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದ ಅವರು, ಸತತ ಮೂರು ಬಾರಿ ಶಾಸಕರಾಗಿದ್ದರು.

## ನಾಗರಾಜಪ್ಪ ಭರಮಪ್ಪ ಹುಣಸೆಕಟ್ಟಿ ನಿಧನ



ರಾಣೇಬೆನ್ನೂರು, ಹಾಲಿ ದಾವಣಗೆರೆ ಶಂಕರ್ ವಿಹಾರ್ ಲೇಔಟ್ ವಾಸಿ,

**ನಾಗರಾಜಪ್ಪ ಭರಮಪ್ಪ ಹುಣಸೆಕಟ್ಟೆ** (65)

ಅವರು ದಿನಾಂಕ : 02.09.2020ರಂದು ಬುಧವಾರ ರಾತ್ರಿ 8.05ಕ್ಕೆ ನಿಧನರಾಗಿರುತ್ತಾರೆ. ಧರ್ಮಪತ್ನಿ,ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.09.2020 ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

**99169 33456, 97403 74958**

## ಕೈಲಾಸ ಶಿವಗಣಾರಾಧನೆ

ದಾವಣಗೆರೆ ತಾ|| ಐಗೂರು ಗ್ರಾಮದ ವಾಸಿ

**ಶ್ರೀ ಎಂ.ಬಿ. ಬಸವರಾಜಪ್ಪ** ಮಾಜಿ ಅಧ್ಯಕ್ಷರು, ಗ್ರಾ.ಪಂ. ಐಗೂರು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 31-08-2020ರ ಸೋಮವಾರ ಬೆಳಿಗ್ಗೆ 8 ಗಂಟೆಗೆ ನನ್ನ ಧರ್ಮಪತ್ನಿಯಾದ



ಜನನ 1965

ಜನನ 31-08-2020

**ಶ್ರೀಮತಿ ಸಾಕಮ್ಮನವರು**

ಶ್ರೀ ಎಂ.ಬಿ. ಬಸವರಾಜಪ್ಪ ಗ್ರಾ.ಪಂ. ಮಾಜಿ ಅಧ್ಯಕ್ಷರು ಇವರ ಧರ್ಮಪತ್ನಿ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 04–09–2020 ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಐಗೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಲಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ತಮ್ಮಲ್ಲಿ ಪ್ರಾರ್ಥನೆ.

ಇಂತಿ ದುಃಖತಪ್ತರು :– ಶ್ರೀ ಎಂ.ಬಿ. ಬಸವರಾಜಪ್ಪ ಗ್ರಾ.ಪಂ. ಮಾಜಿ ಅಧ್ಯಕ್ಷರು, ಐಗೂರು. ಶ್ರೀ ಎಂ.ಬಿ. ರಾಜಶೇಖರ್ ಬೆಸ್ಕಾಂ ಇಂಜಿನಿಯರ್, ಬೆಂಗಳೂರು, ಶ್ರೀಮತಿ ಮೇಘ ಮತ್ತು ಮಕ್ಕಳು. ಶ್ರೀಮತಿ ಎಂ.ಬಿ, ಜ್ಯೋತಿ, ಶ್ರೀ ಮಹೇಶ್, ಎಸ್.ಬಿ.ಐ ಮ್ಯಾನೇಜರ್, ಮೂಡಿಗೆರೆ ಮತ್ತು ಮಕ್ಕಳು. ಶ್ರೀ ಎಂ.ಬಿ.ಕೆಂಚವೀರಪ್ಪ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು, ಶ್ರೀ ಎಂ.ಬಿ. ನಾಗರಾಜಪ್ಪ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು ಮಾವಂದಿರು, ಅಳಿಯಂದಿರು ಮಠದ ವಂಶಸ್ಥರು ಹಾಗೂ ಬಂಧು–ಮಿತ್ರರು ಹಾಗೂ ಐಗೂರು ಗ್ರಾಮಸ್ಥರು.


ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 03, 2020

# ಆಜಾದ್ ನಗರ, ಬಾಷಾ ನಗರಗಳ ಮುಖ್ಯ ರಸ್ತೆ ಅಗಲೀಕರಣ ಶೀಘ್ರ



ದಾವಣಗೆರೆ, ಸೆ.2- ನಗರದ ಅಖ್ತರ್‌ರಜಾ ಸರ್ಕಲ್ ರಿಂಗ್ ರೋಡ್ ರಸ್ತೆಯಿಂದ ಅಹಮದ್ ನಗರ, ಭಾಷಾ ನಗರ, ಆಜಾದ್ ನಗರ ಮುಖ್ಯ ರಸ್ತೆಯ ಅಗಲೀಕರಣದ ಸಂಬಂಧ ಬುಧವಾರ ಜಿಲ್ಲಾಡಳಿತದ ತಂಡದಿಂದ ಸ್ಥಳ ಪರಿಶೀಲನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಸ್ಥಗಿತಗೊಂಡಿದ್ದ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಿಗೆ ಮತ್ತೆ ಚಾಲನೆ ನೀಡಲು ಸ್ಥಳ ಪರಿಶೀಲನೆ ನಡೆಸಲಾಗುತ್ತಿದೆ. ಸರ್ಕಾರದ ಮಾರ್ಗ ಸೂಚಿ ಅನ್ವಯ ಅತಿಕ್ರಮಣ, ಒತ್ತುವರಿ ಸರಿಪಡಿಸಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಹೇಳಿದರು.

> **ಸರ್ಕಾರದ ಮಾರ್ಗಸೂಚಿ ಅನ್ವಯ ಅತಿಕ್ರಮಣ, ಒತ್ತುವರಿ ಸರಿಪಡಿಸಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು.**
> **- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ**

ಸ್ಥಳೀಯ ಶಾಸಕರ ನೆರವಿನೊಂದಿಗೆ ಈ ಭಾಗದ ಕಾರ್ಪೊರೇಟರ್ ಹಾಗೂ ಧಾರ್ಮಿಕ ಮುಖಂಡರು ಸೇರಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದ ಜಿಲ್ಲಾಡಳಿತ ತಂಡದೊಂದಿಗೆ ಸ್ಥಳ ಪರಿಶೀಲನೆ ಮಾಡಲಾಗಿದೆ.

ಇದಾದ ಬಳಿಕ ಮೇಯರ್ ನೇತೃತ್ವದಲ್ಲಿ ಸಭೆ ನಡೆಸಲಾಗುತ್ತದೆ. ಈಗಾಗಲೇ ಮುಖಂಡರು, ಧಾರ್ಮಿಕ ಸಮಿತಿಯವರು ರಸ್ತೆ ಅಗಲೀಕರಣಕ್ಕೆ ಒತ್ತುವರಿ ತೆರವುಗೊಳಿಸಲು ಅಡ್ಡಿಯಿಲ್ಲ ಎಂದು ತಿಳಿಸಿದ್ದಾರೆ. ಇನ್ನೆರಡು ತಿಂಗಳಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಮೇಯರ್ ಬಿ.ಜಿ.ಅಜಯ್ ಕುಮಾರ್ ಮಾತನಾಡಿ, ಸುಮಾರು ಮೂವತ್ತು ವರ್ಷದಿಂದ ರಸ್ತೆ ಅಗಲೀಕರಣವಾಗದ ಹಿನ್ನೆಲೆಯಲ್ಲಿ ಈ ಭಾಗದ ಧಾರ್ಮಿಕ ಮುಖಂಡರು ಹಾಗೂ ಸಾಕಷ್ಟು (4ನೇ ಪುಟಕ್ಕೆ)

# ಚೀನಾದ ಪಬ್‌ಜೀ ಔಟ್

## ದೇಶದ ಭದ್ರತೆಗೆ ಅಪಾಯ ತರುವ 118 ಆಪ್‌ಗಳು ಬಂದ್



ನವದೆಹಲಿ, ಸೆ. 2 – ಖಾಸಗಿತನದ ಉಲ್ಲಂಘನೆ ಹಾಗೂ ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಕಾರಣ ನೀಡಿ ಕೇಂದ್ರ ಸರ್ಕಾರ ಪಬ್‌ಜಿ ಸೇರಿದಂತೆ ಚೀನಾದ ಜೊತೆ ಸಂಪರ್ಕ ಹೊಂದಿರುವ 118 ಆಪ್‌ಗಳ ಮೇಲೆ ನಿಷೇಧ ಹೇರಿದೆ.

ಇದರಿಂದಾಗಿ ಭಾರತದಲ್ಲಿ ನಿಷೇಧಗೊಂಡಿರುವ ಚೀನಾದ ಆಪ್‌ಗಳ ಸಂಖ್ಯೆ 224ಕ್ಕೆ ಏರಿಕೆಯಾಗಿದೆ.

ಬುಧವಾರ ನಿಷೇಧಕ್ಕೆ ಒಳಗಾಗಿರುವ ಆಪ್‌ಗಳಲ್ಲಿ ಬೈಡು, ಬೈಡು ಎಕ್ಸ್‌ಪ್ರೆಸ್ ಎಡಿಷನ್, ಅಲಿಪೇ, ಟೆನ್ಸೆಂಟ್ ವಾಚ್‌ಲಿಸ್ಟ್, ಫೇಸ್‌ಯು, ವಿಚಾಟ್ ರೀಡಿಂಗ್, ಗವರ್ನಮೆಂಟ್ ವಿಚಾಟ್, ಟೆನ್ಸೆಂಟ್ ವಿಯುನ್, ಆಪುಸ್ ಲಾಂಚರ್ ಪ್ರೋ, ಆಪುಸ್ ಸೆಕ್ಯೂರಿಟಿ, ಕಟ್ ಕಟ್, ಶಿವೋಮಿಯ ಶೇರ್‌ಸೇವ್ ಹಾಗೂ ಕ್ಯಾಮ್‌ಕಾರ್ಡ್‌ಗಳು ಸೇರಿವೆ.

ದೇಶದ ಸಮಗ್ರತೆ ಹಾಗೂ ಸಾರ್ವಭೌಮತ್ವ, ದೇಶದ ರಕ್ಷಣೆ, ಭದ್ರತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವ 118 ಆಪ್‌ಗಳನ್ನು ನಿಷೇಧಿಸಿರುವುದಾಗಿ ಕೇಂದ್ರ ಸರ್ಕಾರದ ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ಲಡಾಖ್‌ನಲ್ಲಿ ಚೀನಾ ಹೊಸ ಸಂಘರ್ಷಕ್ಕೆ ಕಾಲು ಕೆದರಿರುವ ನಡುವೆ ನಿಷೇಧಕ್ಕೆ ಆದೇಶ ಹೊರಡಿಸಲಾಗಿದೆ.

ಅಂಡ್ರಾಯ್ಡ್ ಹಾಗೂ ಐಒಎಸ್ ವೇದಿಕೆಗಳಲ್ಲಿ ಲಭ್ಯವಿರುವ ಈ ಆಪ್‌ಗಳು ಮಾಹಿತಿ ಕದಿಯುತ್ತಿರುವ ಹಾಗೂ ಭಾರತದ ಹೊರಗೆ ಇರುವ ಸರ್ವರ್‌ಗಳಿಗೆ ಮಾಹಿತಿ ರವಾನಿಸುತ್ತಿರುವ ಬಗ್ಗೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ ಹಲವಾರು ದೂರುಗಳು ಬಂದಿರುವುದನ್ನು ಉಲ್ಲೇಖಿಸಲಾಗಿದೆ.

ಭಾರತದ ರಕ್ಷಣೆ ಹಾಗೂ ಭದ್ರತೆಗೆ ವಿರುದ್ಧವಾಗಿ ಮಾಹಿತಿಯನ್ನು ಈ ಆಪ್‌ಗಳು ಸಂಗ್ರಹಿಸುತ್ತಿವೆ. ಇದು ಅಂತಿಮವಾಗಿ ಭಾರತದ ಸಮಗ್ರತೆ ಹಾಗೂ ಸಾರ್ವಭೌಮತ್ವದ ಮೇಲೆ ಪರಿಣಾಮ ಬೀರುತ್ತದೆ. ಈ ಬಗ್ಗೆ ತುರ್ತು ಕ್ರಮದ ಅಗತ್ಯವಿದೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಹಿಂದೆ ಜೂನ್ 29ರಂದು ಕೇಂದ್ರ ಸರ್ಕಾರ ಅತ್ಯಂತ ಜನಪ್ರಿಯವಾದ ಟಿಕ್‌ಟಾಕ್ ಸೇರಿದಂತೆ 59 ಚೀನೀ ಆಪ್‌ಗಳ ಮೇಲೆ ನಿಷೇಧ ಹೇರಿತ್ತು. ನಂತರದಲ್ಲಿ ಇನ್ನೂ 47 ಆಪ್‌ಗಳ ಮೇಲೆ ನಿಷೇಧ ಹೇರಲಾಗಿತ್ತು. ಈ ಆಪ್‌ಗಳು ಮೊದಲು ನಿಷೇಧ ಹೇರಿದ್ದ ಆಪ್‌ಗಳ ಕ್ಲೋನ್ ಹಾಗೂ ಡೂಪ್ಲಿಕೇಟ್ ಆಗಿದ್ದವು.

ಲಡಾಖ್‌ನಲ್ಲಿ ಚೀನಾ ಪಡೆಗಳು ಕಾಲು ಕೆದರಿ ಸಂಘರ್ಷಕ್ಕೆ ಬಂದ ನಂತರ ಚೀನಾ ಆಪ್‌ಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಂಡಿತ್ತು.

ಈಗ ಬುಧವಾರದಂದು ಮಾಹಿತಿ ತಂತ್ರಜ್ಞಾನ ಇಲಾಖೆಯು ಮಾಹಿತಿ ತಂತ್ರಜ್ಞಾನ ಕಾಯ್ದೆಯ 69ಎ ಸೆಕ್ಷನ್ ಬಳಸಿಕೊಂಡು ನಿಷೇಧದ ಕ್ರಮ ತೆಗೆದುಕೊಂಡಿದೆ. ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ, ಗೃಹ ವ್ಯವಹಾರಗಳ ಸಚಿವಾಲಯಗಳೂ ಸಹ ಕುತ್ಸಿತ ಆಪ್‌ಗಳನ್ನು ತಡೆಯಲು ವಿಸ್ತೃತವಾದ ಶಿಫಾರಸ್ಸು ಸಲ್ಲಿಸಿವೆ. ಇದೇ ರೀತಿ, ಸಾರ್ವಜನಿಕವಾಗಿ (7ನೇ ಪುಟಕ್ಕೆ)

# ಜಿಎಸ್ಟಿ : 18,289 ಕೋಟಿ ರೂ. ಪರಿಹಾರಕ್ಕೆ ರಾಜ್ಯದ ನಿರ್ಧಾರ

ಬೆಂಗಳೂರು, ಸೆ. 2- ಜಿಎಸ್‌ಟಿ ಪರಿಹಾರದ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನೀಡಿದ ಎರಡು ಆಯ್ಕೆಗಳ ಮೌಲ್ಯಮಾಪನದ ನಂತರ ರಾಜ್ಯ ಸರ್ಕಾರವು ಆಯ್ಕೆ ಒಂದರ ಅಡಿಯಲ್ಲಿ ಒಟ್ಟು 18,289 ಕೋಟಿ ರೂ. ಪರಿಹಾರ ಪಡೆಯಲು ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ

ಜಿಎಸ್‌ಟಿ ಸಂಬಂಧ ಪ್ರತಿಪಕ್ಷದ ನಾಯಕರು ನೀಡಿದ ಹೇಳಿಕೆ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಪತ್ರಿಕಾ ಹೇಳಿಕೆ ನೀಡಿದ್ದು, ಪ್ರಸ್ತುತ ಹಣಕಾಸು ವರ್ಷದಲ್ಲಿ ಇದು ಸಹಕಾರಿಯಾಗಲಿದೆ ಎಂದಿದ್ದಾರೆ.

ಜಿಎಸ್‌ಟಿಯಲ್ಲಿ ಪಾವತಿಸಬೇಕಾದ ಸಂಪೂರ್ಣ ಪರಿಹಾರದ ಅರ್ಹತೆಗೆ ಸಂಬಂಧಿಸಿದಂತೆ ರಾಜ್ಯಗಳ ಹಕ್ಕುಗಳನ್ನು ಕೇಂದ್ರ ಸರ್ಕಾರವು ಗುರುತಿಸಿದೆ ಮತ್ತು ಅಂಗೀಕರಿಸಿದೆ ಎಂದೂ ಅವರು ಹೇಳಿದ್ದಾರೆ.

ಪರಿವರ್ತನೆ ಅವಧಿಯಲ್ಲಿ ಬಾಕಿಯಿರುವ ಪರಿಹಾರವನ್ನು 2022 ಆಚೆಗೆ ವಿಸ್ತರಿಸುವ ಮೂಲಕ ಪೂರೈಸಲಾಗುವುದು. ನಮ್ಮ ಆಯ್ಕೆ ಅಡಿಯಲ್ಲಿ ಕರ್ನಾಟಕಕ್ಕೆ ಒಟ್ಟು 18,289 ಕೋಟಿ ರೂ. ಪರಿಹಾರವಾಗಿರುತ್ತದೆ.

ಇದರಲ್ಲಿ 6965 ಕೋಟಿ ರೂ. ಸೆಸ್ ಸಂಗ್ರಹಿಸುವುದರಿಂದ ಬರುತ್ತದೆ. ಉಳಿದ 11,321 ಕೋಟಿ ರೂ. ಗಳಿಗೆ ಕರ್ನಾಟಕವು ವಿಶೇಷ ವಿಂಡೋ (4ನೇ ಪುಟಕ್ಕೆ)

# ಜಿಲ್ಲೆಯಲ್ಲಿ ದಶ ಸಹಸ್ರ ಕೊರೊನಾ ಸೋಂಕಿತರು



ದಾವಣಗೆರೆ ಸೆ. 2- ಜಿಲ್ಲೆಯಲ್ಲಿ ಬುಧವಾರ 321 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಹರಿಹರ ಬಿಕೆಎಂ ರಸ್ತೆಯ 70 ವರ್ಷದ ವೃದ್ಧ ಮತಪಟ್ಟಿದ್ದಾರೆ.

119 ಜನರು ಸೋಂಕಿನಿಂದ ಗುಣವಾಗಿ ಬಿಡುಗಡೆಯಾಗಿದ್ದಾರೆ. ಇಲ್ಲಿಯವರೆಗೆ 10097 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 7484 ಜನರು ಸೋಂಕು ಮುಕ್ತರಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 2417 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 138, ಹರಿಹರ 58, ಜಗಳೂರು 8, ಚನ್ನಗಿರಿ 57, ಹೊನ್ನಾಳಿ 50 ಹಾಗೂ ಹೊರ ಜಿಲ್ಲೆಯ 10 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

> **ಜಿಲ್ಲೆಯಲ್ಲಿ**
> **321 ಪಾಸಿಟಿವ್**
> **119 ಬಿಡುಗಡೆ**
> **1 ಸಾವು**
> **ಸಕ್ರಿಯ 2417**

# ‘ಮಿಷನ್ ಕರ್ಮಯೋಗಿ’ಗೆ ಒಪ್ಪಿಗೆ

## ವೃತ್ತಿ ಜೀವನದುದ್ದಕ್ಕೂ ಸಾಮರ್ಥ್ಯ ವೃದ್ಧಿಗೆ ಕೇಂದ್ರದ ಬೃಹತ್ ಕ್ರಮ

ನವದೆಹಲಿ, ಸೆ. 2 – ಸರ್ಕಾರಿ ಉದ್ಯೋಗಿಗಳು ಹೆಚ್ಚು ಕ್ರಿಯಾತ್ಮಕ, ಸಕ್ರಿಯ, ವೃತ್ತಿಪರ ಹಾಗೂ ತಂತ್ರಜ್ಞಾನ ಸಮರ್ಥರಾಗಲು ಕೇಂದ್ರ ಸಂಪುಟ ‘ಮಿಷನ್ ಕರ್ಮಯೋಗಿ’ಗೆ ಒಪ್ಪಿಗೆ ನೀಡಿದೆ. ಇದು ಅಧಿಕಾರಿ ವರ್ಗದ ಅತಿ ದೊಡ್ಡ ಸುಧಾರಣೆ ಎಂದು ಸರ್ಕಾರ ಬಣ್ಣಿಸಿದೆ.

ನಿಯಮಗಳ ಆಧರಿತ ಕಾರ್ಯ ನಿರ್ವಹಣೆಯಿಂದ ಪಾತ್ರಗಳನ್ನು ನಿರ್ವಹಿಸುವ ವ್ಯವಸ್ಥೆಗೆ ಬರುವ ಪ್ರಮುಖ ಉದ್ದೇಶದಿಂದ ಕರ್ಮಯೋಗಿ ಯೋಜನೆ ರೂಪಿಸಲಾಗಿದೆ. ಈ ಮೂಲಕ ಭಾರತದ ನಾಗರಿಕ ಸೇವಾ ಅಧಿಕಾರಿಗಳನ್ನು ಭವಿಷ್ಯದ ಅಗತ್ಯಕ್ಕೆ ರೂಪಿಸಲು ಉದ್ದೇಶಿಸಲಾಗಿದೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್, ಇದು ಅತಿ ದೊಡ್ಡ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯಾಗಿದೆ ಎಂದು ತಿಳಿಸಿದ್ದಾರೆ.

ಈ ಯೋಜನೆಯಲ್ಲಿ 46 ಲಕ್ಷ ಕೇಂದ್ರೀಯ ಉದ್ಯೋಗಿಗಳು ಬರಲಿದ್ದಾರೆ. ಇದಕ್ಕಾಗಿ 2020-21ರಿಂದ 2024-25ರವರೆಗೆ 510.86 ಕೋಟಿ ರೂ.ಗಳನ್ನು ಮಿಷನ್ ಕರ್ಮಯೋಗಿ ಇಲ್ಲವೇ ನಾಗರಿಕ ಸೇವೆಗಳ ಸಾಮರ್ಥ್ಯ ನಿರ್ಮಾಣ ರಾಷ್ಟ್ರೀಯ ಯೋಜನೆ (ಎನ್.ಪಿ.ಸಿ.ಎಸ್.ಸಿ.ಬಿ.) ಅಡಿಯಲ್ಲಿ ವೆಚ್ಚ ಮಾಡಲಾಗುವುದು ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಯೋಜನೆಗಾಗಿ ಸಾರ್ವಜನಿಕ ಮಾನವ ಸಂಪನ್ಮೂಲ (4ನೇ ಪುಟಕ್ಕೆ)

# ರಾಜ್ಯದಲ್ಲಿ ಮೂರ್ನಾಲ್ಕು ದಿನ ಮುಂಗಾರು ಚುರುಕು

ಬೆಂಗಳೂರು, ಸೆ. 2 - ರಾಜ್ಯದಲ್ಲಿ ಮುಂಗಾರು ಚುರುಕಾಗಿದ್ದು, ಒಳನಾಡಿನಲ್ಲಿ ಕಳೆದ 3 ದಿನಗಳಿಂದ ಉತ್ತಮ ಮಳೆಯಾಗುತ್ತಿದೆ.

ಇಂದು ಮಧ್ಯಾಹ್ನ ರಾಜಧಾನಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆಯಾಗಿದ್ದು ಜನರ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಯಿತು. ಕೆಲವು ಕಡೆ ಎಡಬಿಡದೆ ನಿರಂತರ ಜಿಟಿ ಜಿಟಿ ಮಳೆಯಾದ ವರದಿಯಾಗಿದ್ದು, ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಇನ್ನೂ ನಾಲ್ಕು ದಿನಗಳ ಕಾಲ ಇದೇ ರೀತಿ ಮಳೆ ಮುಂದುವರಿಯಲಿದೆ.

ಉತ್ತರದಿಂದ ದಕ್ಷಿಣಾಭಿಮುಖವಾಗಿ ಟರ್ಫ್ ನಿರ್ಮಾಣವಾಗಿದ್ದು, ಮಳೆ ಮುಂದುವರೆಯಲಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಜಿ.ಎಸ್. ಶ್ರೀನಿವಾಸರೆಡ್ಡಿ ತಿಳಿಸಿದ್ದಾರೆ. ಅಲ್ಲದೆ, ಬಂಗಾಳ (7ನೇ ಪುಟಕ್ಕೆ)

# ಟೆಸ್ಟ್ ಹೆಚ್ಚಿಸಿ ಪ್ರಯೋಜನವಿಲ್ಲ, ಸಾವು ತಡೆಯಿರಿ

## ಸಮುದಾಯಕ್ಕೆ ತಲುಪಿದ ಕೊರೊನಾ: ಪ್ರಧಾನ ಮಂತ್ರಿಗೆ ಆರೋಗ್ಯ ವಲಯದ ಪರಿಣಿತರ ಪತ್ರ

ನವದೆಹಲಿ, ಆ. 3 - ಸಣ್ಣ ಸಣ್ಣ ನಗರಗಳು ಹಾಗೂ ಗ್ರಾಮೀಣ ಭಾಗಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗಿ ಕಂಡು ಬರುತ್ತಿರುವುದು, ಸೋಂಕು ಸಮುದಾಯ ಮಟ್ಟದಲ್ಲಿ ಹರಡಿರುವುದನ್ನು ತೋರಿಸುತ್ತದೆ. ಈ ಹಂತದಲ್ಲಿ ಟೆಸ್ಟ್ ಹೆಚ್ಚಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದರ ಬದಲು ಸಾವುಗಳನ್ನು ತಡೆಗಟ್ಟುವ ಕಡೆ ಗಮನ ಹರಿಸಬೇಕೆಂದು ಆರೋಗ್ಯ ವಲಯದ ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ.

ಎಐಐಎಂಎಸ್ ಹಾಗೂ ಐ.ಸಿ.ಎಂ.ಆರ್. ರಾಷ್ಟ್ರೀಯ ಕಾರ್ಯಪಡೆಯ ವೈದ್ಯರೂ ಸೇರಿದಂತೆ ಪರಿಣಿತರು ಈ ಬಗ್ಗೆ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು, ಸಮುದಾಯದ ಹಂತದಲ್ಲಿ ಸೋಂಕು ಹರಡಿದ ಮೇಲೆ ಸೋಂಕಿತರ ‘ಪತ್ತೆ ಮಾಡಿ, ಪರೀಕ್ಷಿಸಿ, ಪ್ರತ್ಯೇಕಿಸಿ ಹಾಗೂ ಚಿಕಿತ್ಸೆ ನೀಡಿ’ ಎಂಬ ಸೂತ್ರ ಫಲ ನೀಡದು ಎಂದಿದ್ದಾರೆ. ದೇಶದ ಹಲವು ಭಾಗಗಳಲ್ಲಿ ನಡೆಸಲಾದ ಸೆರೋ - ಸರ್ವೈಲೆನ್ಸ್ ವರದಿಗಳನ್ನು ಪರಿಗಣಿಸಿದಾಗ ಒಟ್ಟು ಸೋಂಕಿತರ ಶೇ.5ಕ್ಕೂ ಕಡಿಮೆ ಜನರನ್ನು ಮಾತ್ರ ಪರೀಕ್ಷೆಯಿಂದ ಪತ್ತೆ ಮಾಡಲು ಸಾಧ್ಯವಾಗಿದೆ ಎಂಬುದು (4ನೇ ಪುಟಕ್ಕೆ)

### ಟೆಸ್ಟ್ ಕಡಿಮೆ, ಸಾವೂ ಕಡಿಮೆ



**ಟೆಸ್ಟ್‌ಗಳನ್ನು ಹೆಚ್ಚಿಸುವುದರಿಂದ ಕೊರೊನಾ ಸಾವುಗಳನ್ನು ತಡೆಯಲು ಸಾಧ್ಯವಾಗದು ಎಂಬುದನ್ನು ಇತರೆ ದೇಶಗಳ ಅನುಭವ ತಿಳಿಸುತ್ತದೆ ಎಂದು ಆರೋಗ್ಯ ವಲಯದ ಪರಿಣಿತರು ಹೇಳಿದ್ದಾರೆ. ಮತ್ತೊಂದೆಡೆ ಜಪಾನ್, ಶ್ರೀಲಂಕಾಗಳು ಅತಿ ಕಡಿಮೆ ಪರೀಕ್ಷೆ ನಡೆಸಿದರೂ ಸಹ, ಕಡಿಮೆ ಸಾವುಗಳನ್ನು ಕಂಡಿವೆ ಎಂದು ಪರಿಣಿತರು ಹೇಳಿದ್ದಾರೆ. ಮತ್ತೊಂದೆಡೆ ಇತರೆ ಕೆಲ ದೇಶಗಳು ವ್ಯಾಪಕ ಪರೀಕ್ಷೆಗೆ ಮುಂದಾದರೂ ಸಹ ಸಾವು ಹಾಗೂ ಸೋಂಕು ಹರಡುವಿಕೆ ತಡೆಯಲು ಸಾಧ್ಯವಾಗಿಲ್ಲ ಎಂಬುದರತ್ತ ಅವರು ಗಮನ ಸೆಳೆದಿದ್ದಾರೆ.**


# ಅಂಗನವಾಡಿಗಳ ಡಿಜಿಟಲೀಕರಣ; ಕಾರ್ಯಕರ್ತೆಯರಿಗೆ ಮೊಬೈಲ್

## ಜಿಲ್ಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮೇಲ್ವಿಚಾರಕರಿಗೆ 1,786 ಮೊಬೈಲ್ ವಿತರಣೆ

ದಾವಣಗೆರೆ, ಆ. 2 - ಜಿಲ್ಲೆಯ 1,723 ಅಂಗನವಾಡಿ ಕೇಂದ್ರಗಳಿನ್ನು ಡಿಜಿಟಲೀಕರಣಗೊಳ್ಳಲಿವೆ. ಕೇಂದ್ರಗಳ ಕಾರ್ಯ ನಿರ್ವಹಣೆ ಪೇಪರ್‌ಲೆಸ್ ಆಗಲಿದ್ದು, ಸಂಪೂರ್ಣ ಆನ್‌ಲೈನ್ ಮೂಲಕವೇ ಹಾಜರಾತಿ, ಮಾಹಿತಿ ಸಂಗ್ರಹಣೆ ಹಾಗೂ ಯೋಜನೆಗಳ ಉಸ್ತುವಾರಿ ನಡೆಯಲಿದೆ. ಇದಕ್ಕಾಗಿ ಜಿಲ್ಲೆಗೆ ಕೇಂದ್ರ ಸರ್ಕಾರದಿಂದ 1,786 ಮೊಬೈಲ್‌ಗಳನ್ನು ರವಾನಿಸಲಾಗಿದೆ.

ಕೇಂದ್ರ ಸರ್ಕಾರದ ಪೋಷಣ್ ಅಭಿಯಾನ್ ಯೋಜನೆಯಡಿ ಕಾರ್ಯಕರ್ತೆಯರು ಹಾಗೂ ಮೇಲ್ವಿಚಾರಕರಿಗೆ ಮೊಬೈಲ್‌ಗಳನ್ನು ವಿತರಿಸಲಾಗುತ್ತಿದೆ. ಯೋಜನೆ ಸಂಪೂರ್ಣ ಕೇಂದ್ರ ಸರ್ಕಾರದ ಅನುದಾನ ಹೊಂದಿದೆ. ಜಿಲ್ಲೆಗೆ ಈಗಾಗಲೇ ಮೊಬೈಲ್‌ಗಳು ಬಂದಿದ್ದು, ಬಿಎಸ್‌ಎನ್‌ಎಲ್ ಸಿಮ್ ನೀಡುವುದನ್ನು ನಿರೀಕ್ಷಿಸಲಾಗುತ್ತಿದೆ. ಸಿಮ್ ದೊರೆತ ತಕ್ಷಣವೇ ಮೊಬೈಲ್ ವಿತರಣೆಯಾಗಲಿದೆ.

ಮೊಬೈಲ್ ಜೊತೆಗೆ ಪವರ್ ಬ್ಯಾಂಕ್ ಮತ್ತಿತರೆ ಅಗತ್ಯ ಸಲಕರಣೆಗಳನ್ನೂ ನೀಡಲಾಗಿದೆ. ಈ ಮೊಬೈಲ್‌ನಿಂದಾಗಿ ಅಂಗನವಾಡಿ ಕಾರ್ಯಕರ್ತೆಯರು ಆನ್ ಲೈನ್ ಮೂಲಕವೇ ಸಭೆಗಳಲ್ಲಿ ಪಾಲ್ಗೊಳ್ಳ ಬಹುದಾಗಿದೆ. ಕೊರೊನಾ ಅವಧಿಯಲ್ಲಿ ಈ ರೀತಿಯ ಸೌಲಭ್ಯ ಹೆಚ್ಚು ಉಪಯುಕ್ತ ಹಾಗೂ ಸುರಕ್ಷಿತವೂ ಆಗಿರಲಿದೆ.



ಈ ಬಗ್ಗೆ ವಿವರ ನೀಡಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಹೆಚ್. ವಿಜಯ್‌ಕುಮಾರ್, ಈ ತಿಂಗಳಲ್ಲೇ ಸಿಮ್‌ಗಳು ಸಿಗುವ ನಿರೀಕ್ಷೆ ಇದೆ. ನಂತರ ಜನಪ್ರತಿನಿಧಿಗಳ ಜೊತೆ ಚರ್ಚಿಸಿ, ಮೊಬೈಲ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದವರು ತಿಳಿಸಿದ್ದಾರೆ.

ರಾಜ್ಯ ಮಟ್ಟದ ಟೆಂಡರ್ ಮೂಲಕ ಸ್ಯಾಮ್‌ಸಂಗ್ ಮೊಬೈಲ್‌ಗಳನ್ನು ಖರೀದಿಸಲಾಗಿದೆ. ಇವುಗಳಿಗೆ ‘ಸ್ನೇಹ’ ಎಂಬ ಆಪ್ ರೂಪಿಸಲಾಗಿದೆ. ಈ ಆಪ್ ಬಳಕೆ ಕುರಿತು ಕಾರ್ಯಕರ್ತೆಯರಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಡಿಜಿಟಲೀಕರಣದ ಯೋಜನೆ ನಿರ್ವಹಿಸಲು ತಂಡವೊಂದನ್ನು ರಚಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಗರ್ಭಿಣಿಯರು ಹಾಗೂ ಮಕ್ಕಳ ಆರೋಗ್ಯ, ಪೋಷಣೆಗಳು ಕಾರ್ಯಕರ್ತೆಯರ ಪ್ರಮುಖ ಜವಾಬ್ದಾರಿಗಳಾಗಿವೆ. ಮೊಬೈಲ್ ಮೂಲಕ ಈ ಕಾರ್ಯ ನಿರ್ವಹಣೆಗಳು ಸುಲಭವಾಗಲಿವೆ. ಈ ಮೊಬೈಲ್‌ಗಳು ಜಿಯೋ ಟ್ಯಾಗ್ ಆಗಿವೆ. ಹೀಗಾಗಿ ಅಂಗನವಾಡಿ ಚಟುವಟಿಕೆಗಳ ಮೇಲೆ ನಿರಂತರ ನಿಗಾ ಇರಲಿದೆ ಎಂದವರು ಹೇಳಿದ್ದಾರೆ.

ಅಂಗನವಾಡಿಯಲ್ಲಿ ಮಕ್ಕಳ ಹಾಜರಾತಿ, ಅವರ ಆರೋಗ್ಯ, ಬೆಳವಣಿಗೆ ಮುಂತಾದ ಮಾಹಿತಿಗಳನ್ನು ಮೊಬೈಲ್ ಮೂಲಕವೇ ಪಡೆಯಲಾಗುವುದು. ಗರ್ಭಿಣಿಯರ ಆರೋಗ್ಯ ತಪಾಸಣೆಯ ವಿವರ, ನೀಡಬೇಕಾದ ಚುಚ್ಚುಮದ್ದುಗಳ ವಿವರಗಳೂ ಮೊಬೈಲ್‌ನಲ್ಲಿರಲಿವೆ. ಕಾಲಾನುಕಾಲಕ್ಕೆ ಗರ್ಭಿಣಿಯರ ಬಗ್ಗೆ ತೆಗೆದುಕೊಳ್ಳಬೇಕಾದ ಕಾಳಜಿ ಬಗ್ಗೆ ಅಲಾರಾಂ ವ್ಯವಸ್ಥೆ ಇದೆ. ಹೀಗಾಗಿ ಗರ್ಭಿಣಿಯರಿಗೆ ಸೌಲಭ್ಯಗಳು ಸುಲಭವಾಗಿ ಸಿಗಲಿವೆ ಎಂದವರು ಹೇಳಿದ್ದಾರೆ.

ಪ್ರಧಾನ ಮಂತ್ರಿ ಮಾತೃ ವಂದನ (4ನೇ ಪುಟಕ್ಕೆ)

### ಮನೆ ಅಂಗಳದಲ್ಲೇ ಅಂಗನವಾಡಿ

**ಕೊರೊನಾ ಸಂದರ್ಭದಲ್ಲಿ ಮಕ್ಕಳು ಇದ್ದಲ್ಲಿಯೇ ಆರೈಕೆ ಹಾಗೂ ಆಟ - ಪಾಠಗಳಿಗೆ ‘ಮನೆ ಅಂಗಳದಲ್ಲೇ ಅಂಗನವಾಡಿ ಕೇಂದ್ರ’ ಎಂಬ ಯೋಜನೆ ಜಾರಿಗೆ ತರಲಾಗಿದೆ.**
**ಜಿಲ್ಲೆಯಲ್ಲಿ ಕಳೆದ ಆಗಸ್ಟ್ 20ರಿಂದ ಯೋಜನೆ ಜಾರಿಗೆ ಬಂದಿದೆ. ಇದರ ಅನ್ವಯ ಆಪ್ ಒಂದನ್ನು ರೂಪಿಸಲಾಗಿದೆ. ಈ ಆಪ್ ಮೂಲಕ ಮಕ್ಕಳ ಪೋಷಕರು ಮಕ್ಕಳನ್ನು ಆಟ - ಪಾಠದಲ್ಲಿ ಸುಲಭವಾಗಿ ತೊಡಗಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೆ.ಹೆಚ್. ವಿಜಯ್ ಕುಮಾರ್ ತಿಳಿಸಿದ್ದಾರೆ.**

# ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಪಿಂಚಣಿ ಸೌಲಭ್ಯ

ದಾವಣಗೆರೆ, ಸೆ.2- ಜಿಲ್ಲೆಯಲ್ಲಿನ ಕರ್ನಾಟಕ ಸರ್ಕಾರದ ಪಿಂಚಣಿದಾರರು, ಕುಟುಂಬ ಪಿಂಚಣಿದಾರರರು ಆಗಸ್ಟ್ ಮಾಹೆಯಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಪಿಂಚಣಿಯನ್ನು ಪಡೆಯಬಹುದಾಗಿದೆ.

ಸರ್ಕಾರದ ಆದೇಶದನ್ವಯ 5 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಿಂಚಣಿ ಸೌಲಭ್ಯ ಲಭ್ಯವಿದ್ದು, ಎಸ್‌ಬಿಐ ಬ್ಯಾಂಕ್‌ನಲ್ಲಿ ಪಡೆಯಬಹುದು. ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದವರು ಕೆನರಾ ಬ್ಯಾಂಕ್‌ನಿಂದ ಪಡೆಯಬಹುದು.

ವಿಜಯಾ ಬ್ಯಾಂಕ್, ದೇನಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ ಖಾತೆ ಹೊಂದಿದವರು ಬ್ಯಾಂಕ್ ಆಫ್ (4ನೇ ಪುಟಕ್ಕೆ)

# ಕೊರೊನಾ : ಸಾವು ಶೇ.1.76ಕ್ಕೆ ಇಳಿಕೆ

ನವದೆಹಲಿ, ಸೆ. 2 – ದೇಶದಲ್ಲಿ ಈಗ ಕೊರೊನಾ ಸೋಂಕಿದ್ದವರಲ್ಲಿ ಸಾವಿನ ಪ್ರಮಾಣ ಶೇ.1.76ಕ್ಕೆ ಇಳಿಕೆಯಾಗಿದೆ. ಜಾಗತಿಕ ಸರಾಸರಿ ಶೇ.3.3ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಜಗತ್ತಿನಲ್ಲಿ ಪ್ರತಿ ದಶಲಕ್ಷ ಜನಸಂಖ್ಯೆಗೆ ಸರಾಸರಿ ಕೊರೊನಾ ಸಾವುಗಳ ಸಂಖ್ಯೆ 110 ಆಗಿದೆ. ಭಾರತದಲ್ಲಿ ಇದು ದಶಲಕ್ಷ ಜನಸಂಖ್ಯೆಗೆ 48 ಆಗಿದೆ ಎಂದು ಸಚಿವಾಲಯ ತಿಳಿಸಿದೆ.

ಬುಧವಾರದಂದು 78,357 ಕೊರೊನಾ ಪ್ರಕರಣಗಳು ಕಂಡು ಬಂದಿದ್ದು, ಒಟ್ಟು ಸೋಂಕಿತರ ಸಂಖ್ಯೆ 37 ಲಕ್ಷದ ಗಡಿ ದಾಟಿದೆ. 29 ಲಕ್ಷ ಜನರು ಚೇತರಿಸಿಕೊಂಡಿದ್ದಾರೆ.

# ಇತರೆ ಸಮಾಜಗಳಿಗೆ ಪ್ರೇರಣೆಯಾದ ಜೈನ ಮಂದಿರದ ಕೋವಿಡ್ ಕೇರ್ ಸೆಂಟರ್



ದಾವಣಗೆರೆ, ಸೆ. 2- ದಿನೇ ದಿನೇ ಹೆಚ್ಚುತ್ತಿರುವ ಕೊರೊನಾ ಸೋಂಕಿತರಿಂದಾಗಿ ಆಸ್ಪತ್ರೆಗಳಲ್ಲಿ ಬೆಡ್ ಸಿಗದ ಸಮಸ್ಯೆಗಳಿಗೆ ಜೈನ ಸಮಾಜದವರು ಪರಿಹಾರ ಕಂಡುಕೊಂಡು ಇತರೆ ಸಮಾಜಗಳೂ ಸಹ ಈ ಬಗ್ಗೆ ಯೋಚಿಸುವಂತೆ ಮಾಡಿದ್ದಾರೆ.

ಹೌದು, ಶ್ರೀ ಸುಪಾರ್ಶ್ವನಾಥ ಜೈನ್ ಶ್ವೇತಂಬರ್ ಮೂರ್ತಿ ಪೂಜೆ ಸಂಘದ ನೇತೃತ್ವದಲ್ಲಿ ನಗರದ ಬಾಡಾ ಕ್ರಾಸ್ ಬಳಿ ಇರುವ ಜೈನ ಮಂದಿರದ ಸಭಾಂಗಣದಲ್ಲಿ 80 ಹಾಸಿಗೆಗಳ ಸುಸಜ್ಜಿತ ಕೋವಿಡ್ ಕೇರ್ ಸೆಂಟರ್ ತೆರೆಯಲಾಗಿದೆ.

ಜೈನ ಸಮಾಜದವರು ತಮ್ಮ ಸಮಾಜದವರ ಆರೋಗ್ಯ ರಕ್ಷಣೆಗಾಗಿ ಸುಸಜ್ಜಿತ ಕೋವಿಡ್ ಕೇರ್ ಸೆಂಟರ್ ತೆರೆದಿದ್ದು, ಕಳೆದ ಒಂದು ತಿಂಗಳಲ್ಲಿ ಈ ಕೋವಿಡ್ ಕೇರ್ ಸೆಂಟರ್‌ನಲ್ಲಿ 32 ಜನರಿಗೆ ಚಿಕಿತ್ಸೆ ನೀಡಲಾಗಿದ್ದು, 12 ಜನರು ಸೋಂಕು ಮುಕ್ತರಾಗಿ ಹೊರ ಬಂದಿದ್ದಾರೆ. ಸದ್ಯ 28 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಇಲಾಖೆಯ ಪರವಾನಿಗಿ ಪಡೆದು ತೆರೆದಿರುವ ಈ ಕೇಂದ್ರದಲ್ಲಿ ಪ್ರಾಥಮಿಕ ಹಂತದಲ್ಲಿ ಸೋಂಕು ಕಂಡ ಅಂದರೆ, ಶೀತ, ಕೆಮ್ಮು, ಜ್ವರ ಲಕ್ಷಣದೊಂದಿಗೆ ಕೋವಿಡ್ ಪಾಸಿಟಿವ್ ಬಂದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಜೈನ ಸಮುದಾಯದವರಿಗಾಗಿಯೇ ತೆರೆದ ಈ ವಿಶೇಷ ಕೋವಿಡ್ ಕೇರ್ ಸೆಂಟರ್ ಖಾಸಗಿ ಆಸ್ಪತ್ರೆಗಳನ್ನೂ ನಾಚಿಸುವಂತಹ ಸೌಕರ್ಯ ಹೊಂದಿದೆ. ಇಬ್ಬರು ತಜ್ಞ ವೈದ್ಯರು, ಐವರು ನರ್ಸ್, ಓರ್ವ ವ್ಯವಸ್ಥಾಪಕ, ಆಯಾ, ಸ್ವಚ್ಛತಾ ಕೆಲಸಗಾರರನ್ನು ಕೇಂದ್ರಕ್ಕೆ ಖಾಸಗಿಯಾಗಿ ನೇಮಿಸಿಕೊಳ್ಳಲಾಗಿದೆ.

ಆರಂಭದಲ್ಲಿ ಕೋವಿಡ್ 19 ಪಾಸಿಟಿವ್ ಬಂದ ಸಮಾಜದ ಇಬ್ಬರಿಗೆ ಬೆಡ್ ಹಾಗೂ ಆಕ್ಸಿಜನ್ ದೊರೆಯದ ಕಾರಣ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಪ್ರತ್ಯೇಕ ಕೋವಿಡ್ ಸೆಂಟರ್ ತೆರೆಯಲು ನಿರ್ಧರಿಸಲಾಯಿತು ಎನ್ನುತ್ತಾರೆ ಶ್ರೀ ಸುಪಾರ್ಶ್ವನಾಥ ಜೈನ್ ಶ್ವೇತಂಬರ್ ಮೂರ್ತಿ ಪೂಜೆ ಸಂಘದ ಕಾರ್ಯಕರ್ತ ರಾಜು ಭಂಡಾರಿ ತಿಳಿಸಿದ್ದಾರೆ

ಇಲ್ಲಿನ ವೈದ್ಯರು ಜಿಲ್ಲಾ ಆರೋಗ್ಯ ಇಲಾಖೆಯ ಮಾರ್ಗದರ್ಶನದಂತೆ ರೋಗಿಗಳಿಗೆ ವೈದ್ಯಕೀಯ ಸೇವೆ ನೀಡುತ್ತಿದ್ದಾರೆ. ಒಂದು ವೇಳೆ ರೋಗಿಗಳಿಗೆ ಬೇರೆ ತಜ್ಞ ವೈದ್ಯರ ಅಗತ್ಯಬಿದ್ದರೆ ಅವರನ್ನೂ ಸಹ ಕೇಂದ್ರಕ್ಕೆ ಕರೆಯಿಸಿ ಚಿಕಿತ್ಸೆ ಕೊಡಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ರಕ್ತ ಸೇರಿದಂತೆ ವಿವಿಧ ರೀತಿಯ ತಪಾಸಣೆಗಾಗಿ ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ದಾಖಲಾದ ರೋಗಿಗಳಿಗೆ ಬಹುತೇಕ ಎಲ್ಲಾ ರೀತಿಯ ವೈದ್ಯಕೀಯ ಚಿಕಿತ್ಸೆಗಳೂ ಇಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಲಾಗಿದೆ.

ವಿಶಾಲವಾದ ಕಟ್ಟಡದಲ್ಲಿ ಸಾಮಾಜಿಕ ಅಂತರಕ್ಕೆ ಧಕ್ಕೆ ಬಾರದಂತೆ 80 ಬೆಡ್‌ಗಳನ್ನು ಹಾಕಲಾಗಿದೆ. ಪ್ರತಿ ಬೆಡ್‌ಗೆ ಸೊಳ್ಳೆ ಪರದೆ ಅಳವಡಿಸಲಾಗಿದೆ. ಬಿಪಿ, ಶುಗರ್, ಪಲ್ಸ್ ಆಕ್ಸಿಮೀಟರ್ ತಪಾಸಣಾ ಯಂತ್ರಗಳೂ ಕೇಂದ್ರದಲ್ಲಿವೆ. ಆಕ್ಸಿಜನ್ ವ್ಯವಸ್ಥೆಗೂ ಪರವಾನಗಿ ಪಡೆದಿದ್ದು, ಸದಸ್ಯದಲ್ಲಿಯೇ ಆಕ್ಸಿಜನ್ ವ್ಯವಸ್ಥೆಯನ್ನೂ ಅಳವಡಿಸಲು ಸಿದ್ಧತೆ ನಡೆದಿದೆ.

ಚಿಕಿತ್ಸೆಗಾಗಿ ಕೇಂದ್ರಕ್ಕೆ ಬರುವ ಎಲ್ಲಾ ರೋಗಿಗಳಿಗೆ ಮಾಸ್ಕ್, ಹ್ಯಾಂಡ್ ಸ್ಯಾನಿಟೈಸರ್, ತಲೆಗೆ ಎಣ್ಣೆ, ಸೋಪು, ಟವೆಲ್, ಟೂತ್ ಬ್ರಷ್, ಪೇಸ್ಟ್ ಸೇರಿದಂತೆ ಅಗತ್ಯ ವಸ್ತುಗಳುಳ್ಳ ಸುರಕ್ಷತ ಕಿಟ್ ಕೊಡಲಾಗುತ್ತಿದೆ.

**ಅಧ್ಯಾತ್ಮವೂ ಉಂಟು:** ಚಿಕಿತ್ಸೆ ಜೊತೆಗೆ ರೋಗಿಗಳ ಮಾನಸಿಕ ಸ್ಥೈರ್ಯ ಹೆಚ್ಚಿಸಲು ಸಾಮಾಜಿಕ ಅಂತರ ಕಾಯ್ದುಕೊಂಡೇ ಭಜನೆ, ಧ್ಯಾನ, ಯೋಗದಂತಹ ಕಾರ್ಯಕ್ರಮಗಳನ್ನೂ ಈ ಕೋವಿಡ್ ಕೇಂದ್ರದಲ್ಲಿ ನಡೆಸಲಾಗುತ್ತಿದೆ.

ಆಯುಷ್ ಇಲಾಖೆಯಿಂದ ಪ್ರಮಾಣಿತ ಔಷಧೀಯ ಗಿಡಮೂಲಿಕೆಯ ಕಷಾಯ, ಡ್ರೈ ಫ್ರೂಟ್ಸ್, ಅರಿಶಿಣ ಮಿಶ್ರಿತ ಹಾಲು, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಪೋಷಕಾಂಶಯುಕ್ತ ಆಹಾರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ.

ಒಟ್ಟಾರೆಯಾಗಿ ಜೈನ ಸಂಘವು ತನ್ನ ಸಮುದಾಯದವರಿಗಾಗಿ ತೆರೆದ ಕೋವಿಡ್ ಸೆಂಟರ್ ಇತರೆ ಸಮುದಾಯದವರಿಗೂ ಪ್ರೇರಣೆಯಾಗಿದೆ.

ಶ್ರೀ ಸುಪಾರ್ಶ್ವನಾಥ ಜೈನ್ ಶ್ವೇತಂಬರ್ ಮೂರ್ತಿ ಪೂಜೆ ಸಂಘದ ಕಾರ್ಯಕರ್ತರಾದ ಅಜಿತ್ ಓಸ್ವಾಲ್, ಕಿಶೋರ್ ಬಿ., ವಿನೋದ್, ಮುಕೇಶ್, ರಮೇಶ್ ಮಾನವತ್, ಭರತ್, ಸುನಿಲ್ ಓಸ್ವಾಲ್, ಕಿಶೋರ್ ಬೋಟೆ, ರಾಜು ಭಂಡಾರಿ, ವಿನೋದ್ ಭಟ್ಟ ಕೋವಿಡ್ ಸೆಂಟರ್ ಸೇವೆಯಲ್ಲಿ ಸಕ್ರಿಯರಾಗಿದ್ದಾರೆ.

## ಭತ್ತದಲ್ಲಿ ಲಘು ಪೋಷಕಾಂಶ ಜಿಂಕ್ ಬಳಕೆ



ದಾವಣಗೆರೆ, ಸೆ.2- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇವರು ಚಂದ್ರನ ಹಳ್ಳಿ ಗ್ರಾಮದ ಸಂಯುಕ್ತಾಶ್ರಯದಲ್ಲಿ ಯಂತ್ರದ ಮುಖಾಂತರ ನಾಟಿ ಮಾಡಿದ ಭತ್ತದ ತಾಕುಗಳಿಗೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಗಳು ಭೇಟಿ ನೀಡಿದರು.

ಪ್ರಸ್ತುತ ಸಂದರ್ಭದಲ್ಲಿ ಬೆಳೆಗಳಿಗೆ ಜಿಂಕ್ ಅವಶ್ಯಕತೆಯಿದ್ದು, ಟಿಡಿಟಿಎ ಜಿಂಕ್ ಅನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ, ಜೊತೆಗೆ 13 0 45 ಐದು ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದರಿಂದ ಪೋಷಕಾಂಶಗಳ ನಿರ್ವಹಣೆ ಮಾಡುವುದರೊಂದಿಗೆ ಉತ್ತಮ ಇಳುವರಿ ಪಡೆಯಬಹುದು ಎಂದು ಕೇಂದ್ರದ ಮಣ್ಣು ವಿಜ್ಞಾನಿ ಹೆಚ್.ಎಂ.ಸಣ್ಣಗೌಡ್ರು ಸಲಹೆ ನೀಡಿದರು. ಭತ್ತದ ಮುಂಚೂಣಿ ಪ್ರಾತ್ಯಕ್ಷಿಕೆ ತಾಕುಗಳಿಗೆ ಕೇಂದ್ರದ ಹಿರಿಯ ವಿಜ್ಞಾನಿ ಗಳಾದ ಡಾಕ್ಟರ್ ದೇವರಾಜ್ ಟಿ. ಎನ್.ಮಲ್ಲಿಕಾರ್ಜುನ್, ರಘುರಾಜ್, ವಿಜಯಕುಮಾರ್ ಹಾಗೂ ಚಂದ್ರನ ಹಳ್ಳಿಯ ಪ್ರಗತಿಪರ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ರೈತರು ಭಾಗವಹಿಸಿದ್ದರು.

## ಪೊಲೀಸ್ ಇಲಾಖೆಗೆ ಸೋಂಕು ನಿವಾರಕ ಸ್ಯಾನಿಟೈಸರ್ ಸ್ಪ್ರೆಯರ್ ಕೊಡುಗೆ



ದಾವಣಗೆರೆ, ಸೆ.2- ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ವತಿಯಿಂದ ಸಿ ಎಸ್ ಆರ್ ಪ್ರೋಗ್ರಾಂ ಅಡಿಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆಗೆ 1 ಲಕ್ಷ ಮೌಲ್ಯದ 6 ಸೋಂಕು ನಿವಾರಕ ಸ್ಯಾನಿಟೈಸರ್ ಸ್ಪ್ರೆಯರ್ ಅನ್ನು ಕೊಡುಗೆಯಾಗಿ ನೀಡಲಾಯಿತು.

ಇಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಉಜ್ಜೀವನ್ ಬ್ಯಾಂಕ್‌ನ ವಿತರಣಾ ವ್ಯವಸ್ಥಾಪಕ ಶ್ರೀನಿವಾಸ ಮೂರ್ತಿ ಅವರು ಎಸ್ಪಿ ಹನುಮಂತರಾಯ ಅವರಿಗೆ ನೀಡಿದರು.

ಸ್ಪ್ರೆಯರ್ ಸ್ವೀಕರಿಸಿ ಮಾತನಾಡಿದ ಅವರು, ಬ್ಯಾಂಕಿನ ಎಲ್ಲಾ ಅಧಿಕಾರಿಗಳಿಗೆ ಧನ್ಯವಾದ ತಿಳಿಸಿ, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಇನ್ಸ್‌ಪೆಕ್ಟರ್ ಗಳ ಕಚೇರಿಗಳಿಗೆ ಈ ಸ್ಪ್ರೇಯರ್ ಗಳನ್ನು ನೀಡಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿವೈಎಸ್ಪಿ ಪ್ರಕಾಶ್, ಪೊಲೀಸ್ ಸಿಬ್ಬಂದಿಗಳು ಮತ್ತು ಕ್ಷೇತ್ರ ವ್ಯವಸ್ಥಾಪಕ ಮೊಯಿನುದ್ದೀನ್, ಬ್ರಾಂಚ್ ವ್ಯವಸ್ಥಾಪಕ ವಿನಾಯಕ, ವಿಶ್ವನಾಥ, ರಾಜಣ್ಣ, ಕಾರ್ಯಾಚರಣೆ ನಿರ್ವಾಹಕ ಮಂಜುನಾಥ್, ಪ್ರಾಣೇಶ್ ಮತ್ತು ಬ್ರಾಂಚ್ ನ ಸಿಬ್ಬಂದಿ ವರ್ಗದವರು ಇದ್ದರು.

## ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಿಂಚಣಿ

**(3ನೇ ಪುಟದಿಂದ)** ಬರೋಡದಲ್ಲಿ ಪಡೆಯಬಹುದಾಗಿದೆ. ಜೊತೆಗೆ ಕಾರ್ಪೊರೇಷನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಆಂಧ್ರ ಬ್ಯಾಂಕ್‌ಗಳಲ್ಲಿ ಪಿಂಚಣಿ ಪಡೆಯುತ್ತಿರುವವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಮಾತ್ರ ಪಿಂಚಣಿ ಸೌಲಭ್ಯ ಪಡೆಯಬಹುದು.

ಮೇಲ್ಕಂಡ ಬ್ಯಾಂಕ್‌ಗಳನ್ನು ಹೊರತುಪಡಿಸಿ ಉಳಿದ ಬ್ಯಾಂಕ್‌ಗಳಲ್ಲಿ ಪಿಂಚಣಿಯನ್ನು ಪಡೆಯುತ್ತಿರುವ ಪಿಂಚಣಿದಾರರು ಕೂಡಲೇ ತಮ್ಮ ಪಿಂಚಣಿಯನ್ನು ಮೇಲ್ಕಂಡ ಬ್ಯಾಂಕ್‌ಗಳಿಗೆ ವರ್ಗಾಯಿಸತಕ್ಕದ್ದು. ಆಗಸ್ಟ್-20 ರಿಂದ ಮೇಲ್ಕಂಡ ಬ್ಯಾಂಕ್‌ಗಳಲ್ಲಿ ಮಾತ್ರ ಪಿಂಚಣಿಯನ್ನು ಪಾವತಿಸಲಾಗುವುದು ಎಂದು ಜಿಲ್ಲಾ ಖಜಾನೆ ಉಪನಿರ್ದೇಶಕರು ತಿಳಿಸಿದ್ದಾರೆ.

## 'ಮಿಷನ್ ಕರ್ಮಯೋಗಿ'ಗೆ ಒಪ್ಪಿಗೆ

**(3ನೇ ಪುಟದಿಂದ)** ಮಂಡಳಿ ರಚಿಸಲಾಗುವುದು. ಇದಕ್ಕೆ ಪ್ರಧಾನ ಮಂತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಸಾರ್ವಜನಿಕ ವಲಯದ ಪ್ರಮುಖ ಮಾನವ ಸಂಪನ್ಮೂಲ ಪರಿಣಿತರು ಸದಸ್ಯರಾಗಲಿದ್ದಾರೆ. ಈ ಉದ್ದೇಶಕ್ಕಾಗಿ ಸಾಮರ್ಥ್ಯ ನಿರ್ಮಾಣ ಆಯೋಗ ಸಹ ರಚಿಸಲಾಗುವುದು.

ಉದ್ಯೋಗಿಗಳಿಗೆ ಆನ್‌ಲೈನ್ ಮೂಲಕ ತರಬೇತಿ ನೀಡಲು ವಿಶೇಷ ಉದ್ದೇಶದ ವಾಹಕವೊಂದನ್ನೂ ಸಹ ರೂಪಿಸಲಾಗುವುದು. ಇದಕ್ಕೆ ಸಂಪುಟ ಕಾರ್ಯದರ್ಶಿ ಮುಖ್ಯಸ್ಥರಾಗಲಿದ್ದಾರೆ.

ಕೇಂದ್ರ ಸರ್ಕಾರದ ನೌಕರರಿಗೆ ಜೀವನವಿಡೀ ನಿರಂತರ ಕಲಿಕೆ, ಇಲಾಖೆಗಳ ನಡುವಿನ ಅಂತರ ನಿವಾರಿಸಲು ಇರುವ ತೊಡಕುಗಳ ನಿವಾರಣೆ ಸೇರಿದಂತೆ ಹಲವಾರು ವಿಷಯಗಳಿಗೆ ಯೋಜನೆ ನೆರವಾಗಲಿದೆ.

ನೇಮಕಾತಿ ನಂತರದ ಅತಿ ದೊಡ್ಡ ಸುಧಾರಣೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ಇಲ್ಲಿ ಅಧಿಕಾರಿಗಳು ತಮ್ಮ ಸಾಮರ್ಥ್ಯ ಸುಧಾರಣೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ಜಾವಡೇಕರ್ ಹೇಳಿದ್ದಾರೆ.

## ಮುಖ್ಯ ರಸ್ತೆ ಅಗಲೀಕರಣ ಶೀಘ್ರ

**(3ನೇ ಪುಟದಿಂದ)** ಜನರು ಮನವಿ ಸಲ್ಲಿಸಿದ್ದರು. ಆದಷ್ಟು ಬೇಗ ರಸ್ತೆ ತೆರವುಗೊಳಿಸಿ 60 ಅಡಿ ರಸ್ತೆ ನಿರ್ಮಿಸಬೇಕು ಎಂಬುದು ಅವರ ಒತ್ತಾಯವಾಗಿತ್ತು. ಅದರಂತೆ ರಸ್ತೆ ಅಭಿವೃದ್ಧಿ ಪಡಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

ಮಹಾನಗರ ಪಾಲಿಕೆ ಇಂಜಿನಿಯರ್‌ಗಳು ಸರ್ವೇ ಮಾಡುತ್ತಿದ್ದಾರೆ. ನಂತರ ಯಾರ ಜಾಗ ಎಷ್ಟು ತೆರವುಗೊಳಿಸಬೇಕೆಂದು ಚರ್ಚಿಸಲಾಗುವುದು. ಬಳಿಕ ಶಾಸಕರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಕಾನೂನಿನಡಿ ಅಲ್ಲಿದ್ದವರಿಗೆ ಅನುಕೂಲ ಕಲ್ಪಿಸುವ ಅವಕಾಶವಿದ್ದರೆ ವ್ಯವಸ್ಥೆ ಮಾಡಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಇತರರು ಈ ಸಂದರ್ಭದಲ್ಲಿದ್ದರು.

## ಜಿಲ್ಲೆಯಲ್ಲಿ 6.0 ಮಿ.ಮೀ. ಮಳೆ

ದಾವಣಗೆರೆ, ಸೆ. 2 - ಜಿಲ್ಲೆಯಲ್ಲಿ ಸೆ.1 ರಂದು 6.0 ಮಿ.ಮೀ. ಸರಾಸರಿ ಮಳೆಯಾಗಿದ್ದು, ತಾಲ್ಲೂಕುವಾರು ಮಳೆ ಮತ್ತು ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 3.0 ವಾಡಿಕೆಗೆ 10.0 ಮಿ.ಮೀ ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 6.0 ವಾಡಿಕೆಗೆ 4.0 ಮಿ.ಮೀ ವಾಸ್ತವ ಮಳೆಯಾಗಿದೆ. ಹರಿಹರ ತಾಲ್ಲೂಕಿನಲ್ಲಿ 3.0 ವಾಡಿಕೆಗೆ 3.0 ಮಿ.ಮೀ ವಾಸ್ತವ ಮಳೆಯಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 1.0 ಮಿ.ಮೀ ವಾಸ್ತವ ಮಳೆಯಾಗಿದೆ. ಜಗಳೂರು ತಾಲ್ಲೂಕಿನಲ್ಲಿ 1.0 ವಾಡಿಕೆಗೆ 6.0 ಮಿ.ಮೀ ವಾಸ್ತವ ಮಳೆಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 3.0 ಮಿ.ಮೀ ವಾಸ್ತವ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 3.0 ವಾಡಿಕೆಗೆ 6.0 ಮಿ.ಮೀ ವಾಸ್ತವ ಮಳೆಯಾಗಿದೆ.

ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದಲ್ಲಿ 30 ಎಕರೆ ಮೆಕ್ಕೆ ಜೋಳದ ಬೆಳೆ ಹಾನಿಯಾಗಿದ್ದು ರೂ. 1.60 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ನ್ಯಾಮತಿ ತಾಲ್ಲೂಕಿನಲ್ಲಿ 1 ಪಕ್ಕಾ ಮನೆ ಮತ್ತು 1 ಕಚ್ಚಾ ಮನೆ ಭಾಗಶ: ಹಾನಿಯಾಗಿದ್ದು ರೂ. 25 ಸಾವಿರದಂತೆ ಒಟ್ಟು ರೂ. 50 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ. ಚನ್ನಗಿರಿ ತಾಲ್ಲೂಕಿನಲ್ಲಿ 2 ಪಕ್ಕಾ ಮನೆ ಭಾಗಶ: ಹಾನಿಯಾಗಿದ್ದು ರೂ. 40 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ.

ಜಿಲ್ಲೆಯಲ್ಲಿ ಒಟ್ಟಾರೆ ರೂ. 2.50 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

## ನಗರದ ಪತ್ರಕರ್ತ ವಿನಯ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಸೆ.2- ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಅಕಾಡೆಮಿಯು ತನ್ನ ವಾರ್ಷಿಕೋತ್ಸವದ ಅಂಗವಾಗಿ ನಡೆಸಿದ ಸಮಾರಂಭದಲ್ಲಿ ಕರ್ನಾಟಕ ಜ್ಯೋತಿ ರಾಜ್ಯ ಪ್ರಶಸ್ತಿಯನ್ನು ಪತ್ರಕರ್ತ ಬಿ.ವಿ. ವಿನಯ್ ಅವರಿಗೆ ನೀಡಿ ಗೌರವಿಸಿದೆ.

## ಜಿಎಂಐಟಿಯಲ್ಲಿ ದಾಖಲೆಯ ಉದ್ಯೋಗ ನೇಮಕಾತಿ



ದಾವಣಗೆರೆ, ಸೆ.2- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿವಿಧ ವಿಭಾಗಗಳಿಂದ ಅಂತಿಮ ವರ್ಷದ 332 ವಿದ್ಯಾರ್ಥಿಗಳು ಉದ್ಯೋಗ ನೇಮಕಾತಿಯಲ್ಲಿ ಆಯ್ಕೆಯಾಗಿದ್ದಾರೆ. ಈ ನೇಮಕಾತಿಯು ಪ್ರಸ್ತುತ ಶೈಕ್ಷಣಿಕ ವರ್ಷದ ದಾಖಲೆಯ ಉದ್ಯೋಗ ನೇಮಕಾತಿಯಾಗಿದ್ದು, ಅತಿ ಹೆಚ್ಚು ಅಂದರೆ 10 ಲಕ್ಷ ವಾರ್ಷಿಕ ಸಂಬಳದ ಪ್ಯಾಕೇಜನ್ನು ಕಂಪನಿಯು ನೀಡಿದೆ.

ಪ್ರತಿಷ್ಠಿತ ಕಂಪನಿಗಳಾದ ಬೋಷ್, ಬೈಜೂಸ್, ಟಿಸಿಎಸ್, ಹೆಚ್‌ಸಿಎಲ್, ವಿಪ್ರೋ, ಎಸ್‌ಎಲ್‌ಕೆ ಸಾಫ್ಟ್‌ವೇರ್, ಸರ್ವೀಸ್, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಸಿಸ್ಟಂ, ಮಹೀಂದ್ರಾ ಸಿಐಇ, ಓಜಿ ಹೆಲ್ತ್‌ಕೇರ್, ಅಮೆಜಾನ್, ಆಟೋಮೇಷನ್ ಇತ್ಯಾದಿ ಕಂಪನಿಗಳು ಕ್ಯಾಂಪಸ್ ಸಂದರ್ಶನ ನಡೆಸಿ ಅನೇಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ. ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ತಿಳಿಸಿದ್ದಾರೆ.

## ಜಗಳೂರಿನಲ್ಲಿ ನಾರಾಯಣ ಗುರು ಜಯಂತ್ಯೋತ್ಸವ



ಜಗಳೂರು, ಸೆ. 2 - ಸಮಾಜದ ತಾರತಮ್ಯ ತೊಲಗಿಸಲು ಜೀವನ ಮುಡಿಪಾಗಿಟ್ಟ ನಾರಾಯಣ ಗುರು ಆದರ್ಶವಾಗಿದ್ದಾರೆ ಎಂದು ತಹಶೀಲ್ದಾರ್ ನಾಗವೇಣಿ ಅವರು ತಿಳಿಸಿದರು. ಪಟ್ಟಣದ ತಾಲ್ಲೂಕು ಕಛೇರಿ ಆವರಣದಲ್ಲಿ ನಾರಾಯಣ ಗುರು ಜಯಂತ್ಯೋತ್ಸವದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು. ನಾರಾಯಣ ಗುರು ಅವರು ಸಾಮಾಜಿಕ ತಾರತಮ್ಯದ ವಿರುದ್ಧ ಧ್ವನಿಯೆತ್ತಿ ಸಮಾಜ ಸುಧಾರಣೆಯಿಂದ ಜನಮಾನಸದಲ್ಲಿ ನೆಲೆಸಿದ್ದಾರೆ. ಆದರ್ಶಗಳು ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಈಡಿಗ ಸಮಾಜದ ಮುಖಂಡರಾದ ಇ.ಎನ್. ಪ್ರಕಾಶ್, ಮಂಜಣ್ಣ, ಕಂದಾಯ ನಿರೀಕ್ಷಕ ಕುಬೇಂದ್ರನಾಯ್ಕ, ವಿಜಯಕುಮಾರ್ ಮತ್ತಿತರರು ಹಾಜರಿದ್ದರು.

## ರಾಣೇಬೆನ್ನೂರಿಗೆ ನಟ ಸುದೀಪ್ ಕರೆಸಲು ತೀರ್ಮಾನ



ರಾಣೇಬೆನ್ನೂರು, ಸೆ.2 - ನಟ ಕಿಚ್ಚ ಸುದೀಪ್ ಅವರನ್ನು ಕರೆಸಿ ಅದ್ಧೂರಿಯಾಗಿ ಸನ್ಮಾನಿಸಲು ನಿನ್ನೆ ಅವರ ಅಭಿಮಾನಿಗಳು ತೀರ್ಮಾನಿಸಿದರು.

ಇಲ್ಲಿನ ಮಾರುತಿ ನಗರದ ಶ್ರೀ ರೇಣುಕಾ ಎಲ್ಲಮ್ಮ ಅಂಧ ಮತ್ತು ಕಿವುಡ ಮಕ್ಕಳ ಶಾಲೆಯಲ್ಲಿ ನಡೆದ ಸುದೀಪ್ ಹುಟ್ಟುಹಬ್ಬದ ಸರಳ ಸಮಾರಂಭದಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ತಾಪಂ ಮಾಜಿ ಅಧ್ಯಕ್ಷ ರವೀಂದ್ರಗೌಡ ಪಾಟೀಲ, ಎಚ್.ಆರ್.ಶಿವಕುಮಾರ, ನಗರ ಸಭೆ ಸದಸ್ಯರಾದ ಮಲ್ಲಣ್ಣ ಅಂಗಡಿ, ಪಾಂಡುರಂಗ ಗಂಗಾವತಿ, ಬಸವರಾಜ ಚಳಗೇರಿ, ಹನುಮಂತಪ್ಪ ಕಬ್ಬಾರ ಪಾಲ್ಗೊಂಡಿದ್ದರು.

# ಕೃಷಿಯಲ್ಲಿ ಸಾವಯವ ರೀತಿಯಲ್ಲಿ ಸಸ್ಯ ಸಂರಕ್ಷಣೆ

ದಾವಣಗೆರೆ ಸೆ. 2- ಜಿಲ್ಲೆಯಾದ್ಯಂತ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದು, ಉತ್ತಮ ಇಳುವರಿ ಪಡೆಯಲು ಇರುವ ಅನೇಕ ಅಡೆತಡೆಗಳಲ್ಲಿ ಕೀಟ ಹಾಗೂ ರೋಗಗಳ ಬಾಧೆಯು ಒಂದಾಗಿದೆ. ರಾಸಾಯನಿಕ ಕೃಷಿಯಿಂದ ಹೊರಗೆ ಬಂದು ಉತ್ತಮ ಗುಣಮಟ್ಟದ ಆಹಾರ ಉತ್ಪಾದನೆ ಕೈಗೊಳ್ಳಬೇಕೆಂಬ ಆಕಾಂಕ್ಷೆ, ಮಣ್ಣಿನ ಫಲವತ್ತತೆ, ಪರಿಸರ ಕಾಪಾಡುವ ಕಾಳಜಿಯಿಂದ ಬಹಳಷ್ಟು ರೈತರು ಸಾವಯವ, ನೈಸರ್ಗಿಕ, ಶೂನ್ಯ ಬಂಡವಾಳ, ಚೈತನ್ಯ ಕೃಷಿಯತ್ತ ಒಲವು ತೋರಿದ್ದಾರೆ. ಅಂತಹ ಸಾವಯವ ಕೃಷಿ, ಶೂನ್ಯ ಬಂಡವಾಳ ಕೃಷಿ, ನೈಸರ್ಗಿಕ ಕೃಷಿಯಲ್ಲಿ ತೊಡಗಿಸಿಕೊಂಡಿರುವ ರೈತ ಬಾಂಧವರು ಮುಂಗಾರು ಹಂಗಾಮಿನಲ್ಲಿ ಬೆಳೆದು ನಿಂತಿರುವ ಬೆಳೆಗಳಲ್ಲಿ ಕೀಟ ಹಾಗೂ ರೋಗಬಾಧೆಗಳನ್ನು ನಿರ್ವಹಿಸಲು ಸಲಹೆಗಳು ಈ ಕೆಳಗಿನಂತಿವೆ

ಪ್ರಕೃತಿಯಲ್ಲಿ ಜೈವಿಕ ಸರಪಳಿ ಆಧಾರದ ಮೇಲೆ ಕೆಲ ಅಪಕಾರಿ ಕೀಟಗಳನ್ನು ತಿಂದು ಬದುಕುವ ಹಾಗೂ ರೈತರಿಗೆ ಪರೋಪಕಾರಿಯಾಗಿರುವ ಕೀಟಗಳೂ ಇವೆ. ಗುಲಗಂಜಿ ಹುಳು, ಅಪ್ಸರ ಕೀಟದಂತಹ ಉಪಕಾರಿ ಕೀಟಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಷ್ಟು ಅಪಕಾರಿ ಕೀಟಗಳು ಕಡಿಮೆಯಾಗುತ್ತವೆ. ಆದ್ದರಿಂದ ಈ ಉಪಕಾರಿ ಕೀಟಗಳನ್ನು ಉಳಿಯುವಂತೆ, ಬೆಳೆಯುವಂತೆ ನೋಡಿಕೊಳ್ಳಬೇಕು. ರಾಸಾಯನಿಕ ಹಾಗೂ ಸಾವಯವ ಜಮೀನುಗಳ ಮಧ್ಯೆ ಅಂತರ ಕಾಪಾಡಿಕೊಳ್ಳಬೇಕು. ಜಮೀನನ್ನು ಅಂತರಬೇಸಾಯ ಮಾಡಿ ಕಳೆ ತೆಗೆದು ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಕೀಟಗಳ ಹಾವಳಿ ನಿರ್ವಹಿಸಬಹುದು.

ಎಲೆ ತಿನ್ನುವ ಹುಳು, ಕಾಂಡಕೊರಕ ಹಾಗೂ ಕಾಯಿಕೊರಕಗಳನ್ನು ಸಾಧ್ಯವಾದಷ್ಟು ಕೈಯಿಂದ ಆರಿಸಿ ತೆಗೆದು ಸೋಪಿನ ನೀರಿನಲ್ಲಿ ಹಾಕಿ ನಿರ್ವಹಣೆ ಮಾಡಬೇಕು. ಜಮೀನಿನ ಸುತ್ತ ಟೊಂಗೆಗಳನ್ನು ನೆಟ್ಟು, ಹೊಲದಲ್ಲಿ ಸುತ್ತಲು ಅನ್ನ ಅಥವಾ ಮಂಡಕ್ಕಿ ಚೆಲ್ಲಿ ಪಕ್ಷಿಗಳನ್ನು ಆಕರ್ಷಿಸುವುದರಿಂದ ಪಕ್ಷಿಗಳು ಹುಳುಗಳನ್ನು ಆಯ್ದು ತಿನ್ನುತ್ತವೆ. ಈ ವಿಧಾನಗಳ ಅನುಸರಣೆಯಿಂದ ನಿರ್ವಹಣೆ ಆಗದಿದ್ದ ಪಕ್ಷದಲ್ಲಿ ಸಸ್ಯ ಜನ್ಯ ಕೀಟನಾಶಕಗಳನ್ನು ಬಳಸಬಹುದು.

ಎಲೆ ತಿನ್ನುವ ಹುಳುವಿನ ಬಾಧೆ ತಡೆಯಲು 50 ಗ್ರಾಂ. ಅರಿಶಿನ ಪುಡಿಯನ್ನು 1 ಲೀ. ಹಸುವಿನ ಗಂಜಲದಲ್ಲಿ 2 ದಿನಗಳ ಕಾಲ ನೆನೆಸಿ ನಂತರ 5 ಲೀ. ನೀರನ್ನು ಬೆರೆಸಿ ಸಿಂಪಡಿಸಬೇಕು. ಕಾಯಿಕೊರಕ ಮತ್ತು ಕಂಬಳಿ ಹುಳುವಿನ ಬಾಧೆಗೆ 25 ಗ್ರಾಂ. ಹಸಿಮೆಣಸಿನಕಾಯಿ ಮತ್ತು 60 ಗ್ರಾಂ ಉಪ್ಪನ್ನು ನುಣ್ಣಗೆ ಅರೆದು 12 ಘಂಟೆಗಳ ಕಾಲ ನೆನೆಸಿ ನಂತರ 8 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಸಸ್ಯ ಹೇನು, ಜಾಸಿಡ್ಸ್ (ಜಿಗಿಹುಳು) ಬಾಧೆಗೆ ಬೆಳ್ಳುಳ್ಳಿ ಹಾಗೂ ಹಸಿಮೆಣಸಿನಕಾಯಿಯನ್ನು ಸಮ ಪ್ರಮಾಣದಲ್ಲಿ ಮಿಶ್ರಮಾಡಿ ರುಬ್ಬಿ 1 ಮಿ.ಲೀ. ದ್ರಾವಣಕ್ಕೆ 100 ಮಿ.ಲೀ. ನೀರು ಬೆರೆಸಿ ಸಿಂಪಡಿಸಬೇಕು.

ನುಸಿ, ಸಸ್ಯಹೇನು ಮತ್ತು ಶಿಲೀಂಧ್ರ ರೋಗಗಳು ಕಂಡುಬಂದಲ್ಲಿ 50 ಗ್ರಾಂ. ಬೆಳ್ಳುಳ್ಳಿಯನ್ನು ಸ್ವಲ್ಪ ನೀರಿನೊಂದಿಗೆ ರುಬ್ಬಿ ದ್ರಾವಣ ತಯಾರಿಸಿ ಶೋಧಿಸಿಟ್ಟುಕೊಳ್ಳಬೇಕು. 5 ಗ್ರಾಂ. ಎಕ್ಕದ ಎಲೆ, 50 ಗ್ರಾಂ ತುಳಸಿ, 50 ಗ್ರಾಂ. ಲಕ್ಕಿ ಎಲೆಗಳನ್ನು ರುಬ್ಬಿ 100 ಮಿ.ಲೀ. ನೀರಿನಲ್ಲಿ 1 ದಿನ ನೆನೆಸಿ ಶೋಧಿಸಿಟ್ಟುಕೊಳ್ಳಬೇಕು.ಈ ಎರಡೂ ದ್ರಾವಣಗಳನ್ನು ಚೆನ್ನಾಗಿ ಮಿಶ್ರಮಾಡಿ, 10 ಮಿ.ಲೀ. ಬೇವಿನ ಎಣ್ಣೆ ಹಾಗೂ 20 ಲೀ. ನೀರು ಬೆರೆಸಿ ಸಿಂಪಡಿಸಬೇಕು. ಬಿಳಿ ನೊಣ, ಎಲೆ ತಿನ್ನುವ ಹುಳು, ಇತರೆ ಹುಳುಗಳ ಬಾಧೆಗೆ 100 ಗ್ರಾಂ ಹಸಿಮೆಣಸಿನಕಾಯಿ, 1 ಬೆಳ್ಳುಳ್ಳಿ, 1 ಈರುಳ್ಳಿಯನ್ನು ಚೆನ್ನಾಗಿ ಜಜ್ಜಿ 1 ರಾತ್ರಿ ನೀರಿನಲ್ಲಿ ನೆನೆಸಿ ಶೋಧಿಸಿ 1.8 ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಎಲ್ಲಾ ದ್ರಾವಣಗಳನ್ನು ಬೆಳೆಯ ಅವಧಿ ಹಾಗೂ ಗಿಡದ ಬೆಳವಣಿಗೆಗೆ ಅನುಗುಣವಾಗಿ ಎಕರೆಗೆ ಬೇಕಾಗುವಷ್ಟು ಸಿಂಪರಣಾ ದ್ರಾವಣ ತಯಾರಿಸಿಕೊಳ್ಳಬಹುದು. ಬೇವಿನ ಬೀಜ ಆಧಾರಿತ ಕೀಟನಾಶಕಗಳನ್ನು ಸಹ ಬಳಸಬಹುದು ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದ್ದಾರೆ.

# ಟೆಸ್ಟ್ ಹೆಚ್ಚಿಸಿ ಪ್ರಯೋಜನವಿಲ್ಲ, ಸಾವು ತಡೆಯಿರಿ

**(3ನೇ ಪುಟದಿಂದ)** ಸ್ಪಷ್ಟವಾಗುತ್ತದೆ ಎಂದು ಪರಿಣಿತರು ಹೇಳಿದ್ದಾರೆ. ಸೋಂಕಿತರ ನಿಕಟವರ್ತಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಆದರೆ, ರಾಜ್ಯಗಳಲ್ಲಿ ದೊಡ್ಡ ಪ್ರಮಾಣದ ಲಕ್ಷಣ ರಹಿತ ಸೋಂಕಿತರಿದ್ದಾರೆ. ಹೀಗಾಗಿ ಲಕ್ಷಣ ರಹಿತರು ಸೋಂಕಿತರ ನಿಕಟ ಸಂಪರ್ಕದಲ್ಲಿದ್ದರೆ ಮಾತ್ರ ಪತ್ತೆಯಾಗುತ್ತಾರೆ. ಇಲ್ಲವಾದರೆ ಲಕ್ಷಣ ರಹಿತರು ಪರೀಕ್ಷೆಗೆ ಸಿಗುವುದೇ ಇಲ್ಲ ಎಂದವರು ಹೇಳಿದ್ದಾರೆ.

ಇಂಡಿಯನ್ ಪಬ್ಲಿಕ್ ಹೆಲ್ತ್ ಅಸೋಸಿಯೇಷನ್ (ಐ.ಪಿ.ಹೆಚ್.ಎ.), ಇಂಡಿಯನ್ ಅಸೋಸಿಯೇಷನ್ ಆಫ್ ಪ್ರಿವೆಂಟಿವ್ ಅಂಡ್ ಸೋಷಿಯಲ್ ಮೆಡಿಸಿನ್ (ಐ.ಎ.ಪಿ.ಎಸ್.ಎಂ.) ಹಾಗೂ ಇಂಡಿಯನ್ ಅಸೋಸಿಯೇಷನ್ ಆಫ್ ಎಪಿಡಮಾಲಜಿಸ್ಟ್ಸ್ (ಐ.ಎ.ಇ.) ಸಂಸ್ಥೆಗಳ ಪರಿಣಿತರು ಜಂಟಿ ಹೇಳಿಕೆ ನೀಡಿದ್ದು, ಇದನ್ನು ಪ್ರಧಾನ ಮಂತ್ರಿಗೆ ಸಲ್ಲಿಸಲಾಗಿದೆ.

ದೊಡ್ಡ ಪ್ರಮಾಣದಲ್ಲಿ ಪರೀಕ್ಷೆಗಳನ್ನು ನಡೆಸಿ ಸೋಂಕಿತರನ್ನು ಪ್ರತ್ಯೇಕಿಸುವುದು ಆರಂಭಿಕ ಹಂತದಲ್ಲಿ ಹೆಚ್ಚು ಉಪಯುಕ್ತವಾಗಿದೆ. ಇದರಿಂದಾಗಿ ಸೋಂಕು ಸಮುದಾಯ ಮಟ್ಟಕ್ಕೆ ತಲುಪುವುದನ್ನು ತಡೆಯಬಹುದಾಗಿದೆ. ಸೋಂಕು ಈಗಾಗಲೇ ವ್ಯಾಪಕವಾಗಿ ಹರಡಿದೆ. ಹೀಗಾಗಿ ಪರೀಕ್ಷೆ ಹೆಚ್ಚಿಸುವುದರಿಂದ ನಿಗದಿತ ಉದ್ದೇಶ ಈಡೇರುವುದಿಲ್ಲ ಎಂದವರು ಹೇಳಿದ್ದಾರೆ.

ಸೋಂಕು ವ್ಯಾಪಕವಾಗಿ ಹರಡಿರುವುದರಿಂದ, ಪರೀಕ್ಷೆ ಹೆಚ್ಚಿಸಿದಷ್ಟೂ ಹೆಚ್ಚು ಸೋಂಕಿತರು ಪತ್ತೆಯಾಗುತ್ತಾರೆ. ಆದರೆ, ಸೋಂಕು ಹರಡುವುದನ್ನು ತಡೆಯುವ ಇಲ್ಲವೇ ಸಾವುಗಳನ್ನು ತಡೆಗಟ್ಟುವ ಮುಖ್ಯ ಉದ್ದೇಶಕ್ಕೆ ಹೆಚ್ಚು ಉಪಯುಕ್ತವಾಗದು ಎಂದು ಪರಿಣಿತರು ತಿಳಿಸಿದ್ದಾರೆ.

ಸಣ್ಣ ನಗರಗಳು ಹಾಗೂ ಗ್ರಾಮೀಣ ಭಾಗಗಳಲ್ಲಿ ಹೆಚ್ಚು ಸೋಂಕಿತರು ಪತ್ತೆಯಾಗುತ್ತಿದ್ದಾರೆ. ಸೋಂಕು ದೇಶದ ಬಹುತೇಕ ಭಾಗಗಳಿಗೆ ಹರಡಿರುವುದನ್ನು ಸೆರೋ - ಸರ್ವೇ ತೋರಿಸುತ್ತಿದೆ. ಇದು ಸೋಂಕು ಸಮುದಾಯ ಮಟ್ಟದಲ್ಲಿ ಹರಡಿರುವುದನ್ನು ತೋರಿಸುತ್ತದೆ. ಹೀಗಾಗಿ ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಟೆಸ್ಟ್ ಮಾಡುವ ವಿಧಾನವನ್ನು ಬದಲಿಸಬೇಕಿದೆ ಎಂದವರು ಹೇಳಿದ್ದಾರೆ.

ಸಮುದಾಯ ಹರಡುವಿಕೆಯ ಈ ಹಂತದಲ್ಲಿ ಟೆಸ್ಟ್ ಮಾಡಲು ಹೆಚ್ಚು ಒತ್ತು ಕೊಡುವುದು, ಸೋಂಕು ನಿಯಂತ್ರಣಕ್ಕೆ ಹೆಚ್ಚು ಉಪಯುಕ್ತವಲ್ಲ. ಇದರಿಂದಾಗಿ ನಿಯಂತ್ರಣದ ಗಮನ ಹಾಗೂ ಸಂಪನ್ಮೂಲವನ್ನು ಬೇರೆಡೆಗೆ ಕಳಿಸಿದಂತಾಗುತ್ತದೆ.


ಈ ಸೋಂಕಿನ ಸ್ವರೂಪ ಹಾಗೂ ಹೆಚ್ಚು ಅಪಾಯದಲ್ಲಿರುವ ವರ್ಗ ಯಾವುದು ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಹೀಗಾಗಿ ಟೆಸ್ಟ್ ಅನ್ನು ಹೆಚ್ಚು ಎಚ್ಚರಿಕೆಯಿಂದ ಬಳಸಬೇಕು. ಹೆಚ್ಚು ಅಪಾಯ ಎದುರಿಸುತ್ತಿರುವ ವ್ಯಕ್ತಿಗಳು, ಆರೋಗ್ಯ ಕಾರ್ಯಕರ್ತರು ಆರೋಗ್ಯ ಸಮಸ್ಯೆ ಹೊಂದಿರುವ ಹಿರಿಯರು, ಶಸ್ತ್ರ ಚಿಕಿತ್ಸೆಗೆ ಒಳಗಾಗುವವರು ಮತ್ತಿತರರು ಮಾತ್ರ ಪರೀಕ್ಷೆಗೆ ಒಳಗಾಗುವುದು ಸೂಕ್ತ. ಆದರೆ, ಇನ್ನೂ ಈಗಷ್ಟೇ ಸೋಂಕು ಕಂಡು ಬರುತ್ತಿರುವ ಸ್ಥಳಗಳಲ್ಲಿ ವ್ಯಾಪಕ ಪರೀಕ್ಷೆ ನಡೆಸುವ ಮೂಲಕಕ ಸೋಂಕು ಹರಡುವುದನ್ನು ತಡೆಯುವುದು ಸೂಕ್ತವಾಗಿದೆ ಎಂದು ಪರಿಣಿತರು ತಿಳಿಸಿದ್ದಾರೆ.

## ಜಿಎಸ್ಟಿ : ಪರಿಹಾರಕ್ಕೆ ರಾಜ್ಯದ ನಿರ್ಧಾರ

**(3ನೇ ಪುಟದಿಂದ)** ಮೂಲಕ ಸಾಲ ಪಡೆಯಲು ಅನುವು ಮಾಡಿಕೊಡಲಾಗಿದೆ. ಭವಿಷ್ಯದಲ್ಲಿ ಪರಿಹಾರ ಸೆಸ್ ನಿಧಿಯಿಂದ ಅಸಲು ಮತ್ತು ಬಡ್ಡಿ ಮರುಪಾವತಿಯನ್ನು ಸಂಪೂರ್ಣ ಪೂರೈಸಲಾಗುವುದು.

ಇದಲ್ಲದೆ ಜಿಎಸ್‌ಟಿಯ ಶೇ. ಒಂದರಷ್ಟು ಹೆಚ್ಚುವರಿಯು ಯಾವುದೇ ಷರತ್ತಿಲ್ಲದೆ ಲಭ್ಯವಿರುತ್ತದೆ. ಉಳಿದ 8,543 ಕೋಟಿ ರೂ.ಗೆ ಮಾರುಕಟ್ಟೆ ಸಾಲದ ಮೂಲಕ ಪಡೆಯಲು ಅವಕಾಶವಿರುತ್ತದೆ.

# ಅರಿವಿನ ಜ್ಯೋತಿ ಶಿಕ್ಷಕ




'ನಹೀ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'. ಜ್ಞಾನಕ್ಕೆ ಪವಿತ್ರವಾದದ್ದು ಜಗತ್ತಿನಲ್ಲಿ ಮತ್ತೊಂದಿಲ್ಲ ಎಂಬುದು ಉಪನಿಷತ್ತಿನ ಸಂದೇಶ. ಜ್ಞಾನದ ಅಧಿಪತಿಗಳಾದ ಗುರುಗಳಿಗೆ ಪವಿತ್ರ ಸ್ಥಾನವಿದೆ. ದೈವಾನು ಸಂಭೂತರೆಂದು ಗೌರವಿಸಲಾಗುತ್ತಿದೆ. ಗುರುಬ್ರಹ್ಮ, ಗುರು ವಿಷ್ಣು, ಗುರು ಮಹೇಶ್ವರ ಎಂದು ಆರಾಧಿಸಲಾಗುತ್ತಿದೆ. ತಂದೆ ಜನ್ಮಕ್ಕೆ, ತಾಯಿ ಸಂಸ್ಕೃತಿಗೆ, ಗುರು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಕಾರಣನಾಗುತ್ತಾನೆ. ಅದಕ್ಕೆ ಅಲೆಗ್ಸಾಂಡರ್ 'ನನ್ನ ತಂದೆ ನನಗೆ ಜನ್ಮ ನೀಡಿದ, ಗುರು ನನಗೆ ಸರ್ವ ಶ್ರೇಷ್ಠ ಬದುಕನ್ನು ನೀಡಿದ ಎಂದು ಸ್ಮರಿಸುತ್ತಾನೆ.' ಶರಣರು, ದಾಸರು ತಮ್ಮ ಅನುಭವ ಮತ್ತು ಅಧ್ಯಾತ್ಮ ಮಾರ್ಗದ ಪ್ರಥಮ ಹೆಜ್ಜೆಯಲ್ಲಿ ಗುರುವಿಗೆ ಪ್ರಥಮ ಸ್ಥಾನ ನೀಡಿದ್ದಾರೆ.

ವಿಶ್ವದ ಅತಿದೊಡ್ಡ ಮೌಲ್ಯಯುತ ಸಂಪನ್ಮೂಲವೆಂದರೆ ಮಕ್ಕಳು. ಶಕ್ತ ರಾಷ್ಟ್ರದ ಬೆನ್ನೆಲುಬು, ಮಕ್ಕಳು ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವುದರ ಮೂಲಕ ಸಮಾಜ ಮತ್ತು ರಾಷ್ಟ್ರವನ್ನು ಕಟ್ಟುತ್ತಾರೆ. ಕೊಠಾರಿ ಶಿಕ್ಷಣ ಆಯೋಗವು 'ಒಂದು ರಾಷ್ಟ್ರದ ಭವಿಷ್ಯತ್ತು ಶಾಲೆಯ ನಾಲ್ಕು ಗೋಡೆಯ ಒಳಗಡೆ ನಿರ್ಧಾರವಾಗುತ್ತದೆ.' ಎಂದು ತಿಳಿಸಿದೆ. ಯೌವನ ಮಗುವಿನ ಜೀವನದ ವಸಂತ ಕಾಲ . ಆಗ ಮಗುವಿನ ಶರೀರ ಸಾಮರ್ಥ್ಯ. ಬುದ್ಧಿ ಸಾಮರ್ಥ್ಯ, ಆಲೋಚನ ಸಾಮರ್ಥ್ಯಗಳು ಮೂಡಿ ಬರುವ ಕಾಲವದು. ಮಗುವಿನ ವ್ಯಕ್ತಿತ್ವ ವಿಕಸನದಲ್ಲಿ, ಸ್ಪರ್ಧಾತ್ಮಕ ಮನೋಭಾವ ಬೆಳೆಸುವಲ್ಲಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿ, ವಿಶ್ವ ಬೆರಗಾಗುವಂತೆ ಸಾಧನೆ ಗೈಯ್ಯುವಲ್ಲಿ. ಶಿಕ್ಷಕರ ಪಾತ್ರ ಮುಖ್ಯವಾದದ್ದು. ಒಬ್ಬ ಕವಿ ನುಡಿಯುತ್ತಾನೆ. 'ಉಸಿರಾಗಿ ಹೋಗಿ ಬರುವ ಗಾಳಿಗೆ ದಾರಿ ತಿಳಿದಿರಬೇಕು. ಒಂದು ವೇಳೆ ದಾರಿ ತಪ್ಪಿದರೆ ಗಾಳಿ ಬೀದಿ ಪಾಲು ದೇಹ ಮಣ್ಣು ಪಾಲಾಗುತ್ತದೆ'. ಅಂತೆಯೇ ನಮ್ಮ ದೇಶದ ಉಸಿರು ಎಂದರೆ ಶಿಕ್ಷಕರು ಎನ್ನುವುದು ನನ್ನ ಭಾವನೆ.

'ಯಾವುದೇ ರಾಷ್ಟ್ರವು ತನ್ನ ಯೋಗ್ಯತೆಯನ್ನು ಅಲ್ಲಿನ ಶಿಕ್ಷಕರ ಯೋಗ್ಯತೆಗಿಂತ ಅಧಿಕವಾಗಿ ಹೆಚ್ಚಿಕೊಳ್ಳಲು / ಬೆಳೆಸಿಕೊಳ್ಳಲು ಸಾಧ್ಯವಿಲ್ಲ' ಎಂಬ ನಾಣ್ನುಡಿ ಇದೆ.

ಶಿಕ್ಷಕ ವೃತ್ತಿ ಒತ್ತಿ ಹಣ್ಣು ಮಾಡುವ ಕಾಯಕವಲ್ಲ. ಮೃಗಗಳಿಗೆ ನೀಡುವ ತರಬೇತಿಯೂ ಅಲ್ಲ. ಮಗುವಿನಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನದ ಅನಾವರಣ ಮತ್ತು ವಿದ್ಯಾರ್ಥಿಗಳಲ್ಲಿ ಜೀವನ ಪ್ರಜ್ಞೆಯನ್ನು ಅರಳಿಸುವುದು, ಶಿಕ್ಷಣದ ಗುರಿ ಜ್ಞಾನವೇ ಹೊರತು, ಕೀರ್ತಿ ಮತ್ತು ಹಣ ಗಳಿಕೆಯಲ್ಲ. ಅದಕ್ಕಾಗಿ ಶಿಕ್ಷಕ, ಹಿಂದಿನ ಅನುಭವ, ಪ್ರಸ್ತುತ ಪ್ರಜ್ಞೆ, ನಾಳಿನ ಪರಿಕಲ್ಪನೆಯನ್ನು ಹೊಂದಿರಬೇಕು.ಪುಸ್ತಕ ನೋಡಿ ಪಾಠ ಮಾಡುವ ಶಿಕ್ಷಕ ವಿದ್ಯಾರ್ಥಿಗಳಲ್ಲಿ ಸ್ವಂತಿಕೆ, ಆತ್ಮವಿಶ್ವಾಸ ಇಲ್ಲವೇ, ನಾಯಕತ್ವದ ಗುಣವನ್ನು ಬೆಳೆಸಲಾರ, ಕೇವಲ ವಿದ್ಯಾರ್ಥಿಗಳನ್ನು ನಡೆದಾಡುವ ಗ್ರಂಥಾಲಯಗಳನ್ನಾಗಿ ಸೃಷ್ಟಿಸಿದಂತಾಗುತ್ತದೆ. ಇಂದಿನ ಯುವ ಜನಾಂಗ ಹೆಚ್ಚು ಸುಶಿಕ್ಷಿತರಾಗುತ್ತಿದ್ದಾರೆಯೇ ವಿನಃ ಸುಸಂಸ್ಕೃತರಾಗುತ್ತಿಲ್ಲ. ಅವರಲ್ಲಿ ಅಶಿಸ್ತು, ಅನೈತಿಕತೆ, ಅಸಹಿಷ್ಣುತೆ, ಅವಿಧೇಯತೆ, ಆತ್ಮಹತ್ಯೆ, ಹಿಂಸಾ ಮನೋಪ್ರವೃತ್ತಿ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತಿದ್ದು, ನೈತಿಕತೆ ಮತ್ತು ಮೌಲ್ಯದ ಕೊರತೆ ಎದ್ದು ಕಾಣುತ್ತದೆ.

ರಾಷ್ಟ್ರಮಟ್ಟದ ಬಹುತೇಕ ಸಾಮಾಜಿಕ ಪಿಡುಗುಗಳಿಗೆ ನೈತಿಕ ಮೌಲ್ಯಗಳ ಕುಸಿತವೇ ಕಾರಣ. ಸಂಸ್ಕಾರವಿಲ್ಲದ ಶಿಕ್ಷಣ ಅಪೂರ್ಣ ಮಾತ್ರವಲ್ಲ. ಅಪಾಯಕಾರಿಯೂ ಹೌದು, ಈ ಸತ್ಯವನ್ನರಿತು 'An educated crook is more dangerous than the Uneducated' ಎಂದು ಮಹಾತ್ಮ ಗಾಂಧೀಜಿ ನುಡಿದಿದ್ದಾರೆ. ಸ್ವಾಮಿ ವಿವೇಕಾನಂದರು ಮೌಲ್ಯಯುತ ಮಾತನ್ನು ನುಡಿದಿದ್ದಾರೆ. 'Give education to illiterate but more education to the literate' ನಮ್ಮ ಮಕ್ಕಳನ್ನು ಅರಿವಿನೊಂದಿಗೆ ಬೆಳೆಸಿದರೆ, ಮನುಷ್ಯರಾಗುತ್ತಾರೆ. ಹಣದೊಂದಿಗೆ ಬೆಳೆಸಿದರೆ, ಮೃಗಗಳಾಗುತ್ತಾರೆ. ಶೀಲವಂತಿಕೆಯೇ ಶಿಕ್ಷಣದ ದೃಷ್ಟಿಯಾದಾಗ ಮಗು ತನ್ನನ್ನು ತಾನು ಅರಿಯುತ್ತದೆ. ಅದಕ್ಕಾಗಿ ಪಠ್ಯ ಶಿಕ್ಷಣದ ಜೊತೆಗೆ ಅನುಭವದ ಶಿಕ್ಷಣವನ್ನು, ಜಾಣ್ಮೆಯ ಶಿಕ್ಷಣದ ಜೊತೆಗೆ ಜೀವನದ ಶಿಕ್ಷಣವನ್ನು, ವಿದ್ವತ್ತಿನ ಶಿಕ್ಷಣದ ಜೊತೆಗೆ ವಿವೇಕದ ಶಿಕ್ಷಣವನ್ನು ಶಿಕ್ಷಕ ನೀಡಬೇಕು.

ಇದು 4ಜಿ ಯುಗ. ಪ್ರಾಚೀನ ಯುಗದಲ್ಲಿ 'ಸದ್ಗುಣವೇ ಶಕ್ತಿಯಾಗಿತ್ತು. ಇಂದು ಜ್ಞಾನವೇ ಶಕ್ತಿ' ಜಾಗತಿಕ ವ್ಯವಸ್ಥೆ, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗೆ ಅನುಸಾರ ಪಠ್ಯ ವಸ್ತುವಿನಲ್ಲಿ ರೋಚಕ ಬದಲಾವಣೆಗಳಾಗುತ್ತಾ ಇವೆ ಮತ್ತು ಇಂದಿನ ಶಿಕ್ಷಣ ನಾಲ್ಕು ಗೋಡೆಗೆ ಸೀಮಿತವಾಗಿಲ್ಲ, ವ್ಯಾಪ್ತಿ ವಿಸ್ತಾರವಾಗಿದೆ. ಎಲ್ಲೆಲ್ಲೂ ತಂತ್ರಜ್ಞಾನದ ಅಬ್ಬರ. ಸಾಮಾಜಿಕ ಅಂತರ್ಜಾಲಗಳ ಬಳಕೆ, ಡಿಜಿಟಲ್ ತಂತ್ರಜ್ಞಾನದ ಆಗಮನ, ಆನ್‌ಲೈನ್ ಪ್ರವೇಶದೊಂದಿಗೆ ಬೋಧನೆ, ಕಲಿಕೆ, ಪರೀಕ್ಷೆ ಮತ್ತು ಅಗತ್ಯ ಸಂಪನ್ಮೂಲಗಳು ಬದಲಾಗುತ್ತಾ ಇವೆ. ಇವುಗಳ ಬಳಕೆಯಿಂದಾಗಿ ವಿದ್ಯಾರ್ಥಿಗಳು ಜ್ಞಾನ, ವೈಚಾರಿಕ ಪ್ರಜ್ಞೆ, ಆಲೋಚನಾ ಶಕ್ತಿಯನ್ನು ಬೆಳೆಸಿಕೊಂಡು ಊಹಿಸಲಾರದಷ್ಟು ವಿಶ್ವ ಬೆರಗಾಗುವಂತೆ ಸಾಧನೆಗೈಯ್ಯುತ್ತಿದ್ದಾರೆ. ಆದರೆ, ಅವರ ವ್ಯಕ್ತಿತ್ವ ವಿಕಸನ ಮತ್ತು ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಶಿಕ್ಷಕರ ಪಾತ್ರ ಮುಖ್ಯವಾದದ್ದು, ಇಂದಿನ ಶಿಕ್ಷಣ ಕ್ರಮದಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಬೇಕೆಂಬುದೇ ಶಿಕ್ಷಕರ, ಪೋಷಕರ ಪ್ರಮುಖ ಗುರಿಯಾಗಿದೆ. ಜೊತೆಯಲ್ಲಿ ಆರೋಗ್ಯ, ನೈತಿಕ ಶಿಕ್ಷಣ, ಪರಿಸರ ಪ್ರಜ್ಞೆ, ಪೌರ ಪ್ರಜ್ಞೆ, ರಾಷ್ಟ್ರ ಪ್ರೇಮ, ಸಂವಹನ ಕಲೆ, ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕಾರ ನೀಡಿ, ಹೃದಯವಂತಿಕೆ ಮೆರೆಯುವ ಗುರುಗಳನ್ನು ನೆನಪಿಸಿಕೊಳ್ಳುವ ಅಮೃತ ಗಳಿಗೆಯ ದಿನವಾದರೂ ಸಹ, 'ಪ್ರತಿಯೊಬ್ಬ ಶಿಕ್ಷಕ ಬಿತ್ತಿದ ಸಕಾರಾತ್ಮಕ ಬೀಜಗಳು, ಪರಿವರ್ತನೆಯ ಹೊಸ ಭಾಷ್ಯವನ್ನು ಬರೆಯುತ್ತವೆ; ಅದಕ್ಕಾಗಿ ತಮ್ಮ ಆಲೋಚನೆಗಳಿಗೆ ಕ್ರಿಯಾಶೀಲತೆಗೆ, ಸೃಜನಶೀಲತೆಗೆ ರಜೆ ಇರಲೇಬಾರದು ಎಂದು ತಮ್ಮನ್ನು ತಾವು ಅವಲೋಕನ ಮಾಡಿಕೊಳ್ಳುವ ದಿನವೇ 'ಶಿಕ್ಷಕರ ದಿನ' 'Its good to read History; but better to create Histroy' ಅಲ್ಲವೇ? ಪ್ರತಿಯೊಬ್ಬ ಸಾಧಕ ಪುರುಷನ ಹಿಂದೆ ಗುರುವಿನ ಕೈ ಇದೆ ಎನ್ನುವುದು ಸತ್ಯ.

ಸ್ವಾಮಿ ವಿವೇಕಾನಂದರ ಹಿಂದೆ ಗುರು ಪರಮಹಂಸರು, ಶಿಶುನಾಳ ಷರೀಫರ ಹಿಂದೆ ಗುರು ಗೋವಿಂದ ಭಟ್ಟರು, ಅಲೆಗ್ಸಾಂಡರ್ ಹಿಂದೆ ಅರಿಸ್ಟಾಟಲ್, ಅರಿಸ್ಟಾಟಲ್ ಹಿಂದೆ ಪ್ಲೇಟೋ, ಪ್ಲೇಟೋ ಹಿಂದೆ ಸಾಕ್ರಟೀಸ್. ಹೀಗೆ ಅನೇಕ ಸಾಧಕರ ಹಿಂದೆ ಗುರು ಮಹಾಶಯರ ಕೈಗಳಿವೆ.

ಕುಮಾರಿ ನಿವೇದಿತ ನನಗೆ ಪಾಠ ಕಲಿಸಿದ ಒಂದಿಬ್ಬರು ಗುರುಗಳ ನಡೆ-ನುಡಿಗಳು ಅವರ ವ್ಯಕ್ತಿತ್ವ ನನ್ನ ಪಾಲಿನ ಪಾಠಗಳು ಎಂದಿದ್ದಾಳೆ. ಮಹಾತ್ಮ ಗಾಂಧೀಜಿಯವರು 'ವಿದ್ಯಾರ್ಥಿಯ ಪೂರ್ಣ ಪಠ್ಯ ಪುಸ್ತಕವೇ ಶಿಕ್ಷಕ' ಎಂದಿದ್ದಾರೆ. ರಾಷ್ಟ್ರಕವಿ ಜಿ.ಎಸ್.ಎಸ್ ತನ್ನ ಗುರುಗಳಾದ ಕುವೆಂಪುರವರನ್ನು ಕುರಿತು' ನಿಶ್ಯಬ್ದದಲ್ಲಿ ನಿಂತು ನಿಮ್ಮನ್ನು ನೆನೆಯುತ್ತೇನೆ. ಇನ್ನೊಬ್ಬರ ಎದುರು ತಲೆ ಎತ್ತಿ ನಿಲ್ಲುವುದನ್ನು ಕಲಿಸಿದಿರಿ ನನಗೆ ಎಂದು ಗುರುವನ್ನು ಸ್ಮರಿಸುತ್ತಾರೆ.

ಶಿಕ್ಷಣ ಪ್ರೇಮಿ, ಅಧ್ಯಯನ ಶೀಲ, ಉತ್ತಮ ಚಾರಿತ್ರ್ಯವಂತ, ವೃತ್ತಿ ಗೌರವವುಳ್ಳವ, ಮಕ್ಕಳ ಪ್ರೇಮಿ, ರಾಷ್ಟ್ರಪ್ರೇಮಿ ಶಿಕ್ಷಕರನ್ನು ವಿವೇಕಾನಂದರು ಶಕ್ತಿಯ ಅಲೆ ಎಂದರು. ಅಂತಹ ಗುಣಗಳೊಂದಿಗೆ ಕಾಯಕ ಮಾಡಿ, ಆದರ್ಶ ಶಿಕ್ಷಕರ ಸಾಲಿನಲ್ಲಿ ಕಂಗೊಳಿಸುವ ಮಹಾನ್ ಚೇತನ, ತತ್ವಜ್ಞಾನಿ, ರಾಷ್ಟ್ರ ಪ್ರೇಮಿ, ಮೌಲ್ಯ ಶಿಕ್ಷಣದ ಚಿಂತಕ ನಮ್ಮ ದೇಶದ ಮೊದಲ ಉಪ ರಾಷ್ಟ್ರಪತಿ ಹಾಗೂ ಎರಡನೇ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್, ಶ್ರೀಯುತರು ರಾಷ್ಟ್ರಪತಿಗಳಾಗಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅವರ ಜನ್ಮದಿನ ಆಚರಿಸಲು ವಿನಂತಿಸಿದಾಗ, ವಿನಮ್ರವಾಗಿ ತಿರಸ್ಕರಿಸಿ, ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಕಾರಣರಾದ ಶಿಕ್ಷಕರ ಹೆಸರಿನಲ್ಲಿ ಆಚರಿಸಲು ಹೇಳಿದರು.

1962 ರಿಂದ ಅವರ ಜನ್ಮದಿನದಂದೇ ಸೆಪ್ಟಂಬರ್ 5 ರಂದು 'ಶಿಕ್ಷಕರ ದಿನಾಚರಣೆ' ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಯುನೆಸ್ಕೋ ಕರೆಯ ಮೇರೆಗೆ, ನಾಗರಿಕ ಸಮಾಜ ನಿರ್ಮಾಣಕ್ಕೆ ಅಮೂಲ್ಯ ಸೇವೆ ಸಲ್ಲಿಸುತ್ತಿರುವ, ಶಿಕ್ಷಣ ಕ್ಷೇತ್ರದ ಬೌದ್ಧಿಕ ಮೇರು ಪರ್ವತಗಳನ್ನು ಗೌರವಿಸಲಿ. 1996 ರಿಂದ ಅಕ್ಟೋಬರ್ 5 ರಂದು 'ವಿಶ್ವ ಶಿಕ್ಷಕರ' ದಿನವನ್ನಾಗಿ ಆಚರಿಸಲಾಗುತ್ತಿದೆ.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1888 ಸೆಪ್ಟೆಂಬರ್ 5 ರಂದು ತಮಿಳು ನಾಡಿನ ತಿರುತ್ತಿಣಿಯ ಬಳಿ ಸರ್ವಪಲ್ಲಿ ಎಂಬಲ್ಲಿ ಜನನ, 1909 ರಲ್ಲಿ ತತ್ವಶಾಸ್ತ್ರದಲ್ಲಿ ಪದವಿ ಪಡೆದು, 1918 ರಿಂದ 1921 ರವರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ, 1921 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ. ನಂತರ ಆಂಧ್ರ ಮತ್ತು ಬನಾರಸ್ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ, ಯುನಸ್ಕೋಗೆ ಭಾರತದ ಪ್ರತಿನಿಧಿಯಾಗಿ, ಸೋವಿಯತ್ ಒಕ್ಕೂಟದಲ್ಲಿ ಭಾರತದ ರಾಯಭಾರಿಯಾಗಿ, ನಮ್ಮ ರಾಷ್ಟ್ರದ ಪ್ರಥಮ ಉಪರಾಷ್ಟ್ರಪತಿ, ಎರಡನೇ ರಾಷ್ಟ್ರಪತಿಯಾಗಿ, ಹೀಗೆ ಶಿಕ್ಷಕ ವೃತ್ತಿಯಿಂದ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿ, ಶಿಕ್ಷಕ ವೃತ್ತಿಗೆ ಗೌರವ ತಂದುಕೊಟ್ಟರು.

ಶಿಕ್ಷಕ ಬಂಧುಗಳೇ, ನಾವೀಗ ನವ ಭಾರತ ನಿರ್ಮಾಣದ ಪ್ರಕ್ರಿಯೆಯಲ್ಲಿದ್ದೇವೆ. ಶಿಕ್ಷಕ ವೃತ್ತಿ ಪವಿತ್ರವಾದದ್ದು. ಗುಣಮಟ್ಟದ ಶಿಕ್ಷಣವನ್ನು ನೀಡಿ, ಮಕ್ಕಳನ್ನು ಮಾರುಕಟ್ಟೆಯ ವಸ್ತುಗಳನ್ನಾಗಿಸೋಣ. ಮನಶಾಸ್ತ್ರಜ್ಞ ಥಾರ್ನ್‌ಡೈಕ್ ನುಡಿಯುತ್ತಾನೆ, 'ಶಿಕ್ಷಕ ಓಡುತ್ತಿದ್ದರೆ ಮಕ್ಕಳು ನಡೆಯುತ್ತಾರೆ. ನೀವು ನಡೆದರೆ, ನಿಮ್ಮ ವಿದ್ಯಾರ್ಥಿಗಳು ನಿಲ್ಲುತ್ತಾರೆ.ನೀವು ನಿಂತಿದ್ದರೆ, ನಿಮ್ಮ ಮಕ್ಕಳು ಮಲಗುತ್ತಾರೆ. ನೀವು ಮಲಗಿದರೆ, ನಿಮ್ಮ ಮಕ್ಕಳು ಹಾಳಾಗುತ್ತಾರೆ'. ಅದಕ್ಕಾಗಿ ಡಾ. ರಾಧಾಕೃಷ್ಣನ್ ತರಹ ತತ್ವಜ್ಞಾನಿಗಳಾಗಬೇಕು. ಅಲೆಗ್ಸಾಂಡರ್‌ನಂತೆ ಜ್ಞಾನದ ದಂಡಯಾತ್ರೆ ಕೈಗೊಳ್ಳಿ. ಸರ್.ಎಂ. ವಿಶ್ವೇಶ್ವರಾಯನವರಂತೆ ಶಿಕ್ಷಣದ ಅಭಿಯಂತರರಾಗಿ, ಡಾ. ಅಬ್ದುಲ್ ಕಲಾಂರಂತೆ ಜ್ಞಾನದ ಕ್ಷಿಪಣಿ ಹಾರಿಸಬೇಕು. ಈ ಮೂಲಕ ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿಸೋಣ.



**- ಡಾ. ಹೆಚ್.ಎಸ್.ಮಂಜುನಾಥ್ ಕುರ್ಕಿ**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ದಾವಣಗೆರೆ.

## ಅಪರೂಪ ವ್ಯಕ್ತಿತ್ವದ ಪ್ರಣಬ್ ಮುಖರ್ಜಿ : ಕುಲಸಚಿವ ಪ್ರೊ. ಬಸವರಾಜ್ ಬಣಕಾರ್



ದಾವಣಗೆರೆ, ಸೆ.2- ಕಲೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ರಾಜಕೀಯ, ಅರ್ಥಶಾಸ್ತ್ರ, ವಿದೇಶಾಂಗ ನೀತಿ ಸೇರಿದಂತೆ ಹತ್ತು ಹಲವು ವಿಷಯಗಳಲ್ಲಿ ವಿದ್ವತ್ ಸಾಧಿಸಿ, ದೇಶಕ್ಕೆ ಜಾಗತಿಕ ಮಟ್ಟದಲ್ಲಿ ಗೌರವ ತಂದುಕೊಟ್ಟಿದ್ದ ಅಪರೂಪದ ವ್ಯಕ್ತಿತ್ವದ ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಬಸವರಾಜ ಬಣಕಾರ ಅಭಿಪ್ರಾಯಪಟ್ಟರು.

ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಂಗಳವಾರ ನಡೆದ ಮುಖರ್ಜಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅಗಲಿದ ಗಣ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಸಾಮಾನ್ಯ ಮಧ್ಯಮ ಕುಟುಂಬದಲ್ಲಿ ಜನಿಸಿದರೂ ಸಹ ತಮ್ಮ ಸಾಧನೆ, ವಾಕ್ಚಾತುರ್ಯ, ಜ್ಞಾನದ ಮೂಲಕ ದೇಶದ ಅತ್ಯುನ್ನತ ಹುದ್ದೆ ಏರುವ ಮಟ್ಟಿಗೆ ಬೆಳೆದರು. ಅವರ ಇಚ್ಛಾಶಕ್ತಿ, ದೇಶಭಕ್ತಿ, ಆತ್ಮವಿಶ್ವಾಸ ಮತ್ತು ತಾಳ್ಮೆಯ ಗುಣಗಳು ಅವರನ್ನು ಅಷ್ಟು ಎತ್ತರಕ್ಕೆ ಬೆಳೆಯಲು ಸಹಕಾರಿಯಾದವು ಎಂದು ನುಡಿದರು.

ಸರಳ ಸಜ್ಜನಿಕೆಯ ವ್ಯಕ್ತಿತ್ವದ ಪ್ರಣವ್ ಮುಖರ್ಜಿ ಅವರು, ಇಡೀ ದೇಶದ ಯುವ ಜನರಿಗೆ ಮಾದರಿಯಾಗಿದ್ದಾರೆ. ಅವರ ಬದುಕು, ಜೀವನ ಶೈಲಿ, ಆಡಳಿತ ವೈಖರಿ, ಪಕ್ಷ ನಿಷ್ಠೆ, ಸವಾಲನ್ನು ಎದುರಿಸುವ ಮತ್ತು ಸಂದರ್ಭವನ್ನು ಸಮರ್ಪಕವಾಗಿ ನಿಭಾಯಿಸುವ ಅವರ ಕಾರ್ಯಗಳು ಎಲ್ಲರಿಗೂ ಪ್ರೇರಣೆ ಆಗಿವೆ ಎಂದು ತಿಳಿಸಿದರು.

ಪರೀಕ್ಷಾಂಗ ಕುಲಸಚಿವೆ ಪ್ರೊ. ಹೆಚ್.ಎಸ್. ಅನಿತಾ, ಹಣಕಾಸು ಅಧಿಕಾರಿ ಪ್ರೊ. ಗೋಪಾಲ ಎಂ. ಅಡವಿರಾವ್, ಶಿಕ್ಷಣ ನಿಕಾಯದ ಡೀನ್ ಡಾ. ಕೆ. ವೆಂಕಟೇಶ್, ದೈಹಿಕ ಶಿಕ್ಷಣ ನಿರ್ದೇಶಕ ಡಾ. ರಾಜಕುಮಾರ್, ಚಿತ್ರದುರ್ಗ ಸ್ನಾತಕೋತ್ತರ ಕೇಂದ್ರದ ಸಂಯೋಜನಾಧಿಕಾರಿ ಡಾ. ವಿಶ್ವನಾಥ್, ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಎಸ್.ರಾಜೇಂದ್ರಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

## ಪಿಎಂ ಕೇರ್ಸ್‌ಗೆ ಐದನೇ ದಿನದಲ್ಲಿ 3 ಸಾವಿರ ಕೋಟಿ ರೂ.

ನವದೆಹಲಿ, ಸೆ. 2 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸ್ಥಾಪಿಸಿದ್ದ ಪಿಎಂ ಕೇರ್ಸ್ ನಿಧಿ ರೂಪುಗೊಂಡ ಕೇವಲ ಐದು ದಿನಗಳಲ್ಲಿ 3,076.62 ಕೋಟಿ ರೂ. ದೇಣಿಗೆ ಬಂದಿದೆ. ಕೊರೊನಾ ತುರ್ತು ಸ್ಥಿತಿಯನ್ನು ಎದುರಿಸಲು ಈ ನಿಧಿ ರೂಪಿಸಲಾಗಿತ್ತು.

ಸ್ವಯಂ ಪ್ರೇರಿತವಾಗಿ ದೇಣಿಗೆ ನೀಡಲು ಪಿಎಂ ಕೇರ್ಸ್ ನಿಧಿ ಸ್ಥಾಪಿಸಲಾಗಿತ್ತು. ದೇಣಿಗೆಯ ವಿವರಗಳನ್ನು ಬುಧವಾರ ಪ್ರಕಟಿಸಲಾಗಿದೆ. ಅದರ ಪ್ರಕಾರ 3,075.85 ಕೋಟಿ ರೂ.ಗಳು ಸ್ವಯಂ ಪ್ರೇರಿತವಾಗಿ ದೊರೆತಿವೆ. 39.67 ಲಕ್ಷ ರೂ.ಗಳು ವಿದೇಶದಿಂದ ಬಂದಿವೆ. ಮಾರ್ಚ್‌ನಲ್ಲಿ ಈ ನಿಧಿ ಸ್ಥಾಪಿಸಲಾಗಿತ್ತು. ಮಾರ್ಚ್ 31ರ ವೇಳೆಗೆ ಈ ನಿಧಿಯಲ್ಲಿ 3,076.62 ಕೋಟಿ ರೂ. ದೇಣಿಗೆ ಬಂದಿದೆ. ಇದರಲ್ಲಿ ಬಡ್ಡಿ ಹಾಗೂ ವಿದೇಶಿ ಹಣವನ್ನು ಪರಿವರ್ತಿಸಿದ್ದಕ್ಕೆ ನೀಡಿದ ಸೇವಾ ತೆರಿಗೆಯೂ ಸೇರಿದೆ.

ಪಿಎಂ ಕೇರ್ಸ್ ನಿಧಿಯ ವೆಬ್ ತಾಣದಲ್ಲಿ ಈ ವಿವರಗಳನ್ನು ಪ್ರಕಟಿಸಲಾಗಿದೆ. ಪಿಎಂ ಕೇರ್ಸ್ ಮೂಲಕ ಕೊರೊನಾ ವಿರುದ್ಧದ ಹೋರಾಟಕ್ಕೆ ಹಲವಾರು ಉಪಕರಣಗಳನ್ನು ಖರೀದಿಸಲಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಪಿ.ಚಿದಂಬರಂ, ನಿಧಿಗೆ ದೇಣಿಗೆ ನೀಡಿದವರ ಹೆಸರುಗಳನ್ನು ಬಹಿರಂಗ ಪಡಿಸಿಲ್ಲ. ನಿರ್ದಿಷ್ಟ ಮಿತಿಗಿಂತ ಹೆಚ್ಚಿನ ಹಣ ದೇಣಿಗೆ ನೀಡಿದವರ ಹೆಸರನ್ನು ಬಹಿರಂಗ ಪಡಿಸಬೇಕಿದೆ. ಪಿಎಂ ಕೇರ್ಸ್‌ಗೆ ಈ ಹೊಣೆಗಾರಿಕೆಯಿಂದ ಏಕೆ ವಿನಾಯಿತಿ ನೀಡಲಾಗಿದೆ? ಎಂದು ಪ್ರಶ್ನಿಸಿದ್ದಾರೆ.

## ಆಸ್ಟ್ರೇಲಿಯಾದಲ್ಲಿ 28 ವರ್ಷಗಳ ನಂತರ ಮುಗ್ಗಟ್ಟು

ಕ್ಯಾನ್‌ಬೆರಾ, ಸೆ. 2 – ಆಸ್ಟ್ರೇಲಿಯಾದ ಆರ್ಥಿಕ ವ್ಯವಸ್ಥೆ 1930ರ ಮಹಾ ಆರ್ಥಿಕ ಮುಗ್ಗಟ್ಟಿನ ನಂತರ ಅತಿ ತೀವ್ರ ಕುಸಿತ ಕಂಡಿದೆ. ಕಳೆದ 28 ವರ್ಷಗಳಲ್ಲಿ ದೇಶ ಕಂಡ ಮೊದಲ ಮುಗ್ಗಟ್ಟು ಇದಾಗಿದೆ.

ಜೂನ್ ತಿಂಗಳಲ್ಲಿ ದೇಶದ ಆರ್ಥಿಕ ವ್ಯವಸ್ಥೆ ಶೇ.7ರ ಕುಸಿತ ಕಂಡಿದೆ. 1959ರ ನಂತರ ಮೊದಲ ತೀವ್ರ ಕುಸಿತ ಇದಾಗಿದೆ.

ವರ್ಷದ ಮೊದಲ ಚತುರ್ಥದಲ್ಲಿ ಜಿಡಿಪಿ ಶೇ.0.3ರಷ್ಟು ಕುಸಿತವಾಗಿದೆ. ಸತತ ಎರಡು ಚತುರ್ಥಗಳಲ್ಲಿ ದೇಶದ ಆರ್ಥಿಕ ಬೆಳವಣಿಗೆ ಕುಸಿತವಾಗಿದೆ.

## ಕಟ್ಟಡ ಕಾರ್ಮಿಕರಿಗೆ ಪರಿಹಾರ ನೀಡುವಂತೆ ಆಗ್ರಹ




ಹರಪನಹಳ್ಳಿ, ಸೆ.2- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕೊರೊನಾ ಲಾಕ್‌ಡೌನ್ ಪರಿಹಾರ 5 ಸಾವಿರ ರೂಪಾಯಿ ನೀಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕಾರ್ಮಿಕ ಮುಖಂಡ ಹುಲಿಕಟ್ಟಿ ರಾಜಪ್ಪ ಮಾತನಾಡಿ ದೇಶದಲ್ಲಿ ಕೊರೊನಾ ಸಾಂಕ್ರಾಮಿಕ ರೋಗದಿಂದ ಲಾಕ್‌ಡೌನ್ ಅವಧಿಯಲ್ಲಿ ಸರ್ಕಾರ ಘೋಷಿಸಿದ 5 ಸಾವಿರ ಪರಿಹಾರ ಇಲ್ಲಿಯವರೆಗೂ ಬಹುತೇಕ ಕಾರ್ಮಿಕರಿಗೆ ಸಿಗದೇ ಪರದಾಡುತ್ತಿದ್ದಾರೆ. ಇಲಾಖೆ ನಿರ್ಲಕ್ಷ್ಯವಹಿಸಿದ್ದು, ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲ್ಲ ಎನ್ನುವಂತಾಗಿದೆ ಎಂದು ಆರೋಪಿಸಿದರು.

ಕೆ. ರಹಮತ್ ಉಲ್ಲಾ ಮಾತನಾಡಿ. ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಸಿಬ್ಬಂದಿ ವೈ.ಟಿ. ಅಶ್ವಿನಿ ಮನವಿ ಸ್ವೀಕರಿಸಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಹೊಂಬಳಗಟ್ಟಿ ಶಿವಾನಂದ, ಸೈಫುಲ್ಲಾ, ಮನ್ಸೂರ್, ಭೋವಿ ದುರುಗಪ್ಪ, ಎಂ. ಶಬ್ಬೀರ್, ಕೆ.ಟಿ. ರಾಜಪ್ಪ ಇನ್ನಿತರೆ ಕಾರ್ಮಿಕರು ಹಾಜರಿದ್ದರು.

## ಮದವೇರಿದ ಆನೆ

ನಾನು, ನಾನೇ, ನನ್ನಿಂದಲೇ
ಎಂಬೋ ಹುಳವ ಮೆದುಳಲಿ
ಹೊಕ್ಕಿಸಿಕೊಂಡು, ಎದುರು
ಬಂದವರಿಗೆ ಸೊಕ್ಕು ತೋರುತ
ಮೆರೆವ ಅಹಂಕಾರ ನಿನ್ನದೆಲ್ಲಾ
ಬರಿಯ ಬಡಿವಾರ

ನಾ ನಡೆದಿದ್ದೇ ದಾರಿ
ನಾ ಹೇಳಿದ್ದೇ ಸರಿ
ನನಗಾರು ಸಾಟಿ
ನನಗೆ ಮಾಡೋಕಾಗಲ್ಲ ಯಾರೂ ಪೋಟಿ
ಎಂದೆನುವ ಅಹಂಕಾರ
ಮರೆತು ಬಿಡುವುದು ತನ್ನ
ಪಯಣ ಕೊನೆಗೊಮ್ಮೆ ಒಂಟಿ

ಶ್ವಾನ ಬೊಗಳಿದರೆ ಗಾನ ಎನರು
ಭಾನ ಮುಟ್ಟುವೆವೆಂದರೆ ಯಾರೂ ನಂಬರು
ತಾನೊಬ್ಬನೇ ಮೇಲು ಎನ್ನುವುದು ಬರಿಯ
ಬುಗಿಲು
ಕಾಲ ಬರುವುದು ನಿನ್ನ ಸೋಲಿಸಲು
ಏನ ಹೇಳುವೆ ಆಗ ಯಾರೂ ಇರರು
ನಿನ್ನ ಅಹವಾಲು ಕೇಳಲು

ಬಾಗಿದಷ್ಟೂ ನೆಲಕೆ ತಾಗುವುದು ನೊಸಲು
ಬೀಗಿದಷ್ಟೂ ತಲೆ ಕೆಡಿಸುವುದು
ಅಹಂಕಾರದ ಅಮಲು
ತಗ್ಗಿದವರೇ.ಬಗ್ಗಿದವರೇ
ಏಳ್ಗೆ ಕಂಡಿಹರು ಜಗದೊಳು.

**- ಎಂ.ಎಸ್.ಮಂಜುಳಾ ಮಂಜಪ್ಪ,**
**ದಾವಣಗೆರೆ.**

## ನಮ್ಮ ಬದುಕು ಹೀಗಿರಲಿ !!



ನಾವು ಜೀವನದಲ್ಲಿ ಕೆಲವೊಂದು ತತ್ವಗಳನ್ನು ಹಾಗೂ ನಿಯಮಗಳನ್ನು ಪರಿಪಾಲಿಸುವುದು ಅತಿ ಅಗತ್ಯ, ಮಾನವೀಯತೆಯನ್ನು ಎಂದಿಗೂ ನಾವು ಮರೆಯಬಾರದು. ಸತ್ಯ, ಧರ್ಮ, ನ್ಯಾಯವನ್ನು ಸದಾ ಪರಿಪಾಲಿಸಬೇಕು. ಸಮಯ ಪ್ರಜ್ಞೆ, ಪ್ರಾಮಾಣಿಕತೆ, ಕಠಿಣ ಪರಿಶ್ರಮ ಹಾಗೂ ಶಿಸ್ತಿನಿಂದಲೇ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯ. ಯಾವುದೇ ಕೆಲಸವನ್ನು ಮಾಡುವಾಗ ಪೂರ್ವ ಸಿದ್ಧತೆ, ಅಚ್ಚುಕಟ್ಟುತನ ಇರಬೇಕು. ಕೊನೆ ಗಳಿಗೆಯ ಪ್ರಯತ್ನ ಸಲ್ಲದು. ಜಾತಿ, ಧರ್ಮ, ಭಾಷೆಗಳ ಭೇದವಿಲ್ಲದೆ, ಎಲ್ಲರನ್ನೂ ಸಮಾನ ರೀತಿಯಿಂದ ಕಾಣಬೇಕು. ದುರಹಂಕಾರ ಜೀವನದ ಸೋಲಿಗೆ ಕಾರಣ, ಬದುಕಿನಲ್ಲಿ ಸರಳತೆ, ಪರಿಶುದ್ಧತೆ, ನೈರ್ಮಲ್ಯ ಇರಬೇಕಾದ್ದು ಮುಖ್ಯ. ತಾಳ್ಮೆಯಿಂದ, ಪ್ರೀತಿಯಿಂದ, ವಿರೋಧಿಗಳ ಮನವನ್ನೂ ಗೆಲ್ಲಬಹುದು. ಎಲ್ಲದಕ್ಕೂ ಆತ್ಮವಿಶ್ವಾಸ, ಮಾನಸಿಕ ಧೃಡತೆ, ಒಳ್ಳೆಯದನ್ನು ಮಾಡುವ ಛಲ ಇರಬೇಕು. ಆಡಿದಂತೆ ಮಾಡಿ ತೋರಿಸಬೇಕು. ಗಾಂಧೀಜಿಯವರು ಹೇಳಿದಂತೆ ಯಾವುದೇ ವಸ್ತುವನ್ನಾದರೂ ಅಗತ್ಯಕ್ಕಿಂತ ಹೆಚ್ಚು ಉಪಯೋಗಿಸಿ ಹಾಳು ಮಾಡಬಾರದು, ಗುರು-ಹಿರಿಯರಲ್ಲಿ ಭಯ-ಭಕ್ತಿಯಿರಬೇಕು. ಯಾವುದೇ ವಿಷಯದಲ್ಲಿ ನಮ್ಮ ಸರದಿಗಾಗಿ ನಾವು ತಾಳ್ಮೆಯಿಂದ ಕಾಯಬೇಕು. ಅಧಿಕ ಪ್ರಸಂಗಿತನ, ಬೇರೆಯವರ ಮಾತಿನ ಮಧ್ಯೆ ಮೂಗು ತೂರಿಸುವುದು ಉತ್ತಮ ವ್ಯಕ್ತಿಯ ಲಕ್ಷಣವಲ್ಲ. ಆತ್ಮವಿಶ್ವಾಸದಿಂದ ಬದುಕನ್ನು ಗೆಲ್ಲಬೇಕು.

ಬದುಕಿನಲ್ಲಿ ನಾವು ಯಾವಾಗಲೂ ಆಶಾವಾದಿಯಾಗಿರಬೇಕು. ನಿರಾಶಾವಾದಿಯಾಗಿರಬಾರದು. ಮಾತಿನಲ್ಲಿ ಸತ್ಯ ಹಾಗೂ ಖಚಿತತೆ ಇರಬೇಕು. ನಮ್ಮ ಯೋಚನೆ ಯಾವಾಗಲೂ ಸಕಾರಾತ್ಮವಾಗಿರಬೇಕು, ನಕಾರಾತ್ಮಕವಾಗಿರಬಾರದು. ಪಂಚೇಂದ್ರಿಯಗಳನ್ನು ನಿಯಂತ್ರಿಸಿಕೊಂಡು ಬಾಳಿದಾಗ ಜಯ ನಮ್ಮದಾಗುತ್ತದೆ. ಇದ್ದುದರಲ್ಲಿ ತೃಪ್ತಿ ಪಡಬೇಕು. ಎಟುಕದ ಹಣ್ಣಿಗೆ ಆಸೆ ಪಡಬಾರದು. ಮರ ಗಿಡಗಳನ್ನು ಬೆಳೆಸಬೇಕು, ಪ್ರೀತಿಸಬೇಕು, ಪ್ರಾಣಿ ದಯೆ ಇರಬೇಕು, ಲಿಂಗ ಭೇದ ಸಲ್ಲದು, ಸ್ತ್ರೀ-ಪುರುಷರನ್ನು ಸಮಾನವಾಗಿ ಕಾಣಬೇಕು. ದೇಹ ನಶ್ವರ ಮಾಡಿದ ಕಾರ್ಯ ಶಾಶ್ವತ. ಭೂಷಣ, ಭಾಷಣ ಅಳಿಯುತ್ತದೆ, ಕೃತಿ ಮಾತ್ರ ಉಳಿಯುತ್ತದೆ.

**- ಜೆಂಬಿಗಿ ಮೃತ್ಯುಂಜಯ,** ಕನ್ನಡ ಉಪನ್ಯಾಸಕರು, ದಾವಣಗೆರೆ.

## ಸರ್ಕಾರಿ ಡೈರಿ, ಕ್ಯಾಲೆಂಡರ್ ಮುದ್ರಣಕ್ಕೆ ತಡೆ

ನವದೆಹಲಿ, ಸೆ. 2 – ಇಲಾಖೆಗಳು ಹಾಗೂ ಸಾರ್ವಜನಿಕ ವಲಯದ ಕಂಪನಿಗಳು ಕ್ಯಾಲೆಂಡರ್, ಡೈರಿ ಹಾಗೂ ಗ್ರೀಟಿಂಗ್ ಕಾರ್ಡ್ ಮುದ್ರಿಸುವುದನ್ನು ನಿಲ್ಲಿಸಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಬಗ್ಗೆ ಕೇಂದ್ರ ಸರ್ಕಾರ ಆದೇಶವೊಂದನ್ನು ಹೊರಡಿಸಿದ್ದು, ಇ-ಬುಕ್‌ಗಳಿಗೆ ಉತ್ತೇಜನ ನೀಡಲಾಗುವುದು. ಇಲಾಖೆಗಳು ಡಿಜಿಟಲ್ ಮಾರ್ಗದ ಮೂಲಕ ಪ್ರಕಟಣೆಗಾಗಿ ಆವಿಷ್ಕಾರಿ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂದು ತಿಳಿಸಿದೆ.

### ಶಿವ ವಚನ

ಹಣ ಜಾಸ್ತಿಯಾದರೆ
ಹೆಣದಂತಾಗುತ್ತಾರೆ
ಗುಣಹೀನರು
ಗುಣ ಜಾಸ್ತಿಯಾದರೆ
ಹೆಣವೇ ಹಣವಂತಗಿಂತ
ಮೇಲು
ಹಣಗುಣ ಮನುಜನ
ತೂಗೋ ತಕ್ಕಡಿಯೋ
ಕಾವ್ಯಾತ್ಮ

**- ಆರ್. ಶಿವಕುಮಾರಸ್ವಾಮಿ ಕುರ್ಕಿ**

# ವಿಂಗ್ ಬಲಪಡಿಸಿದಾಗ ಪಕ್ಷ ಬೆಳೆಯಲು ಸಾಧ್ಯ

## ಕಾಂಗ್ರೆಸ್ ಸೇವಾದಳ ಸದಸ್ಯತ್ವ ಅಭಿಯಾನದಲ್ಲಿ ಪ್ಯಾರಿಜಾನ್ ಅಭಿಮತ



ದಾವಣಗೆರೆ, ಸೆ.2- ಬ್ರಿಟಿಷರನ್ನು ಹೊಡೆದು ಓಡಿಸುವಲ್ಲಿ ಕಾಂಗ್ರೆಸ್ ಮುಖ್ಯಪಾತ್ರ ವಹಿಸಿದೆ. ಬಿಜೆಪಿ ಬ್ರಿಟಿಷರಿಗಿಂತ ಅಪಾಯಕಾರಿ ಪಕ್ಷವಾಗಿದ್ದು, ಬ್ರಿಟಿಷರಂತೆ ಒಡೆದು ಆಳುವ ಕೆಲಸ ಮಾಡುತ್ತಿದೆ. ಈ ಬಗ್ಗೆ ಜನರಿಗೆ ತಿಳಿಸುವ ಕೆಲಸವನ್ನು ನಮ್ಮ ಕಾಂಗ್ರೆಸ್ ಪಕ್ಷ ಮಾಡಬೇಕಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ರಾಜ್ಯಾಧ್ಯಕ್ಷರೂ, ಎಐಸಿಸಿ ಸದಸ್ಯರೂ ಆಗಿರುವ ಕುಮಾರಿ ಎಸ್. ಪ್ಯಾರಿಜಾನ್ ತಿಳಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಿನ್ನೆ ಏರ್ಪಾಡಾಗಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶ ಮತ್ತು ರಾಜ್ಯಕ್ಕೆ ಕಾಂಗ್ರೆಸ್ ಅನಿವಾರ್ಯವಾಗಿದೆ. ಬ್ರಿಟಿಷರನ್ನು ಓಡಿಸಲು ಹಿಂದೂ-ಮುಸ್ಲಿಂ-ಕ್ರೈಸ್ತ ಎಲ್ಲಾ ಜಾತಿ, ಧರ್ಮಗಳು ರಕ್ತ ಸುರಿಸಿವೆ. ಯಾವುದೇ ಜಾತಿ, ಧರ್ಮ ಕೇಳದೇ ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗುವ ಪಕ್ಷವೇ ಕಾಂಗ್ರೆಸ್ ಪಕ್ಷ ಎಂದು ಹೇಳಿದರು.

ಹರಿಹರದ ಶಾಸಕ ಎಸ್.ರಾಮಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಸೇವಾದಳ ಬುನಾದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ 2 ಕೋಟಿ ರೂ. ಉದ್ಯೋಗ ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಕೋಟ್ಯಾಂತರ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಮೋದಿ ಸುಳ್ಳು ಹೇಳುತ್ತಾ ದೇಶವನ್ನು ಅವನತಿಯ ಕಡೆಗೆ ತಳ್ಳಿದ್ದಾರೆ. ಈಗ ಬಿಜೆಪಿ ವರ್ಚಸ್ ಕಳೆದಿಕೊಂಡಿದೆ. ಈ ನಿಟ್ಟಿನಲ್ಲಿ ಯುವಕರನ್ನು ಪಕ್ಷಕ್ಕೆ ಸೆಳೆಯುವ ಕೆಲಸ ಮಾಡಬೇಕು ಎಂದು ಕಾರ್ಯಕರ್ತರಿಗೆ ಮನವರಿಕೆ ಮಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕ ಡಿ. ಬಸವರಾಜ್ ಮಾತನಾಡಿದರು. ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾ ಮಾಲತೇಶರಾವ್ ಜಾಧವ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸೇವಾ ದಳದ ಜಿಲ್ಲಾಧ್ಯಕ್ಷ ಡೋಲಿ ಚಂದ್ರು, ಉಮಾದೇವಿ, ರಮೇಶ್, ಅಬ್ದುಲ್ ಜಬ್ಬಾರ್, ಕಲ್ಪನಾ ರಾಜು, ಮಂಜುನಾಥ್, ಎಸ್.ಟಿ. ಘಟಕದ ಜಿಲ್ಲಾಧ್ಯಕ್ಷ ಓಬಳೇಶಪ್ಪ, ಸಂಘಟಿತ ಕಾರ್ಮಿಕ ಜಿಲ್ಲಾಧ್ಯಕ್ಷ ನಂಜಾನಾಯ್ಕ, ಸಾಮಾಜಿಕ ಜಾಲತಾಣದ ಕಾರ್ಯದರ್ಶಿ ಕೆ.ಎಲ್. ಹರೀಶ್ ಬಸಾಪುರ, ಮಹಿಳಾ ಕಾಂಗ್ರೆಸ್‌ನ ಸುಷ್ಮಾ ಪಾಟೀಲ್, ಆಶಾ ಮುರಳಿ, ಶುಭಮಂಗಳ, ದ್ರಾಕ್ಷಾಯಣಮ್ಮ ರಾಜೇಶ್ವರಿ ಉಮೇಶ್, ಕವಿತಾ ಚಂದ್ರಶೇಖರ್, ಸುನಿತಾ ಭೀಮಣ್ಣ, ಉಮಾ ಕುಮಾರ, ಗೀತಾ ಚಂದ್ರಶೇಖರ್, ಕಾವೇರಿ, ದಿಲ್ ಶಾ, ರೆಹಜಾನ್, ಲಿಯಕತ್ ಅಲಿ, ಇಬ್ರಾಹಿಂ ಖಲೀಲ್, ದಾದಾಪೀರ್, ಪ್ರವೀಣ್ ಕುಮಾರ್, ಹರೀಶ ಎಚ್, ರಂಗನಾಥ ಸ್ವಾಮಿ, ಖಾಲಿದ್ ಪೈಲ್ವಾನ್, ಯುವರಾಜ್, ಕೆ.ಎಂ. ಮಂಜುನಾಥ್ ಸೇರಿದಂತೆ ಇತರರು ಇದ್ದರು.

## ಅಂಗವಾಡಿ ಕಾರ್ಯಕರ್ತೆಯರಿಗೆ ಮೊಬೈಲ್

**(3ನೇ ಪುಟದಿಂದ)** ಯೋಜನೆಯ ಫಲಾನುಭವಿಗಳನ್ನೂ ಈ ಮೊಬೈಲ್ ಆಪ್ ಮೂಲಕ ಗುರುತಿಸಲಾಗುವುದು. ಅವರ ಎಲ್ಲ ವಿವರಗಳನ್ನು ಅಪ್ಡೇಟ್ ಮಾಡುವುದು ಸುಲಭವಾಗಲಿದೆ.

ಗರ್ಭಿಣಿಯರ ವಿವರಗಳು ಡಿಜಿಟಲ್ ಆಗುವುದರಿಂದ, ಸ್ತ್ರೀ ಭ್ರೂಣ ಹತ್ಯೆ ತಡೆಗೆ ನಿಗಾ ವಹಿಸಲು ಅನುಕೂಲವಾಗಲಿದೆ ಎಂದು ವಿಜಯ್ ಕುಮಾರ್ ಹೇಳಿದ್ದಾರೆ.

ಕೆಲವೊಮ್ಮೆ ಅಂಗನವಾಡಿಗಳನ್ನು ತೆರೆದಿದ್ದೇವೆ ಎಂದು ಸುಳ್ಳು ಹೇಳುವ, ಸುಳ್ಳು ಲೆಕ್ಕ ತೋರಿಸುವ ದೂರುಗಳಿಗೆ ಕಡಿವಾಣ ಬೀಳಲಿದೆ. ಅಧಿಕಾರಿಗಳು, ಸೂಪರ್‌ವೈಸರ್‌ಗಳು ಅಂಗನವಾಡಿಗಳಿಗೆ ಭೇಟಿ ನೀಡುವ ಬಗ್ಗೆಯೂ ನಿಖರ ಮಾಹಿತಿ ಸಿಗಲಿದೆ ಎಂದವರು ಹೇಳಿದ್ದಾರೆ.

# ಕೃಷಿಕರಿಗಿಂತ ದಿನಗೂಲಿ, ಸ್ವಯಂ ಉದ್ಯೋಗಿಗಳಲ್ಲೇ ಆತ್ಮಹತ್ಯೆ ಹೆಚ್ಚು



ನವದೆಹಲಿ, ಸೆ. 2 – ದಿನಗೂಲಿ ವಲಯದಲ್ಲಿರುವ 32,563 ಜನರು ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಂಡಿ ದ್ದಾರೆ. ಒಟ್ಟು ಆತ್ಮಹತ್ಯೆಗಳಲ್ಲಿ ಇವರ ಪಾಲು ಅತಿ ಹೆಚ್ಚಿನ ಶೇ.23.4ರಷ್ಟಾಗಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ.) ಮಾಹಿತಿ ತಿಳಿಸಿದೆ.

2018ರಲ್ಲಿ ದಿನಗೂಲಿ ವಲಯದ 30,132 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಅಂಕಿ ಅಂಶಗಳು ತಿಳಿಸಿವೆ.

ಭಾರತದಲ್ಲಿ 2019ರಲ್ಲಿ ಒಟ್ಟಾರೆ 1,39,516 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ದಿನಗೂಲಿ ನಂತರ ಅತಿ ಹೆಚ್ಚಿನ ಆತ್ಮಹತ್ಯೆ ಕಂಡು ಬಂದಿರುವುದು ಸ್ವಯಂ ಉದ್ಯೋಗಿಗಳಲ್ಲಿ. ಶೇ.11.6ರಷ್ಟು ಸ್ವಯಂ ಉದ್ಯೋಗಿಗಳು ಆತ್ಮಹತ್ಯೆಗೆ ಸಿಲುಕಿದ್ದಾರೆ. ಆತ್ಮಹತ್ಯೆಗಳಲ್ಲಿ ನಿರುದ್ಯೋಗಿಗಳ ಪಾಲು ಶೇ.10.1, ವೇತನದಾರರ ಪಾಲು ಶೇ.9.1, ಕೃಷಿ ವಲಯದಲ್ಲಿರುವವರ ಪಾಲು ಶೇ.7.4ರಷ್ಟಾಗಿದೆ.

ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.12.6ರಷ್ಟು ಜನರು ಅನಕ್ಷರಸ್ಥರಾಗಿದ್ದಾರೆ. ಶೇ.3.7ರಷ್ಟು ಜನರು ಪದವೀಧರರಾಗಿದ್ದಾರೆ ಎಂದು ಅಂಕಿ ಅಂಶಗಳು ತಿಳಿಸಿವೆ.

# ಉದ್ಯೋಗ ಖಾತ್ರಿ ಕೆಲಸದ ಅವಧಿ ಹೆಚ್ಚಳಕ್ಕೆ ಆಗ್ರಹ

## ಜಿಲ್ಲೆಯ ಗ್ರಾಮ ಪಂಚಾಯತಿ ಎದುರು ಪ್ರತಿಭಟನೆ




ದಾವಣಗೆರೆ, ಸೆ.2- ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ಅವಧಿಯನ್ನು 200 ದಿನಗಳಿಗೆ ಹೆಚ್ಚಿಸಲು ಒತ್ತಾಯಿಸಿ, ಅಖಿಲ ಭಾರತ ಯುವಜನ ಫೆಡರೇಷನ್ ಜಿಲ್ಲಾ ಸಮಿತಿ ಹಾಗೂ ಎಐವೈಎಫ್ ಗ್ರಾಮ ಘಟಕಗಳಿಂದ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿ ಕಚೇರಿ ಎದುರು ಇಂದು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ ರೈತ ವಿರೋಧಿ ಭೂ ಸುಧಾರಣೆ ಕಾಯ್ದೆ ಜಾರಿಗೊಳಿಸಿ, ಇಡೀ ರೈತರನ್ನು ಕೃಷಿ ರಂಗದಿಂದಲೇ ಹೊರಹಾಕುವ ಸಂಚು ನಡೆದಿದೆ. ಭೂ ಸುಧಾರಣೆ ಕಾಯ್ದೆಯಿಂದ ಬಂಡವಾಳ ಶಾಹಿ ಪರ ತಿದ್ದುಪಡಿ ಮಾಡಿ, ರೈತರ ಕೃಷಿ ಭೂಮಿಯನ್ನು ಬಂಡವಾಳಶಾಹಿಗಳು ಲಪಟಾಯಿಸಿ, ರೈತರನ್ನೇ ಬೀದಿಪಾಲು ಮಾಡುವ ಷಡ್ಯಂತ್ರ ರೂಪಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಾರ್ಪೋರೇಟ್ ಕಂಪನಿಗಳಿಗೆ ಕೋಟ್ಯಾಂತರ ರೂ. ರಿಯಾಯಿತಿ ನೀಡುವ ಮೋದಿ ಸರ್ಕಾರ ರೈತರ ಸಾಲವನ್ನು ಒಂದೇ ಒಂದು ಬಾರಿ ಮನ್ನಾ ಮಾಡಲು ಮನಸ್ಸು ಮಾಡುತ್ತಿಲ್ಲ. ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ನೀಡಲು ತಯಾರಿಲ್ಲ. ಕೊರೊನಾದಿಂದ ಮತ್ತೆ ತಮ್ಮ ಹಳ್ಳಿಗಳಿಗೆ ಸಣ್ಣಪುಟ್ಟ ಪಟ್ಟಣ ನಗರಗಳಿಂದ ಯುವಕರು ಮರಳಿ ವಾಪಸ್ಸಾಗಿದ್ದಾರೆ. ಆದ್ದರಿಂದ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ದಿನಗಳನ್ನು 200 ದಿನಗಳಿಗೆ ಹೆಚ್ಚಿಸಿ, ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು, ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಜಿಲ್ಲಾ ಕಾರ್ಯದರ್ಶಿ ಎ. ತಿಪ್ಪೇಶಿ, ಜಿಲ್ಲಾ ಉಪಾಧ್ಯಕ್ಷ ಕಾಂ. ಫಜುಲುಲ್ಲಾ, ಜಿಲ್ಲಾ ಉಪಾಧ್ಯಕ್ಷ ಗದಿಗೇಶ್ ಪಾಳೇದ, ಜಿಲ್ಲಾ ಉಪಾಧ್ಯಕ್ಷ ಇರ್ಫಾನ್, ಜಿಲ್ಲಾ ಸಹಕಾರ್ಯದರ್ಶಿ ಮಂಜುನಾಥ್ ಹೆಚ್.ಎಂ., ಜಿಲ್ಲಾ ಸಹಕಾರ್ಯದರ್ಶಿ ಮಂಜುನಾಥ ದೊಡ್ಡಮನೆ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಂಜುನಾಥ ಹರಳಯ್ಯನಗರ, ಉಪಾಧ್ಯಕ್ಷರು ರುದ್ರೇಶ್ ಮಳಲಕೆರೆ, ಜಿಲ್ಲಾ ಖಜಾಂಚಿ ಅಂಜಿನಪ್ಪ ಮಳಲಕೆರೆ, ಜಿಲ್ಲಾ ಸಂಘಟನಾ ಕಾರ್ಯದರ್ಶಿ . ಮಂಜುನಾಥ ಮಳಲಕೆರೆ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಲೋಹಿತ್ ಎಸ್.ಓ.ಜಿ. ಕಾಲೋನಿ, ಜಿಲ್ಲಾ ಉಪಾಧ್ಯಕ್ಷರು ತಿಪ್ಪೇಶಿ ಹೊನ್ನೂರು, ದಾವಣಗೆರೆ ತಾ. ಉಪಾಧ್ಯಕ್ಷರು, ಹನುಮಂತಪ್ಪ ಹಾಲೇಕಲ್ಲು, ತಾ. ಕಾರ್ಯದರ್ಶಿ ಆರ್.ಮಂಜುನಾಥ, ನಗರ ಸಂಘಟನಾ ಕಾರ್ಯದರ್ಶಿ ಎ.ಮಂಜುನಾಥ, ಸಂಚಾಲಕರು ಪರಶುರಾಮ ಹೆಚ್.ಗುದ್ದಾಳ್, ಸಂಚಾಲಕರು ಎ.ರಂಗಸ್ವಾಮಿ, ಹೊನ್ನೂರು ಹನುಮಂತಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಜಗಳೂರು : ಪ್ರತಿಯೊಬ್ಬರೂ ಹಿರಿಯ ನಾಗರಿಕರನ್ನು ಗೌರವಿಸಬೇಕು

## ಶಾಸಕ ಎಸ್.ವಿ.ರಾಮಚಂದ್ರ



ಜಗಳೂರು, ಸೆ.2- ಮುಪ್ಪು ಎಂಬುದು ಎಲ್ಲರಿಗೂ ಕಟ್ಟಿಟ್ಟ ಬುತ್ತಿಯಾಗಿದ್ದು, ಪ್ರತಿಯೊಬ್ಬರೂ ಹಿರಿಯ ನಾಗರಿಕರನ್ನು ಗೌರವಿಸಬೇಕು, ವೃದ್ಧರ ಅನುಕೂಲಕ್ಕಾಗಿ ಪಟ್ಟಣದಲ್ಲಿ ವೃದ್ಧಾಶ್ರಾಮ ಸ್ಥಾಪಿಸಲಾಗುವುದು ಎಂದು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್. ವಿ. ರಾಮಚಂದ್ರ ಹೇಳಿದರು.

ತಾಲ್ಲೂಕು ಹಿರಿಯ ನಾಗರಿಕರ ಸಂಘದ ವತಿಯಿಂದ ಶಾಸಕ ಎಸ್.ವಿ.ರಾಮಚಂದ್ರ, ಶಿವಮೊಗ್ಗ ಮಹಾನಗರಪಾಲಿಕೆಯ ಉಪ ಮಹಾಪೌರರಾದ ಸುರೇಖ ಮುರುಳೀಧರ್ ಅವರಿಗೆ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕೊರೊನಾ ಹಾವಳಿಯಿಂದ ಹಣಕಾಸಿನ ತೊಂದರೆಯಿದ್ದು ಮುಂದಿನ ವರ್ಷ ಗಾಂಧಿ ಭವನ ನಿರ್ಮಿಸಲು ಒತ್ತು ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಪಟ್ಟಣದಲ್ಲಿ ರಂಗ ಮಂದಿರ, ಶಾಸಕರ ಕಚೇರಿ, ಆಡಿಟೋರಿಯಂ ನಿರ್ಮಾಣ ಮಾಡುತ್ತಿದ್ದು ಎಲ್ಲರಿಗೂ ಅನುಕೂಲವಾಗಲಿದೆ. ಪಟ್ಟಣದ ಅಭಿವೃದ್ಧಿಯ ಜೊತೆಗೆ ಸಿಸಿ ರಸ್ತೆ ಚರಂಡಿ ಮಾಡಲಾಗುತ್ತಿದೆ. ಒಳಚರಂಡಿ ವ್ಯವಸ್ಥೆಗೆ ಅನುಮತಿ ದೊರೆತಿದೆ ಎಂದರು.

ಶಿವಮೊಗ್ಗದ ಉಪ ಮಹಾ ಪೌರರಾದ ಸುರೇಖ ಮಾತನಾಡಿ, ಹಿರಿಯರನ್ನು ನಾವು ಮನೆಯಲ್ಲಿ ಗೌರವಿಸಿ ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು ಎಂದ ಅವರು, ಹಲವಾರು ಸನ್ಮಾನಗಳು ದೊರೆತಿರಬಹುದು. ಆದರೆ ತವರಿನಲ್ಲಿ ದೊರೆಯುವ ಸನ್ಮಾನಕ್ಕೆ ಬೆಲೆ ಕಟ್ಟಲಾಗದು ಎಂದು ಹೇಳಿದರು.

ಹಿರಿಯ ನಾಗರಿಕರ ಸಂಘದ ತಾಲ್ಲೂಕು ಅಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ, ಜಗಳೂರು ಪಟ್ಟಣದಲ್ಲಿ ಹುಟ್ಟಿದ ಮಹಿಳೆ ಇಂದು ಶಿವಮೊಗ್ಗ ಮಹಾನಗರ ಪಾಲಿಕೆಯ ಉಪ ಮಹಾಪೌರರಾಗಿ ಆಯ್ಕೆಯಾಗಿದ್ದಾರೆ. ಶಾಸಕ ರಾಮಚಂದ್ರ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಹಿರಿಯ ನಾಗರಿಕರ ಸಂಘದ ಪಧಾದಿಕಾರಿಗಳು ಮತ್ತು ನಿವೃತ್ತ ಶಿಕ್ಷಕ ಜಿ.ವಿ. ನಾರಾಯಣ ಸ್ವಾಮಿ, ಜಿ.ಪಂ ಮಾಜಿ ಸದಸ್ಯ ಹೆಚ್. ನಾಗರಾಜ್, ಬಿಸ್ತುವಳ್ಳಿ ಬಾಬು, ಬಿದರಕೆರೆ ರವಿಕುಮಾರ್, ಡಿ.ವಿ.ನಾಗಪ್ಪ, ವಕೀಲ ತಿಪ್ಪೇಸ್ವಾಮಿ ಸೇರಿದಂತೆ, ಹಿರಿಯ ನಾಗರಿಕರು ಹಾಜರಿದ್ದರು.

# ಡಿ.ಬಿ.ಟಿ ಮೂಲಕ ಪ್ರೋತ್ಸಾಹ ಧನ ಜಮೆ

ದಾವಣಗೆರೆ, ಸೆ.2- ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಅವರು ನಡೆಸುವ 10ನೇ ತರಗತಿ ಪರೀಕ್ಷೆಗಳಲ್ಲಿ ಶೇ.60 ರಿಂದ 74.99 ಹಾಗೂ ಶೇ.75 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ಕ್ರಮವಾಗಿ ತಲಾ ರೂ. 7,000/- ಮತ್ತು ರೂ.15,000/- ಗಳ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ.

2020ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2020-21ನೇ ಸಾಲಿನಿಂದ ಡಿ.ಬಿ.ಟಿ ಮೂಲಕ ಅನುಷ್ಠಾನ ಮಾಡಿ ಪ್ರೋತ್ಸಾಹ ಧನವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶಿವಾನಂದ ಎಂ. ಕುಂಬಾರ ತಿಳಿಸಿದ್ದಾರೆ.

# ಗ್ರಾ.ಪಂ ಚುನಾವಣೆ ಸಂಬಂಧ ಮತದಾರರ ಪಟ್ಟಿ ಪ್ರಕಟ

ದಾವಣಗೆರೆ, ಸೆ. 2- ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಗ್ರಾಮ ಪಂಚಾಯ್ತಿ ಸಾರ್ವತ್ರಿಕ ಚುನಾವಣೆ 2020 ರ ಸಂಬಂಧ ದಿನಾಂಕ 31-08-2020 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರತಿಯೊಂದು ಕ್ಷೇತ್ರದ ಮತಗಟ್ಟೆಯಲ್ಲಿ, ಗ್ರಾ.ಪಂ ಕಚೇರಿ, ತಾಲ್ಲೂಕು ಕಚೇರಿ ಹಾಗೂ ಇತರೇ ಕಚೇರಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಲಾಗಿದ್ದು ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

ದಾವಣಗೆರೆ ತಾಲ್ಲೂಕಿನ 42 ಗ್ರಾ.ಪಂ.ಗಳು, 242 ಮತಗಟ್ಟೆಗಳು, ಹರಿಹರ ತಾಲ್ಲೂಕಿನಲ್ಲಿ 24 ಗ್ರಾ.ಪ.ಂಗಳು, 134 ಮತಗಟ್ಟೆಗಳು, ಹೊನ್ನಾಳಿ 29 ಗ್ರಾ.ಪಂ, 130 ಮತಗಟ್ಟೆಗಳು, ನ್ಯಾಮತಿ 18 ಗ್ರಾ.ಪಂ., 90 ಮತಗಟ್ಟೆ, ಚನ್ನಗಿರಿ 61 ಗ್ರಾ.ಪಂ, 305 ಮತಗಟ್ಟೆ ಹಾಗೂ ಜಗಳೂರು ತಾಲ್ಲೂಕಿನ 22 ಗ್ರಾ.ಪಂ.ಗಳಲ್ಲಿ 189 ಮತಗಟ್ಟೆಗಳಿವೆ. ಒಟ್ಟು ಜಿಲ್ಲೆಯಲ್ಲಿ 196 ಗ್ರಾಮ ಪಂಚಾಯ್ತಿಗಳಿದ್ದು, 1090 ಮತಗಟ್ಟೆಗಳಿವೆ.

**ಮತದಾರರ ವಿವರ:** ದಾವಣಗೆರೆ ತಾಲ್ಲೂಕು ಪುರುಷ ಮತದಾರರು 99,709, ಮಹಿಳಾ ಮತದಾರರು 98,354 ಒಟ್ಟು 1.9.8063. ಹರಿಹರ ಕ್ಷೇತ್ರ- ಪುರುಷರು 5.8793, ಮಹಿಳೆಯರು 57.455 ಒಟ್ಟು 1,16,248. ಚನ್ನಗಿರಿ - ಪುರುಷರು 1,21,018, ಮಹಿಳೆಯರು 1,17,566, ಒಟ್ಟು 2,38,584. ಹೊನ್ನಾಳಿ - ಪುರುಷರು 54,458, ಮಹಿಳೆಯರು 53,313 ಒಟ್ಟು 1,07,771. ನ್ಯಾಮತಿ- ಪುರುಷರು 35,551, ಮಹಿಳೆಯರು 34,821 ಒಟ್ಟು 70,372. ಜಗಳೂರು - ಪುರುಷರು 66,227, ಮಹಿಳೆಯರು 64,437 ಒಟ್ಟು 1,30,664 ಮತ ದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

# ಮುಖರ್ಜಿ ನಿಧನಕ್ಕೆ ಕಮ್ಯುನಿಸ್ಟ್ ಶ್ರದ್ಧಾಂಜಲಿ

ದಾವಣಗೆರೆ, ಸೆ.2- ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಕಾಂ|| ಪಂಪಾಪತಿ ಭವನದಲ್ಲಿ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಹೆಚ್.ಕೆ.ರಾಮಚಂದ್ರಪ್ಪ ಅವರು, ಪ್ರಣಬ್ ಮುಖರ್ಜಿಯವರು ದೇಶ ಕಂಡ ಅತ್ಯುತ್ತಮ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸಿದ್ದರು. ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಹಣಕಾಸು ಮಂತ್ರಿಗಳಾಗಿ, ವಿದೇಶಾಂಗ ಸಚಿವರಾಗಿ, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಇನ್ನೂ ಹಲವಾರು ಜವಾಬ್ದಾರಿಯುತ ಸ್ಥಾನಗಳನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸಿದ್ದರು. ಅವರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ಸಭೆಯಲ್ಲಿ ಪಕ್ಷದ ಜಿಲ್ಲಾ ಮಂಡಳಿ ಸಹ ಕಾರ್ಯದರ್ಶಿಗಳಾದ ಆವರಗೆರೆ ಚಂದ್ರು, ಹೆಚ್.ಜಿ.ಉಮೇಶ್, ಜಿಲ್ಲಾ ಖಜಾಂಚಿ ಆನಂದರಾಜ್, ಜಿಲ್ಲಾ ಸಮಿತಿ ಮುಖಂಡರುಗಳಾದ ಟಿ.ಎಸ್.ನಾಗರಾಜ್, ಆವರಗೆರೆ ವಾಸು, ಎನ್.ಟಿ.ಬಸವರಾಜ್, ಸಿ.ರಮೇಶ್, ಸರೋಜಾ, ಎಂ.ಬಿ.ಶಾರದಮ್ಮ, ಗದಿಗೇಶ್ ಪಾಳೇದ್, ನರೇಗ ರಂಗನಾಥ್, ಪಿ.ಷಣ್ಮುಖ ಸ್ವಾಮಿ, ಪರಶುರಾಮ, ರಾಜು ಕೆರೆಯಾಗಳಹಳ್ಳಿ, ಎ.ತಿಪ್ಪೇಶ್, ಕುಂದುವಾಡ ಚಂದ್ರಪ್ಪ, ವಿ.ಲಕ್ಷ್ಮಣ, ಕೆ.ಜಿ. ಶಿವಮೂರ್ತಿ, ಯಲ್ಲಪ್ಪ, ಹಾಲೇಕಲ್ ಲಂಕೇಶ್, ಪಿ.ಎಲ್.ನಾಗೇಂದ್ರ ಸೇರಿದಂತೆ ಇತರರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

# ಅನ್ವೇಷಣೆಯಲ್ಲಿ ಭಾರತಕ್ಕೆ 48ನೇ ಸ್ಥಾನ

ನವದೆಹಲಿ, ಸೆ. 2 – ಜಾಗತಿಕ ಅನ್ವೇಷಣಾ ಶ್ರೇ ಯಾಂಕದಲ್ಲಿ ಭಾರತ 48ನೇ ಸ್ಥಾನ ಪಡೆದುಕೊಂಡಿದೆ. ದೇಶ ಇದೇ ಮೊದಲ ಬಾರಿಗೆ ಈ ಶ್ರೇಯಾಂಕದಲ್ಲಿ ಮೊದಲ 50 ದೇಶಗಳ ಸಾಲಿಗೆ ಬಂದಿದೆ. 2020ರ ಜಾಗತಿಕ ಅನ್ವೇಷಣ ಶ್ರೇಯಾಂಕವನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಇದನ್ನು ವಿಶ್ವ ಬೌದ್ಧಿಕ ಆಸ್ತಿ ಸಂಘಟನೆ, ಕೊರ್ನೆಲ್ ವಿಶ್ವವಿದ್ಯಾನಿಲಯ ಹಾಗೂ ಇನ್‌ಸೀಡ್ ಬ್ಯುಸಿನೆಸ್ ಸ್ಕೂಲ್‌ಗಳು ಜಂಟಿಯಾಗಿ ರೂಪಿಸಿವೆ.

ಚೀನಾ, ಭಾರತ, ಫಿಲಿ ಪೈನ್ಸ್ ಹಾಗೂ ವಿಯಟ್ನಾಮ್ ದೇಶಗಳು ಈ ವರ್ಷದ ಶ್ರೇಯಾಂಕ ದಲ್ಲಿ ಗಣನೀಯ ಮುನ್ನಡೆ ಗಳಿಸಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಕಡಿಮೆ ಆದಾಯದ ದೇಶಗಳಲ್ಲಿ ಭಾರತ ಮೂರನೇ ಅತಿ ಹೆಚ್ಚಿನ ಶ್ರೇಯಾಂಕ ಹೊಂದಿದೆ ಎಂದು ತಿಳಿಸಲಾಗಿದೆ.

# ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಸಮಿತಿಗೆ ನೇಮಕ

ದಾವಣಗೆರೆ, ಸೆ.2- ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಎಸ್ಸಿ ಮೋರ್ಚಾದ ಪದಾಧಿಕಾರಿಗಳನ್ನು ಹಾಗೂ ಸದಸ್ಯರುಗಳನ್ನು ಜಿಲ್ಲಾಧ್ಯಕ್ಷರಾದ ಹನಗವಾಡಿ ವೀರೇಶ್ ಅವರ ಆದೇಶದ ಮೇರೆಗೆ ಎಸ್ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಎನ್. ಹನುಮಂತನಾಯ್ಕ ನೇಮಕ ಮಾಡಿದ್ದಾರೆ.

ಅಧ್ಯಕ್ಷರಾಗಿ ಎನ್. ಹನುಮಂತನಾಯ್ಕ (ಮಾಯಕೊಂಡ) ಉಪಾಧ್ಯಕ್ಷರುಗಳಾಗಿ ಡಿ. ಹನುಮಂತಪ್ಪ (ದಾವಣಗೆರೆ ದಕ್ಷಿಣ), ಪಿ. ಹನುಮಂತಪ್ಪ (ಹರಿಹರ), ಸೇವಾ ನಾಯ್ಕ (ಮಾಯಕೊಂಡ), ರಾಘವೇಂದ್ರ ಕೊಂಡಜ್ಜಿ (ಹರಿಹರ ಗ್ರಾಮಾಂತರ), ನಾಗಪ್ಪ (ದಾವಣಗೆರೆ ದಕ್ಷಿಣ) ಹಾಗೂ ಪ್ರಧಾನ ಕಾರ್ಯದರ್ಶಿಗಳು ಜಿ.ವಿ. ಗಂಗಾಧರ (ದಾವಣಗೆರೆ ಉತ್ತರ), ಪಿ.ಎನ್. ಆಂಜನೇಯ (ಹರಿಹರ) ಆಯ್ಕೆಯಾಗಿದ್ದಾರೆ.

ಕಾರ್ಯದರ್ಶಿಗಳು ಜುಂಜಾ ನಾಯ್ಕ (ಹೊನ್ನಾಳಿ), ಎಂ. ದುರುಗೇಶ್ (ದಾವಣಗೆರೆ ಉತ್ತರ), ಸತೀಶ್ ನಾಯ್ಕ (ಜಗಳೂರು), ಆರ್. ಮಂಜುನಾಥ್ (ದಾವಣಗೆರೆ ದಕ್ಷಿಣ), ಆರ್. ಶಿವಾನಂದ (ದಾವಣಗೆರೆ ಉತ್ತರ) ಹಾಗೂ ಕೋಶಾಧ್ಯಕ್ಷರಾಗಿ ಅನಿಲ್ ಕುಮಾರ್ (ಮಾಯಕೊಂಡ) ನೇಮಕಗೊಂಡಿದ್ದಾರೆ.

ಸದಸ್ಯರುಗಳಾಗಿ ಟಿ. ಚಂದ್ರಶೇಖರ್ (ಜಗಳೂರು), ಜಯಣ್ಣ (ಮಾಯಕೊಂಡ), ಷಣ್ಮುಖ (ದಾವಣಗೆರೆ ಉತ್ತರ), ಮಧುಬಾಯಿ (ಮಾಯಕೊಂಡ), ಕೆ.ಎಂ. ನಾಗರಾಜ್ (ಮಾಯಕೊಂಡ), ಜಯಣ್ಣ (ಮಾಯಕೊಂಡ), ಮಲ್ಲಪ್ಪ (ದಾವಣಗೆರೆ), ಅರುಣ್ ಕುಮಾರ್ (ಚನ್ನಗಿರಿ), ನಾಗರಾಜ್ ನಾಯ್ಕ (ದಾವಣಗೆರೆ ಉತ್ತರ) ಹಾಗೂ ಹೆಚ್. ದೇವೇಂದ್ರಪ್ಪ (ಹರಿಹರ) ನೇಮಕಗೊಂಡಿದ್ದಾರೆ.

## ನನ್ನ ಮನದ ಅರಸಿ

ನೀ ರಾಣಿ ಅಲ್ಲದಿದ್ದರೂ ನನ್ನನ್ನು ರಾಣಿಯಂತೆ
ಬೆಳೆಸುತ್ತಿರುವೆ
ಬೇಕು ಎಂದರೆ ಕಷ್ಟಪಟ್ಟು ತಂದು ಕೊಡುವೆ
ಕಷ್ಟವೆಲ್ಲಾ ನನಗಾಗಿ ಸುಖವೆಲ್ಲ ನಿನಗಾಗಿ ಎಂದು
ಭಾವಿಸುವೆ
ನೀ ಯಾರೇ ದೇವತೆ; ನೀ ನನ್ನ ಮಾತೇ

ಎಷ್ಟೇ ಸಂಕಟಗಳು ಬಂದರು ನಾನಿರುವೆ ಎನ್ನುತ
ಕುಟುಂಬದವರ ನಗುವಲ್ಲಿ ಸುಖವ ಕಾಣುತ್ತ
ದಿನವೂ ಶ್ರಮಪಡುತ ಇರುವೆ
ನೀನ್ಯಾರೆ ದೇವತೆ; ನೀ ನನ್ನ ಮಾತೆ

ನೀ ನನ್ನ ಸ್ವಾರ್ಥಕ್ಕೆ ಮತ್ತೊಂದು ಅರ್ಥವೇ ನೀನು
ಕರುಣೆ ದಯೆ ನೀನೊಂದು ಹೆಸರು ನೀನು
ದೇವರು ಪದಕ್ಕೆ ಮತ್ತೊಂದು ರೂಪವೇ ನೀನು
ನೀ ಯಾರೇ ದೇವತೆ ; ನೀ ನನ್ನ ಮಾತೆ

ಹುಟ್ಟಿಸಿದ್ದು ಮಾತೆಯಾಗಿ
ಬೆಳೆಸಿದ್ದು ಅಕ್ಕನಾಗಿ
ಇರುವುದು ಸ್ನೇಹಿತೆಯಾಗಿ
ನಿಂತಿರುವೆ ಬೆನ್ನೆಲುಬಾಗಿ
ನೀ ಯಾರೇ ದೇವತೆ ; ನೀ ನನ್ನ ಮಾತೆ

ಎಂದಿಗೂ ಮಕ್ಕಳಿಗಾಗಿ ಮಿಡಿಯುವ ಹೃದಯ
ಹೃದಯ ಶ್ರೀಮಂತಿಕೆ ಬೆಳೆಸುವ ಕಾರ್ಯ
ಪ್ರತಿಕ್ರಿಯೆ ಪ್ರೀತಿ ಬಯಸಿ ಹೃದಯ
ನೀ ಯಾರೇ ದೇವತೆ; ನೀ ನನ್ನ ಮಾತೆ !

**- ಕೆ.ಜಿ. ಉಜ್ವಲ, ದಾವಣಗೆರೆ.**


**ಬಾಡಿಗೆಗೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಡಾ|| ಸಿದ್ದೇಶ್ ಬಿಲ್ಡಿಂಗ್‌ನಲ್ಲಿ ಡಾಕ್ಟರ್ ಕನ್ಸಲ್ಟಿಂಗ್ ರೂಂಗಳು ಬಾಡಿಗೆಗಿವೆ.
ಆಸಕ್ತರು ವಿಚಾರಿಸಿ:
94480 28103

**ಹೊಸ ಹೊಸ ಮನೆಗಳು ಮಾರಾಟಕ್ಕಿವೆ**
30x40 East, 30x40 South, 30x40 North West Corner, 30x50 East ಎಲ್ಲಾ ಬಡಾವಣೆಗಳಲ್ಲಿ ದೊರೆಯುತ್ತವೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, LIC ಕಾಲೋನಿಯಲ್ಲಿ 40x60 East, 40x60 West, 45x40 West, 35x45 North, 30x36 North, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಮಾರಾಟಕ್ಕೆ**
S.S ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಡಿಸಿಎಂ ಟೌನ್ ಮನೆ-40×50 ರವೀಂದ್ರನಾಥ ಬಡಾವಣೆ ಸೈಟ್-30×50, KHB ಸೈಟ್ - 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, 30×42 (ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
ಸಂಪರ್ಕಿಸಿ: 7899636597 9916525828

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರದಲ್ಲಿ ಆಂಜನೇಯ ದೇವಸ್ಥಾನದ ಹತ್ತಿರ, 2 ಬೆಡ್ ರೂಂ ಇರುವ ಹಾಗೂ ಮುನ್ಸಿಪಲ್ ಮತ್ತು ಬೋರ್‌ವೆಲ್ ಇರುವ ಮನೆ ಬಾಡಿಗೆಗೆ ಇದೆ ವಿಚಾರಿಸಿ.
98458 21409
8722044155

**ರೂಂ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 3ನೇ ಮೇನ್ ಡೋ.ನಂ. 2650/22, 2ನೇ ಫ್ಲೋರ್, 2 ಚದರ ಅಡಿಯ ಅಟ್ಯಾಚ್ ಬಾತ್‌ರೂಂ ಸೋಲಾರ ಮತ್ತು ಎ.ಸಿ. ಇರುತ್ತದೆ. 24x7 ನೀರಿನ ಸೌಲಭ್ಯವಿರುತ್ತದೆ.
99455 68859

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ಮನೆ ಬಾಡಿಗೆ/ಲೀಸ್‌ಗೆ**
ಸರಸ್ವತಿ ನಗರ 30x50 ಕೆಳಗಿನ ಮನೆ, ಸರಸ್ವತಿ ನಗರ 20x40 ಇಂಡಿಪೆಂಡೆಂಟ್ ಮನೆ ಬಾಡಿಗೆಗೆ, ಸರಸ್ವತಿ ನಗರ 30x40 ಕೆಳಗಿನ ಮನೆ ಲೀಸಿಗೆ ಇದೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**ಸೈಟು ಮಾರಾಟಕ್ಕಿದೆ**
40+35/2x50 (ಪೂ-ಉ ಕಾರ್ನರ್) ಜ್ಞಾನಸಾಗರ ಪಿಯು ಕಾಲೇಜು (Opp) ಲಕ್ಷ್ಮಿ ಬಡಾವಣೆ, ಎಸ್.ಎಸ್. ಆಸ್ಪತ್ರೆ (Opp)
94496 86201

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ಗ್ರೌಂಡ್‌ಫ್ಲೋರ್‌ನಲ್ಲಿ ಸುಸಜ್ಜಿತವಾದ ನೀರಿನ ಸೌಲಭ್ಯವುಳ್ಳ ಎರಡು ಬೆಡ್ ರೂಂನ ಆರ್‌ಸಿಸಿ ಮನೆ ಬಾಡಿಗೆಗೆ ಇದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
91482 16470

**ಮನೆ ಬಾಡಿಗೆಗೆ ಮತ್ತು ಲೀಸ್‌ಗೆ ದೊರೆಯುತ್ತದೆ**
ಗ್ರೌಂಡ್ ಫ್ಲೋರ್‌ನಲ್ಲಿ -1 ಮನೆ (1 BHK) 2nd ಫ್ಲೋರ್‌ನಲ್ಲಿ -1 ಮನೆ (1 BHK) ಬೋರ್ ಹಾಗೂ ನಲ್ಲಿ ನೀರಿನ ಸೌಲಭ್ಯವಿದೆ.
ಸಂಪರ್ಕಿಸಿ : ನಂ. 41, ಎ ಬ್ಲಾಕ್, 5ನೇ ಮುಖ್ಯರಸ್ತೆ, ದೇವರಾಜ್ ಅರಸು ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ.
88927 46603

**ಬಾಡಿಗೆಗೆ ಇದೆ**
(ಸಸ್ಯಹಾರಿಗಳಿಗೆ ಮಾತ್ರ)
ಡೋ.ನಂ 286, 6ನೇ ಕ್ರಾಸ್, 3ನೇ ಮೇನ್ 'ಬಿ' ಬ್ಲಾಕ್, ಡಿಸಿಎಂ ಟೌನ್‌ಶಿಪ್‌ನಲ್ಲಿ ನೀರಿನ ಸೌಕರ್ಯವಿರುವ 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ:
93534 19866

**ಮಲೇಬೆನ್ನೂರಿನಲ್ಲಿ ಮನೆ ಬಾಡಿಗೆಗೆ ಇದೆ**
ಪಟ್ಟಣದ ಆಜಾದ್‌ನಗರ 2ನೇ ಕ್ರಾಸ್‌ನಲ್ಲಿ ಮೊದಲ ಮಹಡಿಯಲ್ಲಿರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಇದೆ. ಸ್ವಂತ ನೀರಿನ ಸೌಲಭ್ಯ ಹೊಂದಿದೆ. ಸಂಪರ್ಕಿಸಿ :
97318 53006

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಬಾಡಿಗೆ / ಭೋಗ್ಯ**
3BHK, 1691/53, 'ಸೈನಿಕ ಸದನ' ತುಳಸಿ ಆಯುರ್ವೇದಿಕ್ ಆಸ್ಪತ್ರೆ ಹತ್ತಿರ ಸರಸ್ವತಿ ನಗರ ದಾವಣಗೆರೆ - 577004
94483 39238
82774 31170

**ಮಳಿಗೆಗಳು ಬಾಡಿಗೆಗೆ ಇವೆ**
ಎವಿಕೆ ಕಾಲೇಜು ರಸ್ತೆ, ಹಳೇ ಮನೆ ಹೋಟೆಲ್ ಎದುರು, 900 ಚ. ಅಡಿಯ ಮೂರು ಮಳಿಗೆಗಳು (Ground, First, Second) ಬಾಡಿಗೆಗೆ ದೊರೆಯುತ್ತವೆ.
ವಿವರಗಳಿಗಾಗಿ ಸಂಪರ್ಕಿಸಿ :
94816 89201, 98440 94100

**Wanted**
Field officer in Davangere, Shimoga, Chitradurga.
Experince and Fresher can Apply
Navata Road Transport
92435 86443, 90360 03821
90360 02254
Email ID : Managerhbtr@Navata.com

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧ, ಬೆಡ್‌ರಿಡನ್, ಮಾನಸಿಕ, ಅಂಗವಿಕಲ, ಬುದ್ಧಿ ಮಾಂದ್ಯರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು.
ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ.
89711 92936
76250 15036

ನಮ್ಮಲ್ಲಿ ವಯೋ ವೃದ್ಧರಿಗೆ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು
ಸಂಪರ್ಕಿಸಿ: ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್ (ರಿ)
76250 15036
8971192936

**2BHK Apartment for Rent**
Flot No.404
Balaji Residence
Jayanagar 'B' Block
99646 98311
98450 69999

**ತಕ್ಷಣ ಬೇಕಾಗಿದ್ದಾರೆ**
Samson Distillery ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಲೇಡಿ ಸೆಕ್ಯೂರಿಟಿಗಳು ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ. ತಕ್ಷಣ ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
97390 89022, 90605 45500, 70199 48769

**V.S. PARAMEDICAL COLLEGE**
SSLC ಪಾಸ್/PUC- 'ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' Course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
9019580600, 8660195955

**ಮಾರಾಟಕ್ಕಿದೆ**
10 ಗಾಲಿಗಳ ಟಾಟಾ ನೀರಿನ ಟ್ಯಾಂಕರ್ ಲಾರಿ, ಮಾಡೆಲ್ 2007 ಮಾರಾಟಕ್ಕಿದೆ, ಶಾಮನೂರು.
97415 62589
93537 16855

**ROOM FOR RENT**
In MCC B Block, with Attached Bathroom
Contact : 99721 02927
89046 40343

**HIRING IN INTERNATIONAL BANK**
RELATIONSHIP MANAGER
FIELD EXECUTIVE
BACKEND OFFICIER
TELLER
Contact: 95382 00008
99866 92789

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಆಟೋ ಡ್ರೈವರ್ - ಕಂ - ಸೇಲ್ಸ್ ಮ್ಯಾನ್.
ಸಂಪರ್ಕಿಸಿ:
ಪರಿಮಳ ಕಾಫಿ ಕಂಪನಿ
ಮಂಡಿಪೇಟೆ, ಎಸ್.ಬಿ.ಐ. ಮುಖ್ಯ ಶಾಖೆ ಎದುರು, ದಾವಣಗೆರೆ.
Mob : 94482-72734

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 03.09.2020ರ ಗುರುವಾರ ಮತ್ತು 04.09.2020ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

BASIC -900/-
DTP - 900/-
TALLY - 2200/-
Door to door Coaching
97426 10385

**FOR LEASE**
Fully Furnished 2 BHK flat in S.S.Layout, Ring road circle, Davnagere.
Contact
91645-46459

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 9.00 Am ಸಂಜೆ 8.00 PM
ಸಂಪರ್ಕಿಸಿ: ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ ಲಾಯರ್ ರಸ್ತೆ, ಟಯರ್ ಅಂಗಡಿ ಹತ್ತಿರ ದಾವಣಗೆರೆ-2

ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ
D.Ed, B.A, B.Ed, B.Sc. B.Ed, B.com, B.B.A, N.T.C
Address :-
Little champs Gurukulam
H.K.R circle, Near Shashank GYM, College Road, Nittavalli, Davanagere.
90609 06039, 83106 65780

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 32427
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
ಮೊ. : 8971699826

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

ಶ್ರೀ ದುರ್ಗಾಚಾಮುಂಡೇಶ್ವರಿ ಜ್ಯೋತಿಷ್ಯಂ
ಕೊಳ್ಳೇಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್
ದೈವಜ್ಞ ಪಂ|| ಶ್ರೀ ಪ್ರಶಾಂತ್ ಗುರೂಜಿ
ಪ್ರೇಮ ವಿಚಾರ, ದಾಂಪತ್ಯದಲ್ಲಿ ತೊಂದರೆ, ಸಾಲದ ಬಾಧೆ, ಕೋರ್ಟ್ ಕೇಸ್, ಆರೋಗ್ಯ, ಬಿಸಿನೆಸ್, ಗುಪ್ತ ಸಮಸ್ಯೆ ಸೇರಿದಂತೆ ಕೇವಲ 3 ದಿನಗಳಲ್ಲಿ 100% ಗ್ಯಾರಂಟಿ ಪರಿಹಾರ ಶತಸಿದ್ಧ.
ಫೋನ್ ಮೂಲಕ ನಿಮ್ಮ ಸ್ವರ ಭವಿಷ್ಯದಿಂದ ಪರಿಹಾರ
90719 91136

**ಉದ್ಯೋಗಕ್ಕಾಗಿ ಶಿಕ್ಷಣ**
SSLC, PUC, ITI Pass/Fail
ಡಿಪ್ಲೋಮಾ ಪೇಷೆಂಟ್ ಕೇರ್, ನರ್ಸಿಂಗ್ ತರಬೇತಿ ನಂತರ ತಕ್ಷಣ ಕೆಲಸ.
NTC, SSLC, PUC ಕರೆಸ್ಪಾಂಡೆನ್ಸ್ ಕೋರ್ಸ್
ಗಂಗೋತ್ರಿ ಕಮ್ಯುನಿಟಿ ಕಾಲೇಜ್,
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ಪ್ರವೇಶ ಪ್ರಕಟಣೆ**
SSLC, PUC, ITI - Pass/ Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276



**ಬ್ರೇಕ್ ಇನ್‌ಸ್ಪೆಕ್ಟರ್ಸ್ !**

ದಾವಣಗೆರೆ ನಗರದಲ್ಲಿ ಬಿಡಾಡಿ ದನಗಳ ಸಂಖ್ಯೆ ಹೆಚ್ಚಾಗಿದೆ. ಜನತೆ ತಮಾಷೆಗಾಗಿ ಈ ದನಗಳಿಗೆ ಬ್ರೇಕ್ ಇನ್‌ಸ್ಪೆಕ್ಟರ್ಸ್ ಎಂದೇ ಕರೆಯುತ್ತಾರೆ. ದಿಢೀರನೆ ವಾಹನಗಳಿಗೆ ಅಡ್ಡ ಬರುವುದರಿಂದ ಅನೇಕ ಅಪಘಾತಗಳ ಆಗುತ್ತಿವೆ. ನಗರದ ಪಿಬಿ ರಸ್ತೆಯಲ್ಲಿ ಬುಧವಾರ ಕಂಡು ಬಂದ ದೃಶ್ಯವಿದು.

# ನೇಮಕಾತಿಗಾಗಿ ಆಗ್ರಹಿಸಿ ಓಟಿ ತಂತ್ರಜ್ಞರ ಮನವಿ



ದಾವಣಗೆರೆ, ಸೆ.2- ಕೊರೊನಾ ಸಂದರ್ಭದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡುತ್ತಿರುವ ತಮ್ಮನ್ನು ಕೂಡಲೇ ನೇಮಕಾತಿ ಮಾಡಿಕೊಳ್ಳುವಂತೆ ಒತ್ತಾಯಿಸಿ ನಗರದಲ್ಲಿ ಇಂದು ಜಿಲ್ಲೆಯ ಶಸ್ತ್ರಚಿಕಿತ್ಸಾ ಕೊಠಡಿ ತಂತ್ರಜ್ಞರು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

ಜಿಲ್ಲಾಡಳಿತದ ಮುಂದೆ ಕರ್ನಾಟಕ ರಾಜ್ಯ ಶಸ್ತ್ರಚಿಕಿತ್ಸಾ ಕೊಠಡಿ ತಂತ್ರಜ್ಞರ ಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ಜಮಾಯಿಸಿದ್ದ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಮುಖೇನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಕೊರೋನಾ ವೈರಸ್ ಸೋಂಕು ಹರಡುವ ಕಾರಣದಿಂದ ವೈದ್ಯರಿಗೆ ಹಾಗೂ ರೋಗಿಗಳಿಗೆ ಸಹಾಯ ಮಾಡಲು ಕರ್ನಾಟಕ ರಾಜ್ಯ ಶಸ್ತ್ರಚಿಕಿತ್ಸಾ ಕೊಠಡಿಯ ತಂತ್ರಜ್ಞರ ಹುದ್ದೆಗಳನ್ನು ಸರ್ಕಾರದಲ್ಲಿರುವ ಎಲ್ಲ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಸ್ಪತ್ರೆ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಸರ್ಕಾರವೇ ಸೃಷ್ಟಿಸಿರುವ ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ ಟೆಕ್ನಾಲಜಿ, ಅನಸ್ತೇಶಿಯಾ ಟೆಕ್ನಾಲಜಿ, ಬಿಎಸ್ಸಿ, ಎಂಎಸ್ಸಿ ಕೋರ್ಸ್ ಅನ್ನು ಪ್ರಾರಂಭಿಸಿದಾಗಿನಿಂದ ಇಲ್ಲಿಯವರೆಗೂ ಮುಗಿಸಿರುವ 5 ಸಾವಿರದಿಂದ 6 ಸಾವಿರ ಅಭ್ಯರ್ಥಿಗಳು ಶಸ್ತ್ರಚಿಕಿತ್ಸಾ ಕೊಠಡಿಯ ಬಗ್ಗೆ ಸಂಪೂರ್ಣ ಅಭ್ಯಾಸ ಮುಗಿಸಿದ್ದು, ಸರ್ಕಾರವು ಕೊರೊನಾ ವೈರಸ್ ಸೋಂಕು ಹರಡುತ್ತಿರುವುದರಿಂದ ಇದನ್ನು ತಡೆಗಟ್ಟಲು ಕೂಡಲೇ ನಮ್ಮನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಶಿವಪ್ರಕಾಶ್, ಉಪಾಧ್ಯಕ್ಷ ಶಫೀವುಲ್ಲಾ, ಮಂಜುನಾಥ, ಕಿರಣ್, ಸಿದ್ದೇಶ್, ಉಷಾ, ರಮೇಶ್, ದೀಪ್ ಸೇರಿದಂತೆ ಇತರರು ಇದ್ದರು.

## ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕನ್ನಡಿಗರಿಗೆ ಹೆಚ್ಚು ಉದ್ಯೋಗಾವಕಾಶ ಸಿಗಲಿ

ದಾವಣಗೆರೆ, ಸೆ.2- ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕನ್ನಡಗರಿಗೇ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯುವಂತಾಗಲಿ ಎಂದು ಕಸಾಪ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ ಆಶಯ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಕನ್ನಡಿಗರಿಗೆ ಹೆಚ್ಚು ಉದ್ಯೋಗಗಳನ್ನು ಮೀಸಲಿಟ್ಟಿರುವುದು ಹರ್ಷವನ್ನುಂಟುಮಾಡಿದೆ. ಇಂತಹ ಅವಕಾಶಗಳನ್ನು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳು ಕಲ್ಪಿಸಿಕೊಡಬೇಕಾಗಿದೆ ಎಂದಿದ್ದಾರೆ. ಮಹತ್ವದ ಆದೇಶ ನೀಡಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅಭಿನಂದನಾರ್ಹರು ಎಂದು ಹೇಳಿದ್ದಾರೆ.

## ಜಿಲ್ಲಾ ಆರ್ಯ ಈಡಿಗರ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.2- ಜಿಲ್ಲಾ ಆರ್ಯ ಈಡಿಗರ ಸಂಘದಿಂದ ನಡೆಯುತ್ತಿರುವ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಸೇರಬಯಸುವ ಅರ್ಹ ಆರ್ಯ ಈಡಿಗ ಸಮಾಜದ ಬಡ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಆರ್ಯ ಈಡಿಗರ ಸಂಘದ ಕಾರ್ಯದರ್ಶಿ ಎ.ನಾಗರಾಜ್ ತಿಳಿಸಿದ್ದಾರೆ.

ಪಿಯುಸಿ ಸೈನ್ಸ್, ಬಿ.ಎಸ್ಸಿ, ಬಿ.ಕಾಂ, ಬಿಸಿಎ, ಬಿಬಿಎಂ, ಎಂಎಸ್ಸಿ, ಎಂ.ಕಾಂ ಹಾಗೂ ತಾಂತ್ರಿಕ ಕೋರ್ಸುಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿನಿಯರಿಗೆ ಇದೇ ದಿನಾಂಕ 20ರೊಳಗಾಗಿ ಅರ್ಜಿ ಸಲ್ಲಿಸಬಹುದು. ದಾವಣಗೆರೆ ಜಿಲ್ಲೆಗೆ ಮೊದಲ ಆದ್ಯತೆ ನೀಡಲಾಗುವುದು ವಿವರಕ್ಕೆ ಸಂಪರ್ಕಿಸಿ : ದೂರವಾಣಿ : 08192-254261, 97404 38397, 98453 55008.

## ಸಾದರ ಸಾಧನಾ ಪ್ರತಿಭಾ ಪುರಸ್ಕಾರ

ದಾವಣಗೆರೆ, ಸೆ.2- ಸಾದರ ನೌಕರರ ಬಳಗ ವತಿಯಿಂದ ಎಸ್ಸೆಸ್ಸೆಲ್ಸಿ (ಶೇ. 85ಕ್ಕಿಂತ ಹೆಚ್ಚು) ಹಾಗೂ ಪಿಯುಸಿಯಲ್ಲಿ (ಶೇ. 80 ಕ್ಕಿಂತ ಹೆಚ್ಚು)ಅತಿ ಹೆಚ್ಚು ಅಂಕ ಪಡೆದ ಸಾದರ ವಿದ್ಯಾರ್ಥಿಗಳನ್ನು ಗುರ್ತಿಸಿ 'ಸಾದರ ಸಾಧನಾ ಪ್ರಶಸ್ತಿ ' ಮತ್ತು ಬಹುಮಾನ ನೀಡಿ ಪುರಸ್ಕರಿಸುತ್ತಾ ಬಂದಿದೆ.

ಎಸ್ಸೆಸ್ಸೆಲ್ಸಿ ರಾಜ್ಯ ಹಾಗೂ ಸಿಬಿಎಸ್ಇ ಪಠ್ಯಕ್ರಕ್ಕೆ ಪ್ರತ್ಯೇಕವಾಗಿ ಮತ್ತು ಪಿಯುಸಿ (ಕಲಾ, ವಿಜ್ಞಾನ, ವಾಣಿಜ್ಯ) ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಾದರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸ್ವ-ವಿಳಾಸದೊಂದಿಗೆ ಅರ್ಜಿಯನ್ನು ಇದೇ ದಿನಾಂಕ 18 ರೊಳಗೆ ಸಲ್ಲಿಸಬೇಕು.

ವಿವರಕ್ಕೆ ಸಂಪರ್ಕಿಸಿ : ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, ಡೋರ್ ನಂಬರ್ 1645/145, ವಿದ್ಯಾನಗರ ಮುಖ್ಯ ರಸ್ತೆ, ಪೋಸ್ಟ್ ಆಫೀಸ್ ಎದುರು, ದಾವಣಗೆರೆ-577005. ಮೊ: 9844369744, 9448439662.

## ಚೀನಾದ ಪಬ್‌ಜೀ ಔಟ್

(3ನೇ ಪುಟದಿಂದ) ಸಾರ್ವಜನಿಕವಾಗಿ ಆಕ್ಷೇಪಗಳು ಕೇಳಿ ಬಂದ ಆಪ್‌ಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸರ್ಕಾರ ತಿಳಿಸಿದೆ. ಸರ್ಕಾರದ ಕ್ರಮವನ್ನು ಸ್ವಾಗತಿಸಿರುವ ಕಾನ್ಫಿಡರೇಷನ್ ಆಫ್ ಆಲ್ ಇಂಡಿಯಾ ಟ್ರೇಡರ್ಸ್ (ಸಿ.ಎ.ಐ.ಟಿ.), ಚೀನಾದ ದುಷ್ಕೃತ್ಯಗಳ ವಿರುದ್ಧ ಇದು ಮಹತ್ವದ ಹೆಜ್ಜೆಯಾಗಿದೆ. ಇದರಿಂದ ದೇಶದ ನೈತಿಕ ಸ್ಥೈರ್ಯ ಹೆಚ್ಚಲಿದೆ ಎಂದು ತಿಳಿಸಿದೆ.

ಅಟ್ಟಹಾಸದಲಿ ಮರೆತೆ ನೀನು ನಿನ್ನನೇ
ಆಡಂಬರದ ಜೀವನ ನಿನ್ನದಾಯ್ತು
ಇಷ್ಟಗಳ ಪಟ್ಟಿ ಬೆಳೆಸಿಕೊಂಡೇ
ಈಗಿನ ಸುಖದಲಿ ಭವಿಷ್ಯವನು ಮರೆತೆ
ಉದರ ಬೆಳೆದರೂ ಉದಾರತೆಯ ಕೊರತೆ
ಊಟ ಹೆಚ್ಚಾಯ್ತು ಪಾಠ ಕೊನೆಯಾಯ್ತು
ಎತ್ತ ಸಾಗಿದ ನಿನ್ನ ಪಯಣ
ಏಕೊಂದು ಗುರಿಯಿಲ್ಲ ನಿನಗೆ
ಐಷಾರಾಮಿ ಜೀವನಕೆ ವಿರಾಮ ಹಾಕು
ಒಲವು ಬೆಳೆಸಿ ನಿಲುವು ಬದಲಿಸಿ
ಓಡು ಗುರು ಒಬ್ಬನನು ಅರಸಿ
ಔದಾರ್ಯದಲಿ ಗುರುವು ಹರಸಿ ನಿನ್ನ
ಅಂಧಕಾರವನಳಿಸಿ ಅರಿವ ತೋರುವನು
ಅಳೆಯುವೆ ಹೇಗೆ ಗುರು ಕರುಣೆಯನು?



- **ಅಣ್ಣಾಪುರ್ ಶಿವಕುಮಾರ್**, ಲಿಬರ್ಟಿವಿಲ್ ಇಲಿನಾಯ್




## ಅನಿಲ್ ಬಾರೆಂಗಳ್ ಅವರಿಗೆ ಪ್ರೇರಣಾ ಗೌರವ ಪುರಸ್ಕಾರ



ದಾವಣಗೆರೆ, ಸೆ. 2- ಬೆಳಗಾವಿ ಶ್ರೀ ಬಸವಂತ್‌ನಾಗೂ ಶಿಂಗಾಡೆ ಸಾಮಾಜಿಕ ಸೇವಾಭಾವಿ ಟ್ರಸ್ಟ್ ವತಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾಧಕರಿಗಾಗಿ ಕಳೆದ ವಾರ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ದಾವಣಗೆರೆ ಲೈಫ್‌ಲೈನ್ ಸಂಸ್ಥೆಯ ಕಾರ್ಯದರ್ಶಿಯೂ ಆದ ಸಮಾಜಿಕ ಸೇವಾ ಕಾರ್ಯಕರ್ತ ಅನಿಲ್ ಬಾರೆಂಗಳ್ ಅವರಿಗೆ ರಾಜ್ಯಮಟ್ಟದ ಪ್ರೇರಣಾ ಗೌರವ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

## ಮೂರ್ನಾಲ್ಕು ದಿನ ಮುಂಗಾರು

(3ನೇ ಪುಟದಿಂದ) ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಕಂಡು ಬರಲಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಮಳೆಯಾಗಲಿದೆ. ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಗಳಿವೆ.

ಹವಾಮಾನ ಮುನ್ಸೂಚನೆ ಪ್ರಕಾರ ರಾಜ್ಯದ ದಕ್ಷಿಣ ಒಳನಾಡು, ಕರಾವಳಿ ಹಾಗೂ ಪೂರ್ವ ಭಾಗದ ಜಿಲ್ಲೆಗಳಲ್ಲಿ ಇನ್ನೂ ನಾಲ್ಕು ದಿನಗಳ ಕಾಲ ಇದೇ ರೀತಿ ಮಳೆ ಮುಂದುವರಿಯಲಿದೆ ಎಂದು ಹೇಳಿದರು.

## ಆನ್ ಲೈನ್ ಸಂಗೀತ ತರಗತಿ

ದಾವಣಗೆರೆ,ಸೆ.2- ನಗರದ ಸುಶ್ರಾವ್ಯ ಸಂಗೀತ ವಿದ್ಯಾಲಯದ ವತಿಯಿಂದ ಆನ್ ಲೈನ್ ಸಂಗೀತ ತರಗತಿಗಳು ನಡೆಯಲಿದ್ದು, ಶ್ರೀಮತಿ ಯಶಾ ದಿನೇಶ್ ಅವರು ಈ ತರಗತಿಗಳನ್ನು ನಡೆಸಿಕೊಡಲಿದ್ದಾರೆ. ಕರ್ನಾಟಕ ಶಾಸ್ತ್ರೀಯ, ಭಾವಗೀತೆ, ವಚನ, ಜಾನಪದ ಗೀತೆ, ರಂಗ ಗೀತೆ, ಭಜನೆ, ಭಕ್ತಿ ಗೀತೆ, ಚಲನಚಿತ್ರ ಗೀತೆ, ಕರೋಕೆ ಗಾಯನಗಳ ತರಬೇತಿಯನ್ನು ನೀಡಲಾಗುತ್ತದೆ. ವಿವರಕ್ಕೆ 94498 08886 ರಲ್ಲಿ ಸಂಪರ್ಕಿಸಬಹುದು.

# ಒಂದು ತಿಂಗಳ ಸಂಬಳ ಉಳಿಸಲು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟ

### ವಿಟಿಯು ವಿರುದ್ಧ ಯುವ ಭಾರತ್ ಗ್ರೀನ್ ಬ್ರಿಗೇಡ್ ಆರೋಪ

ದಾವಣಗೆರೆ, ಸೆ.2- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ತನ್ನ ಅಧೀನ ಕಾಲೇಜುಗಳಲ್ಲಿ ಹಾಗೂ ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಕೆಲಸ ಮಾಡುವ ಅತಿಥಿ ಉಪನ್ಯಾಸಕರಿಗೆ ನೀಡುವ ಸಂಬಳದಲ್ಲಿ ಕೇವಲ ತಿಂಗಳ ಸಂಬಳ ಉಳಿಸಲು, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದೊಂದಿಗೆ ಪ್ರತಿ ಸೆಮಿಸ್ಟರ್‌ನಲ್ಲೂ ಚೆಲ್ಲಾಟವಾಡುತ್ತಿದೆ ಎಂದು ಯುವ ಭಾರತ್ ಗ್ರೀನ್ ಬ್ರಿಗೇಡ್ ಆರೋಪಿಸಿದೆ.

ಪ್ರತಿ ವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದಾಗ ವಿಶ್ವವಿದ್ಯಾನಿಲಯದ ಅನುಮತಿ ಪಡೆದು ಸಂದರ್ಶನ ಪ್ರಕ್ರಿಯೆ ಪೂರ್ಣಗೊಳಿಸುವಷ್ಟರಲ್ಲಿ ಒಂದು ತಿಂಗಳು ತೆಗೆದುಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ತರಗತಿಗಳು ನಡೆಯುವುದಿಲ್ಲ.

ವಿವಿ ಸಂದರ್ಶನ ಪ್ರಕ್ರಿಯೆ ರಜೆಯಲ್ಲಿ ಮಾಡಬಹುದಾಗಿದೆ. ಕಾರಣ ಸಂಬಳ ಉಳಿಸುವುದಾಗಿದೆ. ವರ್ಷದಲ್ಲಿ 4 ತಿಂಗಳ ಕಾಲ ಅತಿಥಿ ಉಪನ್ಯಾಸಕರನ್ನು ಮನೆಯಲ್ಲಿ ಕೂರಿಸುತ್ತಾರೆ. ಅದರೊಂದಿಗೆ ಒಂದು ತಿಂಗಳ ಕಾಲ ವಿಳಂಬವಾಗಿ ಪ್ರಕ್ರಿಯೆ ನಡೆಸುತ್ತಾರೆ ಎಂದು ದೂರಿದ್ದಾರೆ.

ವಿದ್ಯಾರ್ಥಿಗಳು ತಮಗೆ ಆಗುತ್ತಿರುವ ತೊಂದರೆ ಕುರಿತು ವಿವಿಧ ವಿಭಾಗಗಳ ಮುಖ್ಯಸ್ಥರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಉನ್ನತ ಶಿಕ್ಷಣ ಮಂತ್ರಿಗಳು ಒಂದಿಷ್ಟು ಗಮನಿಸಿ, ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಮುಖ್ಯಮಂತ್ರಿಗಳಿಗೂ ಮನವಿ ಮಾಡುತ್ತಿರುವುದಾಗಿ ಬ್ರಿಗೇಡ್‌ನ ಅಧ್ಯಕ್ಷ ನಾಗರಾಜ್ ಸುರ್ವೆ ತಿಳಿಸಿದ್ದಾರೆ.

# ಪ.ಜಾತಿಗೆ ಒಳ ಮೀಸಲಾತಿ ವರ್ಗೀಕರಿಸಲು ಆಗ್ರಹ

ದಾವಣಗೆರೆ, ಸೆ.2- ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ನೀಡಿರುವ ತೀರ್ಪನ್ನು ರಾಜ್ಯ ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸಿ ಪರಿಶಿಷ್ಟ ಜಾತಿಗಳಿಗೆ ನಿಗದಿಪಡಿಸಿರುವ ಶೇ.15ರಷ್ಟು ಮೀಸಲಾತಿಯಲ್ಲಿ ವರ್ಗೀಕರಿಸಿ ಒಳ ಮೀಸಲಾತಿಯನ್ನು ಕಲ್ಪಿಸುವಂತೆ ದಾವಣಗೆರೆ ಅಸ್ಪೃಶ್ಯರ ಹಿತರಕ್ಷಣಾ ವೇದಿಕೆಯು ಆಗ್ರಹಿಸಿದೆ.

ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿಯನ್ನು ವರ್ಗೀಕರಿಸಬೇಕೆಂದು ಒಂದೇ ವರ್ಗ ಎಂಬ ಕಾರಣಕ್ಕೆ ಹಣ್ಣುಗಳ ಬುಟ್ಟಿಯನ್ನು ಬಲಶಾಲಿ ಜಾತಿಗಳಿಗೆ ಮಾತ್ರ ನೀಡಲಾಗುವುದಿಲ್ಲ. ಇದರಿಂದ ಇತರೆ ದಮನಿತ ಜಾತಿಗಳ ಜನರಿಗೆ ಅನ್ಯಾಯವಾಗಲಿದೆ ಎಂದು ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹೇಳಿರುವುದರ ಹಿಂದೆ ಸಾಮಾಜಿಕ ನ್ಯಾಯ ಅಡಗಿದೆ ಎಂದು ವೇದಿಕೆಯ ಜಿಲ್ಲಾಧ್ಯಕ್ಷ ಹೆಗ್ಗೆರೆ ರಂಗಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತಲತಲಾಂತರಗಳಿಂದ ಎಲ್ಲಾ ರಂಗಗಳಲ್ಲಿಯೂ ಹಿಂದುಳಿದಿರುವ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಕಲ್ಪಿಸಬೇಕೆಂಬ ದಲಿತ ಸಂಘಟನೆಗಳ ಒತ್ತಾಯಕ್ಕೆ ಮಣಿದ ರಾಜ್ಯ ಸರ್ಕಾರ 2005ರಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗವನ್ನು ರಚಿಸಿತ್ತು. ಈ ಆಯೋಗವು ಸುಮಾರು ಏಳು ವರ್ಷಗಳ ಕಾಲ ರಾಜ್ಯಾದ್ಯಂತ ಅಧ್ಯಯನ ನಡೆಸಿ ಪರಿಶಿಷ್ಟ ಜಾತಿಗೆ ನಿಗದಿ ಮಾಡಿರುವ ಶೇ.15ರಷ್ಟು ಮೀಸಲಾತಿಯಲ್ಲಿ ಶೇ. 6ರಷ್ಟು ಮಾದಿಗ ಸಮುದಾಯಗಳಿಗೆ, ಶೇ.5ರಷ್ಟು ಹೊಲೆಯ ಸಮುದಾಯಗಳಿಗೆ, ಶೇ.3ರಷ್ಟು ಎಸ್‌ಸಿ ಪಟ್ಟಿಯಲ್ಲಿರುವ ಸ್ಪೃಶ್ಯ ಜಾತಿಗೆ ಮತ್ತು ಶೇ.1ರಷ್ಟು ಮೀಸಲಾತಿಯನ್ನು ಬೇಡ ಜಂಗಮ, ಬುಡುಗ ಜಂಗಮ ಸಮುದಾಯಗಳಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿ 2012ರಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆಗ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಬಿಜೆಪಿ ಪಕ್ಷ ಸೇರಿದಂತೆ ಈವರೆಗೂ ಆಡಳಿತ ನಡೆಸಿರುವ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಸಹ ಚುನಾವಣೆಯಲ್ಲಿ ತಮ್ಮ ಪಕ್ಷಗಳಿಗೆ ಹಿನ್ನಡೆ ಉಂಟಾಗಲಿದೆ ಎಂಬ ಏಕೈಕ ಕಾರಣದಿಂದಾಗಿ ಈ ವರದಿಯನ್ನು ಅನುಷ್ಠಾನಗೊಳಿಸಿರಲಿಲ್ಲ ಎಂದರು.

ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಬೇಕೆಂಬ ಕಾರಣಕ್ಕೆ ಈಗಿನ ಬಿಜೆಪಿ ಸರ್ಕಾರದಲ್ಲಿನ ಸಮಾಜ ಕಲ್ಯಾಣ ಸಚಿವ ಗೋವಿಂದ ಕಾರಜೋಳ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ನೀಡಿರುವ ತೀರ್ಪಿನ ಆಧಾರದಲ್ಲಿ ಒಳ ಮೀಸಲಾತಿ ಕಲ್ಪಿಸಲಾಗುವುದಿಲ್ಲ. ಆದರೆ, ಏಳು ಅಥವಾ ಒಂಭತ್ತು ಜನ ನ್ಯಾಯಮೂರ್ತಿಗಳ ಪೀಠವು ಒಳ ಮೀಸಲಾತಿ ಕಲ್ಪಿಸುವ ಬಗ್ಗೆ ತೀರ್ಪು ನೀಡಿದರೆ ಅದನ್ನು ಅನುಷ್ಠಾನಗೊಳಿಸಬಹುದು ಎಂಬುದಾಗಿ ಹೇಳುತ್ತಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ವೇದಿಕೆಯ ಕೆ. ಮಹಾದೇವನ್, ಎಚ್. ಬಸವರಾಜ್, ತಿಪ್ಪೇಶಿ ಕುಳಗಟ್ಟೆ, ಹೊನ್ನಾಳಿ ಮಹಾಂತೇಶ್, ಪುರುಷೋತ್ತಮ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## ಬೈಜೂಸ್ ಅವರಿಂದ ಬಿಐಇಟಿಯಲ್ಲಿ ಉದ್ಯೋಗ

ದಾವಣಗೆರೆ, ಸೆ.2 - ಬಾಪೂಜಿ ಇನ್ ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ತರಬೇತಿ ಮತ್ತು ಉದ್ಯೋಗ ಕೋಶ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ಅನ್ನು ಬೆಂಗಳೂರಿನ ಬೈಜೂಸ್ ನಿಂದ ಆಯೋಜಿಸಲಾಗಿದೆ.

ಅವರು ವಾರ್ಷಿಕವಾಗಿ 10 ಲಕ್ಷ ರೂ.ಗಳ ಪ್ಯಾಕೇಜ್ ನೀಡುತ್ತಿದ್ದಾರೆ. ಈ ಡ್ರೈವ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಡೀನ್- ಟ್ರೈನಿಂಗ್ ಮತ್ತು ಪ್ಲೇಸ್‌ಮೆಂಟ್ ಸೆಲ್ ನ ಡಾ.ಎಂ.ಎಸ್. ನಾಗರಾಜ್ ಮಾಹಿತಿ ನೀಡಿದರು.

ಗೌರವ ಕಾರ್ಯದರ್ಶಿ ಡಾ.ಶಾಮನೂರು ಶಿವಶಂಕರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ಬಾಪೂಜಿ ಸಂಘದ ಜಂಟಿ ಕಾರ್ಯದರ್ಶಿ ಪ್ರೊ.ವೈ. ವೃಷಭೇಂದ್ರಪ್ಪ, ನಿರ್ದೇಶಕ ಮತ್ತು ಡಾ.ಎಚ್.ಬಿ.ಅರವಿಂದ್ ಅವರುಗಳು ಆಯ್ಕೆಯಾದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

## ಕಾರ್ಮಿಕರ ಕೊಡುಗೆ ಯೋಜನೆ ಅವಧಿ ವಿಸ್ತರಿಸಲು ಮನವಿ

ದಾವಣಗೆರೆ, ಸೆ.2- ಪ್ರಧಾನ ಮಂತ್ರಿ ಕಾರ್ಮಿಕ ಸಮ್ಮಾನ್ ಯೋಜನೆಯಡಿ 5,000 ರೂಪಾಯಿಗಳನ್ನು ಕೊಡುಗೆಯಾಗಿ ನೀಡುವುದಾಗಿ ಘೋಷಿಸಿದ್ದು, ಬಹಳಷ್ಟು ಜನರಿಗೆ ಈ ಯೋಜನೆ ತಲುಪದ ಕಾರಣ ಇದೇ ದಿನಾಂಕ 15ರವರೆಗೆ ಅವಧಿ ವಿಸ್ತರಿಸುವಂತೆ ರಾಜ್ಯದ ಮುಖ್ಯಮಂತ್ರಿಗಳಿಗೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಹಾಗೂ ರಾಜ್ಯ ಕಾರ್ಮಿಕ ಖಾತೆ ಆಯುಕ್ತರಿಗೆ ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಮನವಿ ಮಾಡಿದ್ದಾರೆ.

## ನಗರದಲ್ಲಿ ಇಂದು ಗಣಹೋಮ, 5 ರಂದು ವಿಸರ್ಜನೆ

ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಿರ್ಮಿಸಿರುವ ಹಿಂದೂ ಮಹಾಗಣಪತಿ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 8 ಗಂಟೆಗೆ ಗಣಹೋಮ ನಡೆಯಲಿದೆ. ನಾಡಿದ್ದು ದಿನಾಂಕ 5 ರ ಶನಿವಾರ ಹಿಂದೂ ಮಹಾಗಣಪತಿ ವಿಸರ್ಜನಾ ಕಾರ್ಯ ಕ್ರಮ ನಡೆಯಲಿದೆ. ಈ ವಿಸರ್ಜನಾ ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಸದಸ್ಯ ರನ್ನು ಹೊರತುಪಡಿಸಿ ಸಾರ್ವಜನಿಕ ರಿಗೆ ಅವಕಾಶವಿರುವುದಿಲ್ಲ ಎಂದು ಹಿಂದೂ ಮಹಾಗಣಪತಿ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು ತಿಳಿಸಿದ್ದಾರೆ.

# ರಾಯಣ್ಣನ ಮೂರ್ತಿ ಪ್ರತಿಷ್ಠಾಪನೆ ವಿವಾದ : ಶ್ರೀಗಳ ಜೊತೆ ಚರ್ಚೆ

ಮಲೇಬೆನ್ನೂರು,ಸೆ. 2- ಸಮಾಜ ಕಟ್ಟುತ್ತೇವೆ ಎಂಬ ಭರದಲ್ಲಿ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವ ಕೆಲ ಮನಸ್ಥಿತಿ ಗಳು ತಮ್ಮ ನಡವಳಿಕೆಗಳನ್ನು ಬದಲಾಯಿಸಿಕೊಳ್ಳುವ ಅನಿ ವಾರ್ಯತೆ ಇದೆ ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದ್ದಾರೆ.



ಬೆಳಗಾವಿ ಜಿಲ್ಲೆಯ ಪೀರನವಾಡಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿ ಪ್ರತಿಷ್ಠಾಪನೆ ಕುರಿತು ಈಚೆಗೆ ಉಂಟಾದ ವಿವಾದದ ಹಿನ್ನೆಲೆಯಲ್ಲಿ ಶ್ರೀಗಳು ಕುರುಬ ಸಮಾಜದ ಬಂಧುಗಳಿಗೆ ಎಚ್ಚರಿಕೆಯ ಕಿವಿಮಾತುಗಳನ್ನು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಸಮುದಾಯದ ದಾರ್ಶನಿಕರ ಪುತ್ಥಳಿ, ನಾಮ ಫಲಕಗಳನ್ನು ಸ್ಥಾಪಿಸುವಲ್ಲಿ ಕಾನೂನು ಪರಿಜ್ಞಾನ ಇಲ್ಲದೇ ಪ್ರಚೋದನಾಕಾರಿಯಾಗಿ ನಡೆದು ಕೊಳ್ಳುತ್ತಿರುವುದು ಶಾಂತಿ ಮತ್ತು ಪ್ರೀತಿಗೆ ಹೆಸರಾದ ನಮ್ಮ ಸಮುದಾಯಕ್ಕೆ ಕಪ್ಪುಚುಕ್ಕೆ ತರುತ್ತದೆ. ರಾಜ್ಯದ ಹತ್ತಾರು ಕಡೆ ಕಾನೂನಾತ್ಮಕವಾಗಿ ಅನು ಮತಿ ಪಡೆಯದೇ ದಾರ್ಶನಿಕರ ಪುತ್ಥಳಿ, ನಾಮಫಲಕ ಸ್ಥಾಪಿಸಲು ಮುಂದಾಗಿದ್ದು, ಕಾಣದ ಕೈಗಳ ಬೆಂಬಲದಿಂದ ಹೋರಾಟದ ಹಾದಿಯನ್ನು ತಪ್ಪಿಸಿ, ಸಮಾಜ ತಲೆತಗ್ಗಿಸು ವಂತೆ ಆಗುತ್ತಿರುವುದು ದುಃಖಕರ ಸಂಗತಿ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದ್ದಾರೆ. ಎಲ್ಲಾ ಸಂಘಟನೆಗಳು, ಸಮುದಾಯದ ಶ್ರೀ ಕನಕ ಗುರು ಪೀಠದ ಸ್ವಾಮಿಗಳ ಜೊತೆಗೆ ಚರ್ಚಿಸಿ ಮತ್ತು ರಾಜಕೀಯ ಮುಖಂಡರುಗಳ ಗಮನಕ್ಕೆ ತರದೇ ಯಾವುದೇ ತೀರ್ಮಾನ ಕೈಗೊಳ್ಳಬಾರದು ಎಂದರು.

ಸಮಾಜಕ್ಕಾಗಿ ಏನೇ ಮಾಡುವುದಿದ್ದರೂ ತಾಲ್ಲೂಕು, ಜಿಲ್ಲಾ ಹಾಗೂ ಕೇಂದ್ರ ಸಂಘಟನೆ ಗಳೊಂದಿಗೆ ಮತ್ತು ಶ್ರೀಕನಕ ಗುರುಪೀಠದೊಂದಿಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಂಡು ಸಮಾಜದ ಒಗ್ಗಟ್ಟನ್ನು ಪ್ರದರ್ಶಿಸಬೇಕು. ವೈಯಕ್ತಿಕ ಹಿತಾಸಕ್ತಿಗಳಿಗೋಸ್ಕರ ಸಮುದಾಯವನ್ನು ಬಲಿಕೊಡುವ ಅಪವಾದ ಎಸಗಬೇಡಿ ಎಂದು ಶ್ರೀಗಳು ನೇರ ಎಚ್ಚರಿಕೆ ನೀಡಿದರು.

ನಮ್ಮ ಧಾರ್ಮಿಕತೆಯ ಭಕ್ತಿ ನ್ಯಾಯಾಂಗದ ಅಡಿಯಲ್ಲಿ ಪ್ರಜ್ವಲಿಸಬೇಕು. ನಮ್ಮವರು ಸ್ಥಳೀಯ ಶಾಂತಿ, ಕಾನೂನುಗಳನ್ನು ಉಳಿಸುವುದಕ್ಕೆ ಹೋರಾಟ ಮಾಡಿ ದಾರ್ಶನಿಕರಾಗಿದ್ದಾರೆ. ಆದರೆ, ಅಂತವರ ಹೆಸರಲ್ಲಿ ಕೆಲ ಸಂಘಟನೆಗಳು ಕಾನೂನಿಗೆ ವಿರುದ್ಧವಾಗಿ ಉದ್ಧಟತನ ತೋರಿ, ಯುವಕರನ್ನು ದಾರಿ ತಪ್ಪಿಸಬಾರದು. ನಾವುಗಳು ಈ ನೆಲದ ಕಾನೂನನ್ನು ಗೌರವಿಸಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವೂ ಕೂಡ ಆಗಿರುತ್ತದೆ. ನಾವುಗಳು ಇದ್ಯಾವುದನ್ನೂ ಪಾಲಿಸದೇ ನಮಗೆ ಇಷ್ಟಬಂದಂತೆ, ಮನಸ್ಸಿಗೆ ತೋಚಿದಂತೆ ಮೂರ್ತಿ ಅಥವಾ ನಾಮಫಲಕ ಗಳನ್ನು ಪ್ರತಿಷ್ಠಾಪಿಸುವುದು ಅಕ್ಷಮ್ಯ ಅಪರಾಧವಾಗುತ್ತದೆ. ಇಂತಹ ಘಟನೆಗಳನ್ನು ಬೇರೊಂದು ಸಂಘಟನೆಗಳು ಸಾಂದರ್ಭಿಕವಾಗಿ ದುರುಪಯೋಗ ಪಡಿಸಿಕೊಂಡು ನಮ್ಮ ಸಮಾಜಕ್ಕೆ ಕೆಟ್ಟ ಹೆಸರನ್ನು ತರಲು ಪ್ರಯತ್ನಿಸುತ್ತವೆ ಎಂಬ ಅರಿವನ್ನು ನಮ್ಮ ಸಮಾಜದ ಯುವಕರು ಅರ್ಥ ಮಾಡಿಕೊಳ್ಳಬೇಕು ಎಂದು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕಿವಿಮಾತು ಹೇಳಿದ್ದಾರೆ.

### ಬೆಳ್ಳೂಡಿ ಮಠಕ್ಕೆ ಪೀರನವಾಡಿ ಗ್ರಾಮಸ್ಥರು

**ಮಠಕ್ಕೆ ಭೇಟಿ :** ಬೆಳಗಾವಿ ಜಿಲ್ಲೆಯ ಪೀರನವಾಡಿ ಗ್ರಾಮಸ್ಥರು ಬುಧವಾರ ಬೆಳ್ಳೂಡಿ ಶಾಖಾ ಮಠಕ್ಕೆ ಭೇಟಿ ನೀಡಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿ ಪ್ರತಿ ಷ್ಠಾಪನೆ ವಿವಾದದ ಬಗ್ಗೆ ಶ್ರೀಗಳ ಜೊತೆ ಚರ್ಚಿಸಿದರು, ಏನೇ ಸಮಸ್ಯೆಗಳಿದ್ದರೂ ಕೂಡ ಕಾನೂನಾತ್ಮಕವಾಗಿ ಮತ್ತು ಶಾಂತಿ, ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳುವಂತೆ ಶ್ರೀಗಳು ಕಿವಿ ಮಾತು ಹೇಳಿದರು.

ದಸರಾ ಹಬ್ಬದ ಪ್ರಯುಕ್ತ ಮೆಕ್ಯಾನಿಕ್‌ಗಳಿಗೆ ಸುವರ್ಣಾವಕಾಶ
ಹೆಚ್.ಪಿ. ಬ್ರಾಂಡೆಡ್ ಕಂಪನಿಯ ಎಲ್ಲಾ ತರಹದ ಆಯಿಲ್ ಮತ್ತು ಗ್ರೀಸ್ ಡೀಲರ್ ಕಮೀಷನ್ ಹೊರತುಪಡಿಸಿ ಕಡಿಮೆ ದರದಲ್ಲಿ ಸಿಗುತ್ತದೆ. ತಕ್ಷಣ ಸಂಪರ್ಕಿಸಿ :
ಶಂಕರ ಲೀಲಾ ಪೆಟ್ರೋಲ್ ಬಂಕ್
ಆವರಗೆರೆ – ದಾವಣಗೆರೆ.
ಮೊ. 90190-94446
* Conditions appply

ಶುಕ್ರವಾರದಿಂದ ಪುನರಾರಂಭ
ಕರಾವಳಿ ಮತ್ಸ್ಯ ದರ್ಶಿನಿ
ಫಿಶ್ ಲ್ಯಾಂಡ್
ಎಲ್ಲಾ ರೀತಿಯ ಮೀನಿನ ಊಟ, ಫಿಶ್ ಫ್ರೈ, ಫಿಶ್ ಮಸಾಲ ಹಾಗೂ ಎಲ್ಲಾ ತರಹದ ಸಮುದ್ರ ಮೀನುಗಳ ಊಟ ದೊರೆಯುತ್ತದೆ.
MATSYA SIRI
ತಾಜಾ ಮೀನುಗಳು ಮಾರಾಟ ಕೇಂದ್ರ
ಎಲ್ಲಾ ಜಾತಿ ಮೀನುಗಳು ಮಾರಾಟಕ್ಕೆ ಲಭ್ಯವಿರುತ್ತವೆ.
ಸಿದ್ದವೀರಪ್ಪ ಬಡಾವಣೆ, 2ನೇ ಕ್ರಾಸ್, BIET ಕಾಲೇಜ್ ಮೇನ್ ರೋಡ್, ದಾವಣಗೆರೆ-577004
ಫೋ: 90083 46784, 83108 68389

## ಜಿಲ್ಲಾಡಳಿತದಿಂದ ನಾರಾಯಣ ಗುರುಗಳ ಜಯಂತಿ ಸರಳ ಆಚರಣೆ



ದಾವಣಗೆರೆ, ಸೆ.2- ಜಿಲ್ಲಾಡಳಿತದ ಸಹಯೋಗದೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಆಯೋಜಿಸಲಾಗಿದ್ದ ಶ್ರೀ ನಾರಾಯಣ ಗುರುಗಳ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ದೀಪಾ ಜಗದೀಶ್, ಉಪಾಧ್ಯಕ್ಷರಾದ ಶ್ರೀಮತಿ ಸಾಕಮ್ಮ ಗಂಗಾಧರನಾಯ್ಕ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಆರ್ಯ ಈಡಿಗ ಸಮಾಜದ ಅಧ್ಯಕ್ಷ ಹೆಚ್.ಶಂಕರ್, ಕಾರ್ಯದರ್ಶಿ ಎ. ನಾಗರಾಜ್, ಖಜಾಂಚಿ ಇ.ದೇವೇಂದ್ರಪ್ಪ, ಜಂಟಿ ಕಾರ್ಯದರ್ಶಿ ಭರಮಪ್ಪ, ಸದಸ್ಯರಾದ ಗೋವಿಂದರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮತ್ತಿತರರು ಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

## ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿ

ದಾವಣಗೆರೆ, ಸೆ.2- ಗೊತ್ತುಪಡಿಸಿದ ಬೆಳೆಗಳಲ್ಲಿ ಅತ್ಯುತ್ತಮ ಇಳುವರಿ ಪಡೆಯುವ ರೈತರಿಗೆ ಪ್ರಶಸ್ತಿಗಳನ್ನು ನೀಡುವ ಕಾರ್ಯಕ್ರಮವಿದ್ದು, ಬೆಳೆ ಸ್ಪರ್ಧೆಗಳಿಗೆ ಆಸಕ್ತ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ಕೊನೆಯ ದಿನವಾಗಿದೆ. ವಿವರಕ್ಕೆ ಜಿಲ್ಲೆಯ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಲು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ನಗರಕ್ಕೆ ಇಂದು ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ

ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಗೀತಾ ವಿವೇಕಾನಂದ ಅವರು ಇಂದು ನಗರಕ್ಕೆ ಆಗಮಿಸಲಿದ್ದು, ಬೆಳಿಗ್ಗೆ 11 ಗಂಟೆಗೆ ಪಕ್ಷದ ಕಚೇರಿಯಲ್ಲಿ ಏರ್ಪಾಡಾಗಿರುವ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ಸವಿತಾ ರವಿಕುಮಾರ್ ತಿಳಿಸಿದ್ದಾರೆ.

## ರಾಣೇಬೆನ್ನೂರು : ಇಂದು ವಿದ್ಯುತ್ ಇಲ್ಲ

ಹಲಗೇರಿ ರಸ್ತೆ ಅಗಲೀಕರಣ ಪ್ರಯುಕ್ತ 220/110 ಕೆ.ವಿ ಉಪ-ಕೇಂದ್ರ ದಿಂದ ಹೊರಡುವ 33 ಕೆವಿ ಆರ್.ಎಸ್.ಎನ್.ಜಿ. ಮಾರ್ಗದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಆತ್ಮೀಯ ಗೆಳೆಯನಿಗೆ ನಮನ



**ಇಂಜಿನಿಯರ್ ಬೆಳಗಾವಿ ವಿಜಯ್‌ಕುಮಾರ್**

ನಿಧನ : 31.08.2020

ಅಗಲಿದ ಆತ್ಮೀಯ ಗೆಳೆಯನ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

❖ ಮಹೇಶ್ ಆರ್ ಉಪ್ಪಿನ್
ಅಡ್ವೊಕೇಟ್, ಬೆಂಗಳೂರು ಮತ್ತು ಕುಟುಂಬ.

## ಪುರಸಭೆ ಆರೋಗ್ಯ ನಿರೀಕ್ಷಕರಿಗೆ ಸೋಂಕು

ಮಲೇಬೆನ್ನೂರು, ಸೆ. 2 - ಹೋಬಳಿಯಲ್ಲಿ ಇಂದು 10 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢ ಪಟ್ಟಿವೆ. ಇಲ್ಲಿನ ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕ ಸೇರಿದಂತೆ ಪಟ್ಟಣದಲ್ಲಿ ಮೂವರಿಗೆ, ಭಾಸ್ಕರ್‌ರಾವ್ ಕ್ಯಾಂಪ್‌ನಲ್ಲಿ ಮೂವರಿಗೆ, ಉಕ್ಕಡಗಾತ್ರಿ, ಬಿಳಸನೂರು, ಕೆ.ಎನ್. ಹಳ್ಳಿ ಮತ್ತು ಹರಳಹಳ್ಳಿಯಲ್ಲಿ ತಲಾ ಒಬ್ಬರಿಗೆ ಸೋಂಕು ಕಾಣಿಸಿಕೊಂಡಿದೆ.

## ಆರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ
**ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.

ದಿ. : 31.08.2020 ನೇ ಸೋಮವಾರ
ಬೆಳಗಿನ ಜಾವ 4.30ಕ್ಕೆ ನನ್ನ ಪತಿಯವರಾದ

**ಶ್ರೀ ಬಿ. ಓಂಕಾರಪ್ಪ,** ವಕೀಲರು

ಇವರು ನಿಧನರಾದ ಪ್ರಯುಕ್ತ

**ಆರಾಧನೆಯನ್ನು**

**ದಿನಾಂಕ : 04.09.2020ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ದೊಡ್ಡಬಾತಿ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು, ಅಳಿಯಂದಿರು, ಭರ್ಮಜ್ಜರ ವಂಶಸ್ಥರು ಹಾಗೂ ಬಂಧುಗಳು, ದೊಡ್ಡಬಾತಿ. 97390 68512

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

॥ ಶ್ರೀ ಮಹಾಲಸಾ ಪ್ರಸನ್ನ ॥

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾಲ್ಲೂಕು ಮಲೇಬೆನ್ನೂರು ಟೌನ್ ಇಂದಿರಾ ನಗರ ವಾಸಿ

**ಶ್ರೀ ರಾಜು ಮಧುಕರ್ ವರ್ಣೇಕರ್**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 22.08.2020ರ ಶನಿವಾರ ಬೆಳಗಿನ ಜಾವ 3.00 ಗಂಟೆಗೆ ನನ್ನ ಧರ್ಮಪತ್ನಿ

**ಶ್ರೀಮತಿ ಸುಮಾ ರಾಜು ಮಧುಕರ್ ವೆರ್ಣೇಕರ್**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ವೈಕುಂಠ ಸಮಾರಾಧನೆ"ಯನ್ನು**

**ದಿನಾಂಕ : 04.09.2020ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಮಲೇಬೆನ್ನೂರು ಪಟ್ಟಣದಲ್ಲಿರುವ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.**


ಇಂತಿ ದುಃಖತಪ್ತರು :

**ಶ್ರೀಮತಿ ಅನುಸೂಯ ಮಧುಕರ್ ವೆರ್ಣೇಕರ್ ಮತ್ತು ಮಕ್ಕಳು, ಅಳಿಯಂದಿರು ಮೊಮ್ಮಕ್ಕಳು, ತುಮ್ಮಿನಕಟ್ಟೆ ವೆರ್ಣೇಕರ್ ವಂಶಸ್ಥರು ಹಾಗೂ ಬಂಧು-ಮಿತ್ರರು**

**ಶ್ರೀ ಗುರುಕೃಪ ಜ್ಯುವೆಲರಿ ವರ್ಕ್ಸ್**

**(ತುಮ್ಮಿನಕಟ್ಟೆ ರಾಜಣ್ಣ ಬೆಳ್ಳಿ-ಬಂಗಾರದ ಅಂಗಡಿ), ಮಲೇಬೆನ್ನೂರು.**

ವಿ.ಸೂ. : ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಮುದ್ರಿಸಿರುವುದಿಲ್ಲ, ಕಾರಣ ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte